ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 49 | ಡಿಸೆಂಬರ್ 03–09, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಜನವಿಜ್ಞಾನ ಚಳುವಳಿಯ ನಾಯಕ

ಡಾ. ಅಮಿತ್ ಸೇನ್ ಗುಪ್ತಾ ಲಾಲ್ ಸಲಾಂ!











ವಿಶೇಷ ಸಂಸತ್ ಅಧಿವೇಶನ ನಡೆಸಿ

ದೆಹಲಿಯಲ್ಲಿ ಲಕ್ಷಾಂತರ ರೈತರ ಕೂಗು



ಬರ ಪರಿಹಾರ ತುರ್ತಾಗಿ ಕೈಗೊಳ್ಳಿ



ಅಂಬರೀಷ್ ಸಾವಿನ ಸುತ್ತ...



ಕರ್ತಾರಪುರದ ಸೌಹಾರ್ದ ಸಾಧ್ಯತೆಗಳು



ರಾಜಸ್ತಾನ, ತೆಲಂಗಾಣ – 3ನೇ ರಂಗ



ಕಾರ್ಮಿಕ ಮಂತ್ರಾಲಯದ ಸಭೆಗೆ ಕೇಂದ್ರ ಕಾರ್ಮಿಕ ಸಂಘಗಳ ಬಹಿಷ್ಕಾರ

70 ಪುಟಗಳ ದಸ್ತಾವೇಜನ್ನು ಚರ್ಚಿಸಬೇಕಾದ ನ. 22 ರ ಸಭೆಗೆ 20ರ ಸಂಜೆ ಮಾಹಿತಿ!

'ವೃತ್ತಿ ಸಂಬಂಧಿ ಸುರಕ್ಷಿತತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳನ್ನು ಕುರಿತ ಕಾರ್ಮಿಕ ಸಂಹಿತೆ, 2018' ಇದನ್ನು ಚರ್ಚಿಸಲು ನವಂಬರ್ 22ರಂದು ಕಾರ್ಮಿಕ ಮಂತ್ರಿಗಳ ಕಚೇರಿಯಲ್ಲಿ ಏರ್ಪಡಿಸಿದ ಸಭೆಯ ಬಗ್ಗೆ ಕೇಂದ್ರ ಕಾರ್ಮಿಕ ಸಂಘಗಳಿಗೆ ಮಾಹಿತಿ ಸಿಕ್ಕಿದ್ದು ನವಂಬರ್ 20ರ ಸಂಜೆ 4.02 ಕ್ಕಷ್ಟೇ. ಅಗ ಇಲಾಖೆಯ ಅಪರ ಕಾರ್ಯದರ್ಶಿ ಜೆ ಕೆ ಸಿಂಗ್ ಸಹಿ ಹಾಕಿದ ಪತ್ರವನ್ನು ಕಳಿಸಲಾಗಿದೆ ಎಂದು ಇ-ಮೇಲ್ ಮೂಲಕ ತಿಳಿಸಲಾಯಿತು. ನವಂಬರ್ 9 ರ ಪತ್ರ ಕೇಂದ್ರ ಕಾರ್ಮಿಕ ಸಂಘಗಳಕೈಸೇರಿದ್ದು ಕೂಡ ನವಂಬರ್ 20ರಂದೇ.

ಈ ಹಿನ್ನೆಲೆಯಲ್ಲಿ ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ನವಂಬರ್ 20ರಂದೇ ಒಂದು ಜಂಟಿ ಪತ್ರವನ್ನು ಕಾರ್ಮಿಕ ಮಂತ್ರಿ ಸಂತೋಷ್ ಗಂಗ್ವಾರ್‌ರವರಿಗೆ ಬರೆದು ನವಂಬರ್ 22ರ ಸಭೆಗೆ ತಾವು ಬರುತ್ತಿಲ್ಲ ಎಂದು ತಿಳಿಸಿವೆ. ಆ ಪತ್ರದಲ್ಲಿ ಅದಕ್ಕೆ ಮೂರು ಕಾರಣಗಳನ್ನು ಕೊಡಲಾಗಿದೆ.

ಮೊದಲನೆಯದಾಗಿ, ತ್ರಿಪಕ್ಷೀಯ ಸಮಾಲೋಚನೆಗಳನ್ನು ಒಂದು ಗೊಡ್ಡು ಆಚರಣೆಯ ಮಟ್ಟಕ್ಕೆ ಇಳಿಸಲಾಗಿದೆ ಎಂದಿರುವ ಕೇಂದ್ರ ಕಾರ್ಮಿಕ ಸಂಘಟನೆಗಳು ಇದನ್ನು ಸಹಿಸಲು ಸಾಧ್ಯವಿಲ್ಲ ಎಂದು ಪತ್ರದಲ್ಲಿ ಹೇಳಿವೆ.

ಎರಡನೆಯದಾಗಿ, ಕೈಗಾರಿಕೆಗಳಲ್ಲೂ, ಸೇವಾ ವಲಯದಲ್ಲೂ ವಿಭಿನ್ನ ಕ್ಷೇತ್ರಗಳಲ್ಲಿ ಮತ್ತು ವೃತ್ತಿಗಳಲ್ಲಿ ವೃತ್ತಿ ಸಂಬಂಧಿ ಆರೋಗ್ಯ ಮತ್ತು ಸುರಕ್ಷಿತತೆಯಂತಹ ಒಂದು ಗಂಭೀರ ವಿಷಯದ ಮೇಲಿನ 13 ವಿವಿಧ ಕಾನೂನುಗಳನ್ನು ತಿದ್ದುಪಡಿ ಮಾಡುವ ಪರಿಕಲ್ಪನೆಯನ್ನೇ ತಾವು ವಿರೋಧಿಸುವುದಾಗಿ ಕಾರ್ಮಿಕ ಸಂಘಟನೆಗಳು ಹೇಳಿವೆ. ಈ ಪ್ರಶ್ನೆಗಳು ಕೈಗಾರಿಕಾ ವಲಯದೊಳಗಿನ ವಿವಿಧ ಕೈಗಾರಿಕೆಗಳಲ್ಲಿ ಮತ್ತು ಸೇವಾವಲಯದಲ್ಲೂ ವಿಭಿನ್ನವಾಗಿವೆ. ಈ ಕುರಿತ 70 ಪುಟಗಳ ದಸ್ತಾವೇಜಿನ ಮೇಲೆ ಸಮಾಲೋಚನೆಗೆ ಕೇವಲ ಒಂದೂವರೆ ದಿನದ ಅಲ್ಪಕಾಲಿಕ ಸೂಚನೆಯಲ್ಲೇ ಹಾಜರಾಗಬೇಕೆಂಬ ಮಂತ್ರಾಲಯದ ಕರೆಗೆ ಸ್ಪಂದಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಕಾರ್ಮಿಕ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಸ್ಪಷ್ಟಗೊಳಿಸಿವೆ.

ಮೂರನೆಯದಾಗಿ, ಈ ಬಾರಿಯೂ ಐಎನ್‌ಟಿಯುಸಿಯನ್ನು ಈ ಸಮಾಲೋಚನೆಗಳಿಗೆ ಆಹ್ವಾನಿಸಿದಂತಿಲ್ಲ. ದೇಶದ ಅತಿ ದೊಡ್ಡ ಕೇಂದ್ರೀಯ ಕಾರ್ಮಿಕ ಸಂಘಟನೆಯನ್ನು ಸಮಾಲೋಚನೆಗಳಿಗೆ ಆಹ್ವಾನಿಸದಿರುವ ಈ ಸರಕಾರದ ನಿಲುವನ್ನು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತೆ-ಮತ್ತೆ ಪ್ರತಿಭಟಿಸಿವೆ. ಆದರೂ ಕಾರ್ಮಿಕ ಮಂತ್ರಾಲಯ ಇದನ್ನು ಮುಂದುವರೆಸಿದೆ. ಇಂತಹ ಪಕ್ಷಪಾತದ ಮತ್ತು ಹಗೆ ಸಾಧಿಸುವ ಪ್ರವೃತ್ತಿಯನ್ನು ಕೇಂದ್ರ ಕಾರ್ಮಿಕ ಸಂಘಟನೆಗಳು ಒಪ್ಪಲು ಸಾಧ್ಯವಿಲ್ಲ ಎಂದೂ ಈ ಪತ್ರದಲ್ಲಿ ಸ್ಪಷ್ಟಪಡಿಸಲಾಗಿದೆ.

ಈ ಎಲ್ಲ ಕಾರಣಗಳಿಂದಾಗಿ ತಾವು ಈ ಸಮಾಲೋಚನಾ ಸಭೆಯಲ್ಲಿ ಭಾಗವಹಿಸುತ್ತಿಲ್ಲ ಎಂದು ಈ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಒತ್ತಿ ಹೇಳಿವೆ.

ಬಿಎಸ್‌ಎನ್‌ಎಲ್ ಉಳಿಸಲು ಅನಿರ್ದಿಷ್ಟ ಕಾಲದ ಮುಷ್ಕರ

ಬಿಎಸ್‌ಎನ್‌ಎಲ್ ನೌಕರರು ಮತ್ತು ಅಧಿಕಾರಿಗಳ ಎಲ್ಲ ಸಂಘಟನೆಗಳು ಒಟ್ಟಾಗಿ ಎಯುಎಬಿ ಎಂಬ ಐಕ್ಯ ವೇದಿಕೆಯನ್ನು ರಚಿಸಿಕೊಂಡು ಅದರ ನೇತೃತ್ವದಲ್ಲಿ ಡಿಸೆಂಬರ್ 3ರಿಂದ ಅನಿರ್ದಿಷ್ಟ ಕಾಲದ ಮುಷ್ಕರವನ್ನು ನಡೆಸಲು ನಿರ್ಧರಿಸಿದ್ದಾರೆ.

ಬಿಎಸ್‌ಎನ್‌ಎಲ್ 4 ಜಿ ಸೇವೆಗಳನ್ನು ಕೊಡಲು ಸಾಧ್ಯವಾಗುವಂತೆ ತಕ್ಷಣವೇ 4ಜಿ ತರಂಗ ಶ್ರೇಣಿಯನ್ನು ಒದಗಿಸಬೇಕು, ಪೆನ್ಶನ್ ದೇಣಿಗೆ ಕುರಿತಂತೆ ಸರಕಾರೀ ನಿಯಮವನ್ನು ಬಿಎಸ್‌ಎನ್‌ಎಲ್‌ನಲ್ಲಿ ಜಾರಿಗೆ ತರಬೇಕು, 1.1.2017ರಿಂದ ಬಾಕಿಯಿರುವ ವೇತನ ಪರಿಷ್ಕರಣೆ ಮತ್ತು ಪೆನ್ಶನ್ ಪರಿಷ್ಕರಣೆಯನ್ನು ಮಾಡಬೇಕು ಎಂಬುದು ಈ ಮುಷ್ಕರದ ಮುಖ್ಯ ಬೇಡಿಕೆಗಳಾಗಿವೆ.

ದೂರಸಂಪರ್ಕ ವಲಯ ಈಗ ಬಿಕ್ಕಟ್ಟಿಗೆ ಒಳಗಾಗಿದೆ. ದೊಡ್ಡ ಖಾಸಗಿ ಕಂಪನಿಗಳು ಸಾಲಗ್ರಸ್ತವಾಗಿವೆ, ಒಟ್ಟು ಸಹಲ ಕೋಟಿ ರೂ.ಗಳು. ಸಣ್ಣ ಖಾಸಗಿ ಕಂಪನಿಗಳು ಕೆಲವು ಮುಚ್ಚಿಯೇ ಹೋಗಿವೆ. ಇದಕ್ಕೆಲ್ಲ ಕಾರಣ ಭಾರೀ ಹಣಬಲವಿರುವ ಮುಕೇಶ್ ಅಂಬಾನಿಯ ರಿಲಯನ್ಸ್ ಜಿಯೋ ವೆಚ್ಚಕ್ಕಿಂತ ಕಡಿಮೆ ದರಗಳನ್ನು ಪ್ರಕಟಿಸಿರುವುದು, ಆಮೂಲಕ ಪ್ರತಿಸ್ಪರ್ಧೆಯನ್ನು ನಿರ್ನಾಮ ಮಾಡುವ, ಒಮ್ಮೆ ಸ್ಪರ್ಧೆಯಿಲ್ಲ ಎಂದಾದ ಮೇಲೆ ಮನಬಂದಂತೆ ದರಗಳನ್ನು ವಿಧಿಸಬಹುದು ಎಂಬ ತಂತ್ರವನ್ನು ಅವಲಂಬಿಸಿರುವುದು. ದುರದೃಷ್ಟವಶಾತ್ ಇದಕ್ಕೆ ಮೋದಿ ಸರಕಾರದ ಕೃಪಾಪೋಷಣೆ ದೊರೆತಿದೆ, ಇದು ಸರ್ಕಾರಿ ಒಡೆತನದ ಬಿಎಸ್‌ಎನ್‌ಎಲ್‌ನ್ನೂ ಬಹುವಾಗಿ ತಟ್ಟಿದೆ ಎಂದು ಇಲ್ಲಿನ ನೌಕರ ಸಂಘಗಳು ಹೇಳಿವೆ.

ಇದನ್ನು ಸರಕಾರದ ಗಮನಕ್ಕೆ ತಂದ ಹಿರಿಯ ಐಎಎಸ್ ಅಧಿಕಾರಿ, ದೂರ ಸಂಪರ್ಕ ಇಲಾಖೆಯ ಕಾರ್ಯದರ್ಶಿಯಾಗಿದ್ದ ಜೆ.ಎಸ್.ದೀಪಕ್‌ರವರನ್ನು ಬೇರೆ ಇಲಾಖೆಗೆ ವರ್ಗ ಮಾಡಲಾಗಿದೆ. ರಿಲಯನ್ಸ್ ಜಿಯೊಗೆ ನೆರವಾಗಲು ಬಿಎಸ್‌ಎನ್‌ಎಲ್ ರೆಕ್ಕೆಗಳನ್ನು ಕತ್ತರಿಸುವ ದುಷ್ಟ ಹುನ್ನಾರ ನಡೆದಿದೆ. ಬೇರೆಲ್ಲ ಖಾಸಗಿ ಕಂಪನಿಗಳಿಗೆ 4ಜಿ ತರಂಗಾಂತರವನ್ನು ಕೊಟ್ಟರೂ, ಬಿಎಸ್‌ಎನ್‌ಎಲ್‌ಗೆ ಅದನ್ನು ನಿರಾಕರಿಸಲಾಗಿದೆ. ಇದಕ್ಕಾಗಿ ಕಳೆದ ಒಂದು ವರ್ಷದಿಂದ ಎಯುಎಬಿ ಸರಕಾರಕ್ಕೆ ಮನವಿಗಳನ್ನು ಸಲ್ಲಿಸುತ್ತ ಬಂದಿದೆ. ಆದರೆ ಸರಕಾರ ಉದ್ದೇಶಪೂರ್ವಕವಾಗಿಯೇ ಕಿವುಡಾಗಿದೆ, ರಿಲಯನ್ಸ್ ಜಿಯೋಗೆ ಸಾರ್ವಜನಿಕ ವಲಯದಿಮದ ಪರಿಣಾಮಕಾರಿ ಸ್ಪರ್ಧೆ ಇಲ್ಲದಂತೆ ಮಾಡುವುದೇ ಇದರ ಹಿಂದಿರುವ ದುರುದ್ದೇಶ ಎಂದಿರುವ ನೌಕರರ, ಅಧಿಕಾರಿಗಳ ಸಂಘಟನೆಗಳು ಇದರ ವಿರುದ್ಧ ತೀವ್ರ ಹೋರಾಟಕ್ಕೆ ಇಳಿದಿವೆ.

2011-12ರಲ್ಲಿ 8800 ಕೋಟಿ ರೂ.ನಷ್ಟದಲ್ಲಿದ್ದ ಬಿಎಸ್‌ಎನ್‌ಎಲ್, 4ಜಿ ಕೊಡದಿದ್ದರೂ, 2ಜಿ, 3ಜಿ ತರಂಗಾಂತರಗಳಿಂದಲೇ, ನೌಕರರು, ಅಧಿಕಾರಿಗಳು ಮತ್ತು ಆಡಳಿತ ಮಂಡಳಿಯ ಪರಿಶ್ರಮಗಳಿಂದಾಗಿ 2016-17ರಲ್ಲಿ ನಷ್ಟಗಳನ್ನೆಲ್ಲ ನಿವಾರಿಸಿಕೊಂಡು 1684 ಕೋಟಿ ರೂ.ಗಳ ಲಾಭ ಮಾಡಿದೆ. ಬಳಕೆದಾರರ ಸಂಖ್ಯೆಯಲ್ಲಿ, ಎಲ್ಲ ಖಾಸಗಿ ಕಂಪನಿಗಳನ್ನು ಹಿಂದಕ್ಕೆ ಹಾಕಿ 11.5% ಹೆಚ್ಚಳ ಸಾಧಿಸಿದೆ. 4ಜಿ ತರಂಗಾಂತರ ಕೊಟ್ಟಿದ್ದರೆ ಇದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿರುತ್ತಿತ್ತು ಎಂದು ಎಯುಎಬಿ ಹೇಳಿದೆ.

ಇದಲ್ಲದೆ ಮೋದಿ ಸರಕಾರ ಪೆನ್ಶನ್ ದೇಣಿಗೆಗಳ ಹೆಸರಿನಲ್ಲಿ ಬಿಎಸ್‌ಎನ್‌ಎಲ್‌ನ್ನು ಹಿಂಡುತ್ತಿದೆ. ಇವನ್ನೆಲ್ಲ ಸರಕಾರದ ಗಮನಕ್ಕೆ ತರಲು ಕಳೆದ ಎರಡು ವರ್ಷಗಳಿಂದಲೂ ಸತತ ಪ್ರಯತ್ನ ಪಟ್ಟರೂ ಅದು ಕಿವಿಗೊಡದಿರುವ ಹಿನ್ನೆಲೆಯಲ್ಲಿ ಈ ಅನಿರ್ದಿಷ್ಟ ಕಾಲದ ಮುಷ್ಕರಕ್ಕೆ ಇಳಿಯಬೇಕಾಗಿದೆ ಎಂದು ನೌಕರರ ಮತ್ತು ಅಧಿಕಾರಿಗಳ ಸಂಘಟನೆಗಳು ಹೇಳಿವೆ.

ಸಿಐಟಿಯು ಬಿಎಸ್‌ಎನ್‌ಎಲ್ ನೌಕರರ, ಅಧಿಕಾರಿಗಳ ಈ ಹೋರಾಟಕ್ಕೆ ಸಂಪೂರ್ಣ ಬೆಂಬಲ, ಸೌಹಾರ್ದ ವ್ಯಕ್ತಪಡಿಸಿದೆ.

"ಜಮ್ಮು ಮತ್ತು ಕಾಶ್ಮೀರ: ಬಿಜೆಪಿಯ ಹುನ್ನಾರ ರಾಜ್ಯದ ಜನತೆಯೆದುರು ಬಯಲಾಗಿದೆ"

"ಇನ್ನೊಮ್ಮೆ ಸ್ಪಷ್ಟಪಡಿಸಬಯಸುತ್ತೇನೆ-ದಿಲ್ಲಿಯ ಕಡೆ ನೋಡಿದ್ದರೆ (ಸಜ್ಜದ್) ಲೋನ್ ಸರಕಾರವನ್ನು ಮಾಡಬೇಕಾಗುತ್ತಿತ್ತು; ನಾನು ಇತಿಹಾಸದಲ್ಲಿ ಒಬ್ಬ ಅಪ್ರಾಮಾಣಿಕ ವ್ಯಕ್ತಿಯಾಗಿ ಬಿಡುತ್ತಿದ್ದೆ. ಆದ್ದರಿಂದ ನಾನು ಈ ವಿಷಯವನ್ನೇ ಮುಗಿಸಿಬಿಟ್ಟೆ" ಎಂದು ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರು ಹೇಳಿರುವುದು ಬಿಜೆಪಿ ಈ ರಾಜ್ಯದಲ್ಲಿ ಯಾವ ಮಾರ್ಗವನ್ನಾದರೂ ಹಿಡಿದು ತನ್ನ ಸರಕಾರವನ್ನು ಹೇರಲು ಹತಾಶ ಪ್ರಯತ್ನ ನಡೆಸುತ್ತಿತ್ತು ಎಂಬ ಜನಗಳ ಭೀತಿಯನ್ನು ಸಾಬೀತು ಮಾಡಿದೆ ಎಂದು ಸಿಪಿಐ(ಎಂ)ನ ಜಮ್ಮು ಮತ್ತು ಕಾಶ್ಮೀರ ರಾಜ್ಯ ಸಮಿತಿ ಹೇಳಿದೆ.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯನ್ನು ಅವಾನತಿನಲ್ಲಿಟ್ಟದ್ದು ಇದಕ್ಕಾಗಿಯೇ. ಅವರು ಕುದುರೆ ವ್ಯಾಪಾರದಲ್ಲಿ ತೊಡಗಿದ್ದರು ಎಂಬ ಸಂಗತಿ ಈಗ ಬಟ್ಟ ಬಯಲಾಗಿದೆ. ಕೇಂದ್ರದ ಪ್ರತಿನಿಧಿಯೇ ಇದನ್ನು ಬಯಲಿಗೆ ತಂದಿದ್ದಾರೆ ಎಂದು ಸಿಪಿಐ(ಎಂ) ಹೇಳಿದೆ.

ಕಳೆದ ವಾರ ನ್ಯಾಶನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಬೆಂಬಲದಿಂದ ಸರಕಾರ ರಚಿಸುವುದಾಗಿ ಪಿಡಿಪಿ ರಾಜ್ಯಪಾಲರ ಮುಂದೆ ದಾವೆ ಸಲ್ಲಿಸಿತ್ತು. ಪಕ್ಷೇತರ ಶಾಸಕರಾದ ಸಜ್ಜದ್ ಲೋನ್ ತಾನು ಬಿಜೆಪಿ ಮತ್ತು 18 ಶಾಸಕರ ಬೆಂಬಲದಿಂದ ಸರಕಾರ ರಚಿಸುವುದಾಗಿ ದಾವೆ ಹಾಕಿದ್ದರಂತೆ. ರಾಜ್ಯಪಾಲರು ವಿಧಾನಸಭೆಯನ್ನೇ ವಿಸರ್ಜಿಸಿದರು.

ಈಗ ರಾಜ್ಯದಲ್ಲಿ ಬಿಜೆಪಿಗೆ ಏನು ಬೇಕಿತ್ತು ಎಂಬುದು ಇಲ್ಲಿನ ಜನತೆಯ ಮುಂದೆ ಸ್ಪಷ್ಟವಾಗಿದೆ. ಜಮ್ಮು ಮತ್ತು ಕಾಶ್ಮೀರದ ಜನತೆ ಸದಾ ಕೋಮುವಾದಿ ಶಕ್ತಿಗಳ ವಿಭಜನಕಾರಿ ತಂತ್ರಗಳನ್ನು ತಿರಸ್ಕರಿಸಿದ್ದಾರೆ, ಮುಂದೆಯೂ ತಿರಸ್ಕರಿಸುತ್ತಾರೆ ಎಂದು ಸಿಪಿಐ(ಎಂ) ಹೇಳಿದೆ.

ಈ ನಡುವೆ ರಾಜ್ಯಪಾಲರು ತಮ್ಮ ಮೇಲೆ ಕೇಂದ್ರ ಸರಕಾರದ ಒತ್ತಡ ಇರಲಿಲ್ಲ ಎಂದೂ 'ಸ್ಪಷ್ಟೀಕರಣ' ನೀಡಿದ್ದಾರೆ ಎಂದು ವರದಿಯಾಗಿದೆ. ಅದಾದ ನಂತರ ತನಗೆ ಹುದ್ದೆ ಕಳಕೊಳ್ಳುವ ಭೀತಿಯೇನೂ ಇಲ್ಲ, ಆದರೆ ವರ್ಗಾವಣೆಯ ಬೆದರಿಕೆ ಇರುವುದಾಗಿ ಹೇಳಿರುವುದಾಗಿಯೂ ವರದಿಯಾಗಿದೆ.

ಕಾಂಗ್ರೆಸ್ ಮುಖಂಡ ಆಂಟನಿ ಬಿಜೆಪಿ ಬೆಳೆಯಲು ನೆರವಾಗುತ್ತಿದ್ದಾರೆ-ಪಿಣರಾಯಿ ವಿಜಯನ್

"ಹಗಲಲ್ಲಿ ಕಾಂಗ್ರೆಸ್, ಕತ್ತಲಾಗುತ್ತಿದ್ದಂತೆ ಬಿಜೆಪಿ ಎಂಬಂತಹ ಕಾಂಗ್ರೆಸಿಗರ ಪ್ರತಿನಿಧಿಯಾಗುತ್ತಿದ್ದಾರೆ"

ಹಿರಿಯ ಕಾಂಗ್ರೆಸ್ ಮುಖಂಡ ಎ.ಕೆ.ಆಂಟನಿ ಶಬರಿಮಲೆಯಲ್ಲಿ ಕೋಲಾಹಲಕ್ಕೆ ಮುಖ್ಯಮಂತ್ರಿಗಳು ಮತ್ತು ಡಿಜಿಪಿ ಹೊಣೆ ಎಂದಿರುವುದು ದ್ವೇಷದ ಆಶಯವನ್ನು ಹೊಂದಿರುವ ಹೇಳಿಕೆಯೆಂದು ಪರಿಗಣಿಸಬೇಕಾದ ಹೇಳಿಕೆ ಎಂದು ಕೇರಳ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಪಿಣರಾಯಿ ವಿಜಯನ್ ಹೇಳಿದ್ದಾರೆ. ಈ ಮೂಲಕ ಆಂಟನಿ ಕೇರಳದಲ್ಲಿ ಬಿಜೆಪಿ ಬೆಳೆಯಲು ನೆರವು ಸಲ್ಲಿಸುತ್ತಿದ್ದಾರೆ ಎಂದು ಅವರು ಟೀಕಿಸಿದ್ದಾರೆ. ಇದು ಸರಕಾರದ ಬಗ್ಗೆ ಜನಗಳನ್ನು ದಾರಿ ತಪ್ಪಿಸುವ ತಂತ್ರವಾಗಿದೆ, ನಿಜಸಂಗತಿಯೆಂದರೆ, ಕಾಂಗ್ರೆಸ್ ಪಕ್ಷ ಸಂಘ ಪರಿವಾರದ ಆಕ್ರಮಣವನ್ನು ಖಂಡಿಸದಿರುವುದು, ಈ ಶಕ್ತಿಗಳಿಗೆ ಉತ್ತೇಜನ ನೀಡುತ್ತಿದೆ ಎಂದು ಅವರು ಹೇಳಿದ್ದಾರೆ.

ನಾಗರಿಕ ಸಮಾಜ ಮತ್ತು ನ್ಯಾಯಾಂಗ ಇವೆರಡೂ ನಿಜವಾದ ಅಯ್ಯಪ್ಪ ಭಕ್ತರುಗಳನ್ನು ರಕ್ಷಿಸುವುದು ಮತ್ತು ಅವರಿಗೆ ಪೂಜೆಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸುವುದು ಸರಕಾರದ ಗುರಿ ಎಂಬುದನ್ನು ಸ್ವೀಕರಿಸಿವೆ. ನ್ಯಾಯಾಲಯ, ಭಕ್ತರಿಗೆ ರಕ್ಷಣೆಯನ್ನು ಲಭ್ಯಗೊಳಿಸುವ ಹೊಣೆ ಪೋಲೀಸರ ಮೇಲಿದೆ, ಮತ್ತು ಅವರಿಗೆ ಶಬರಿಮಲೆಯನ್ನು ಗಲಾಟೆಯ ಸ್ಥಳವಾಗಿ ಮಾರ್ಪಡಿಸುವ ಪ್ರಯತ್ನ ನಡೆಸುವವರ ವಿರುದ್ಧ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಇದೆ ಎಂಬುದನ್ನು ನೆನಪಿಸಿದೆ. ಶಬರಿಮಲೆಯಲ್ಲಿ ಸೆಕ್ಷನ್ 144 ಹಾಕಿರುವುದು ಕಿಡಿಗೇಡಿಗಳನ್ನು ನಿಭಾಯಿಸಲಿಕ್ಕೆ ಎಂದು ಕೇರಳ ಹೈಕೋರ್ಟ್ ನೇರವಾಗಿಯೇ ಹೇಳಿದೆ ಎಂಬ ಸಂಗತಿಯತ್ತ ಕೇರಳ ಮುಖ್ಯಮಂತ್ರಿಗಳು ಗಮನ ಸೆಳೆದಿದ್ದಾರೆ. ಪ್ರತಿಭಟನಾಕಾರರ ಮೇಲೂ ಶಬರಿಮಲೆಯಲ್ಲಿ ಭಕ್ತರು ಶಾಂತಿಯುತವಾಗಿ ದರ್ಶನ ಪಡೆಯುವಂತೆ ಮಾಡುವ ಹೊಣೆಗಾರಿಕೆ ಇದೆ ಎಂದೂ ಹೈಕೋರ್ಟ್ ಹೇಳಿದೆ.

ಸರಕಾರ ಶಬರಿಮಲೆಯಲ್ಲಿ ಭಕ್ತರಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸುತ್ತಿದೆ. ಇದರಿಂದಾಗಿ ಈಗ ದರ್ಶನಾರ್ಥಿಗಳ ಸಂಖ್ಯೆ ಏರುತ್ತಿದೆ. ಶಬರಿಮಲೆಯಲ್ಲಿ ಹಿಂಸಾಚಾರವನ್ನು ಸಂಘಟಿಸಲು, ಅದಕ್ಕೆ ನೇತೃತ್ವ ನೀಡಲು ಪ್ರಯತ್ನಿಸಿರುವುದು ಸಂಘ ಪರಿವಾರದ ಶಕ್ತಿಗಳೇ. ಒಬ್ಬ 52ವರ್ಷದ ಭಕ್ತರ ಮೇಲೆ ಹಲ್ಲೆ ನಡೆಸುವ ಪ್ರಯತ್ನವೂ ನಡೆದಿದೆ. ಆಂಟನಿಯವರ ಪಕ್ಷ ಮತ್ತು ಅದರ ಸದಸ್ಯರು ಗಲಭೆಕೋರರಿಗೆ ಸಹಾಯ ಮಾಡುತ್ತಿದ್ದಾರೆ. ಎ.ಕೆ. ಆಂಟನಿಯವರು ಈ ಹೇಳಿಕೆಯ ಮೂಲಕ ಹಗಲಲ್ಲಿ ಕಾಂಗ್ರೆಸ್‌ನಲ್ಲಿದ್ದು, ಕತ್ತಲಾಗುತ್ತಿದ್ದಂತೆ ಬಿಜೆಪಿಯತ್ತ ತಿರುಗುವ ಕಾಂಗ್ರೆಸಿಗರ ಪ್ರತಿನಿಧಿಯಾಗುತ್ತಿದ್ದಾರೆ, ಆಂಟನಿಯವರಿಗೆ ಹೆಚ್ಚಿನ ಕಾಂಗ್ರೆಸ್ ಸದಸ್ಯರು ಬಿಜೆಪಿಯತ್ತ ವಲಸೆ ಹೋಗುತ್ತಿರುವ



ಸಂಗತಿಯೂ ಗೊತ್ತಿರುವಂತಿಲ್ಲ ಎಂದು ಪಿಣರಾಯಿ ವಿಜಯನ್ ಲೇವಡಿ ಮಾಡಿದ್ದಾರೆ.

ಶಬರಿಮಲೆಯಲ್ಲಿನ ಕಿಡಿಗೇಡಿಗಳನ್ನು ಬಯಲಿಗೆಳೆಯುವ ಬದಲು ಸಿಪಿಐ(ಎಂ)ನ್ನು ದೂಷಿಸುವುದು ದೊಡ್ಡ ಕಪಟಾಚಾರ. ದೇವಸ್ವೋಮ್ ಮಂಡಳಿ ತೀರ್ಪನ್ನು ಜಾರಿಗೊಳಿಸಲು ಸಮಯ ಕೇಳಿ ಸುಪ್ರಿಂ ಕೋರ್ಟ್ ಬಳಿ ಹೋಗಿರುವಾಗ ಈ ಕೀಳುಮಟ್ಟದ ಹೇಳಿಕೆ ಬಂದಿದೆ. ಸಂಘ ಪರಿವಾರ ಕೇರಳದಲ್ಲಿ ಉತ್ತರ ಭಾರತದ ಅಜೆಂಡಾವನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದೆ, ಆದರೆ ಜಾತ್ಯತೀತ ಕೇರಳ ಅದನ್ನು ತಿರಸ್ಕರಿಸಿ ಪ್ರಗತಿಯತ್ತ ಮುನ್ನಡೆಯುತ್ತಿದೆ. ನಿಜವಾದ ಸಂಗತಿಯೆಂದರೆ, ಸಂಘ ಪರಿವಾರದ ಆಕ್ರಮಣವನ್ನು ಕಾಂಗ್ರೆಸ್ ಖಂಡಿಸದಿರುವುದು, ಇಂತಹ ಶಕ್ತಿಗಳಿಗೆ ಮತ್ತಷ್ಟು ಉತ್ತೇಜನೆ ನೀಡುತ್ತಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಸಂಪಾದಕೀಯ

ಬರ ಪರಿಹಾರವನ್ನು ಸಮರೋಪಾದಿಯಲ್ಲಿ ಕೈಗೊಳ್ಳಿ

ರಾಜ್ಯದಲ್ಲಿ ಮತ್ತೆ ಬರ ಆವರಿಸಿದೆ. ನವೆಂಬರ್ ತಿಂಗಳು ಕಳೆದಿದ್ದು, ಹಿಂಗಾರು ಮಳೆ ಕೈಕೊಟ್ಟಿರುವುದು ಸ್ಪಷ್ಟವಾಗಿದೆ. ಹಿಂಗಾರು ಮಳೆ ಕೊರತೆ ಪ್ರಮಾಣ ಶೆ. 49ರಷ್ಟಿದೆ. ಹಿಂಗಾರು ಬಿತ್ತನೆ ಗುರಿ 31.0 ಲಕ್ಷ ಹೆಕ್ಟೇರ್ ಆಗಿದ್ದು ಈ ವರೆಗೆ ಬಿತ್ತನೆ ಆಗಿರುವುದು ಕೇವಲ 20.76 ಲಕ್ಷ ಹೆಕ್ಟೇರುಗಳಲ್ಲಿ. ಕಳೆದ ವರ್ಷ ಈ ಅವಧಿಯಲ್ಲಿ 26.19 ಲಕ್ಷ ಹೆಕ್ಟೇರುಗಳಲ್ಲಿ ಬಿತ್ತನೆಯಾಗಿತ್ತು. ಮಳೆ ಕೊರತೆಯಿಂದ ಹಾನಿ ಪ್ರಮಾಣ ಈಗಾಗಲೇ 16.6 ಸಾವಿರ ಕೋಟಿ. ರೂ. ನಷ್ಟಾಗಿದೆ ಎಂದು ಅಂದಾಜು ಮಾಡಲಾಗಿದೆ.

ಈಗಾಗಲೇ ಸರಕಾರ 100 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ಇವುಗಳಲ್ಲಿ 72 ತಾಲೂಕುಗಳಲ್ಲಿ. ತೀವ್ರ ಬರ ಪರಿಸ್ಥಿತಿ ಎಂದು ಗುರುತಿಸಲಾಗಿದೆ. ಇನ್ನಷ್ಟು ತಾಲೂಕುಗಳಲ್ಲಿ ಬರದ ಸ್ಥಿತಿ ಕಂಡು ಬಂದಿದ್ದು ಅಲ್ಲೂ ಬರ ಪರಿಸ್ಥಿತಿ ಘೋಷಿಸಲು ಸರಕಾರ ಮುಂದಾಗಿದೆ. ಉಪಚುನಾವಣೆಗಳು, ಆಳುವ ಪಕ್ಷ ಮತ್ತು ಮೈತ್ರಿಕೂಟದೊಳಗಿನ ಬಿಕ್ಕಟ್ಟಿನ ಗುಂಗಿನಲ್ಲಿದ್ದ ಸರಕಾರ, ಆವರಿಸುತ್ತಿದ್ದ ಬರ ಪರಿಸ್ಥಿತಿಯನ್ನು ಗಮನಿಸಿ ಸಕಾಲಿಕ ಸೂಕ್ತ ಕ್ರಮ ಕೈಗೊಂಡಿಲ್ಲವೆಂದು ವ್ಯಾಪಕ ಟೀಕೆ ಬಂದ ನಂತರ ಕೆಲವು ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ.

ಬರ ಪರಿಹಾರದ ಕ್ರಮಗಳನ್ನು ಚರ್ಚಿಸಲು ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಸಭೆಯನ್ನು ಮುಖ್ಯಮಂತ್ರಿಗಳು ಕರೆದಿದ್ದರು.. ಪ್ರತಿಯೊಂದು ಕಂದಾಯ ವಿಭಾಗಕ್ಕೆ ಹಿರಿಯ ಸಚಿವರನ್ನು ಒಳಗೊಂಡ ನಾಲ್ಕು ಸಚಿವ ಸಂಪುಟ ಉಪಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗೆ ಪ್ರಧಾನ ಕಾರ್ಯದರ್ಶಿ ಮಟ್ಟದ ಹಿರಿಯ ಅಧಿಕಾರಿಯೊಬ್ಬರು ಸಮನ್ವಯ ಅಧಿಕಾರಿಯಾಗಿದ್ದು, ಈ ಸಮಿತಿ ಬರಪೀಡಿತ ಪ್ರದೇಶಗಳಲ್ಲಿ ಪ್ರವಾಸ ಕೈಗೊಳ್ಳಲಿದೆ. ಅಧಿಕಾರಿಗಳು ಹಾಗೂ ಅಲ್ಲಿನ ಜನರ ಜತೆಗೆ ಸಭೆ ನಡೆಸಿ ಮುಂಜಾಗ್ರತಾ ಕ್ರಮಗಳ ಕುರಿತು ಜಿಲ್ಲಾಡಳಿತಕ್ಕೆ ಸಲಹೆ ನೀಡಲಿದೆ.

'ಯಾವ ತಾಲ್ಲೂಕುಗಳಲ್ಲಿ ಕನಿಷ್ಠ ಮಳೆಯಾಗಿದೆ, ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ' ಎಂಬ ವಿವರವನ್ನು ತಿಂಗಳ ಅಂತ್ಯದೊಳಗೆ ಕೊಡಲು ಸೂಚಿಸಲಾಗಿದೆ. ಪ್ರತಿ ಬರಪೀಡಿತ ತಾಲ್ಲೂಕಿಗೂ ಬರಪರಿಸ್ಥಿತಿ ನಿರ್ವಹಣೆಗಾಗಿ ಒಬ್ಬ ನೋಡಲ್ ಅಧಿಕಾರಿಯನ್ನು ನಿಯೋಜಿಸಲಾಗಿದೆ. 'ಜನರ ಗುಳೆ ತಪ್ಪಿಸಲು ಗ್ರಾಮ ಪಂಚಾಯಿತಿ ಮಟ್ಟದಲ್ಲೂ ನೋಡಲ್ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ನೇಮಿಸಬೇಕು. ಅವರು ಹಾಗೂ ಸಿಇಒ ಗ್ರಾಮಗಳಿಗೆ ಭೇಟಿ ನೀಡಿ ಸಮಸ್ಯೆ ಆಲಿಸಬೇಕು' ಎಂದು ಆದೇಶಿಸಲಾಗಿದೆ. ಬರಪೀಡಿತ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ತಾಲ್ಲೂಕಿಗೆ 50 ಲಕ್ಷ ರೂ. ಮಂಜೂರು ಮಾಡಲಾಗಿದ್ದು, ಪ್ರತಿ ತಾಲ್ಲೂಕಿಗೆ 25 ಲಕ್ಷ ರೂ. ಈಗಾಗಲೇ ಬಿಡುಗಡೆ ಮಾಡಲಾಗಿದೆ. ಬರಪೀಡಿತ ತಾಲ್ಲೂಕುಗಳಲ್ಲಿ ನರೇಗಾ ಯೋಜನೆಯನ್ನು ಸಮರ್ಪಕವಾಗಿ ಬಳಕೆ ಮಾಡಲು ಆದೇಶಿಸಲಾಗಿದೆ. ಮೇವು ಕೊರತೆ ನೀಗಿಸಲು 20.66 ಕೋಟಿ ರೂ. ವೆಚ್ಚದ 8.11 ಲಕ್ಷ ಮಿನಿ ಕಿಟ್ ಗಳನ್ನು ಖರೀದಿಸಿ ರೈತರಿಗೆ ಉಚಿತವಾಗಿ ವಿತರಿಸಲಾಗಿದೆ. ಇದರಿಂದ 30.43 ಲಕ್ಷ ಟನ್ ಹಸಿರು ಮೇವು ಡಿಸೆಂಬರ್ ವರೆಗೆ ಲಭ್ಯವಾಗುತ್ತದೆ ಎನ್ನಲಾಗಿದೆ.

ಇವೆಲ್ಲ ಕ್ರಮಗಳನ್ನು ಕೈಗೊಳ್ಳಲು ಸರಕಾರದ ಮಟ್ಟದಲ್ಲಿ ನಿರ್ಧರಿಸಲಾಗಿದ್ದರೂ ಇವು ಇನ್ನಷ್ಟೇ ಕಾರ್ಯಗತವಾಗಬೇಕಾಗಿದೆ. ಇವು ಇನ್ನೂ ತಳಮಟ್ಟದಲ್ಲಿ ಪರಿಣಾಮ ಬೀರಿ ಬರ ಪರಿಹಾರ ಕ್ರಮಗಳನ್ನು ನಿರ್ವಹಣೆಯಲ್ಲಿ ಇರಬೇಕಾದ ತುರ್ತು, ಮುತುವರ್ಜಿಯಾಗಿ ಕಂಡುಬಂದಿಲ್ಲ. ಉದಾಹರಣೆಗೆ, ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ತಾಲ್ಲೂಕಿಗೆ ಮಂಜೂರಾದ 50 ಲಕ್ಷ ರೂ. ಬಂದಿಲ್ಲವೆಂದು ನೆಪ ಹೂಡಿ, ಈಗಾಗಲೇ ಬಿಡುಗಡೆಯಾಗಿರುವ 25 ಲಕ್ಷ ರೂ. ವನ್ನು ಬಳಸಿಕೊಳ್ಳಲಾಗುತ್ತಿಲ್ಲವೆಂದು ಮುಖ್ಯಮಂತ್ರಿಯವರೇ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಕುರಿತು ವರದಿಯಾಗಿದೆ.

ಈಗಾಗಲೇ ಕೃಷಿ ವಲಯ ಮತ್ತು ರೈತರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಸರಕಾರದ ನೀತಿಗಳು ಅವರನ್ನು ಆತ್ಮಹತ್ಯೆಯತ್ತ ದೂಡಿವೆ. ಬರ, ನೆರೆಯಂತಹ ಪ್ರಾಕೃತಿಕ ಪ್ರಕೋಪಗಳ ಹೊಡೆತ ತಡೆದುಕೊಳ್ಳುವಂತಹ ಚೈತನ್ಯವನ್ನೇ ಕಳೆದುಕೊಂಡಿದ್ದಾರೆ. ಅದೇ ಸಮಯದಲ್ಲಿ ರೈತರು ಹತಾಶೆಯ ಆತ್ಮಹತ್ಯೆಯ ಹಂತ ದಾಟಿ, ದೇಶದಾದ್ಯಂತ ಕೇಂದ್ರ-ರಾಜ್ಯ ಸರಕಾರಗಳ ನೀತಿಗಳ ವಿರುದ್ಧ ಸೆಟೆದು ನಿಂತು ತೀವ್ರ ಸಂಘರ್ಷದ ಹಂತ ತಲುಪಿದ್ದಾರೆ. ರೈತರ ಸಮಸ್ಯೆಗಳ ಬಗ್ಗೆ ಪಾರ್ಲಿಮೆಂಟ್ ವಿಶೇಷ ಅಧಿವೇಶನ ನಡೆಸಬೇಕೆಂದು ಮತ್ತು ಕನಿಷ್ಟ ಬೆಂಬಲ ಬೆಲೆ ಹಾಗೂ ಸಾಲಮನ್ನಾ ಕುರಿತಾದ ಎರಡು ಮಸೂದೆಗಳನ್ನು ಪಾಸು ಮಾಡಬೇಕು ಎಂದು ನವೆಂಬರ್ 29-30ರಂದು ಲಕ್ಷಾಂತರ ರೈತರು ಪಾರ್ಲಿಮೆಂಟಿನ ಬಾಗಿಲಲ್ಲಿ ನಿಂತಿದ್ದಾರೆ. ರೈತರ ಈ ಕೂಗಿನಿಂದ ಎಚ್ಚತ್ತಾದರೂ, ರಾಜ್ಯದ ಮೈತ್ರಿ ಸರಕಾರ ಉಪ ಚುನಾವಣೆ, ಪಕ್ಷಗಳ ಸಂಘಟನಾ ಸಮಸ್ಯೆಗಳ ಗುಂಗಿನಿಂದ ಹೊರ ಬಂದು ಬರ ಪರಿಹಾರ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಬೇಕು. ರೈತರಿಗೆ ಮಾತು ಕೊಟ್ಟಿರುವ ಸಾಲ ಮನ್ನಾ ಮುಂತಾದ ಕ್ರಮಗಳನ್ನೂ ತುರ್ತಾಗಿ ಜಾರಿ ಮಾಡಬೇಕು.

ಎಡಪಕ್ಷಗಳ ಜಂಟಿ ಕರೆ

ಡಿಸೆಂಬರ್ 6 ನ್ನು 'ಸಂವಿಧಾನ ಮತ್ತು ಜಾತ್ಯಾತೀತತೆಯ ಸಮರ್ಥನೆಯ ದಿನ' ವಾಗಿ ಆಚರಿಸಿ



ದೇಶದಾದ್ಯಂತ ಎಲ್ಲಾ ಜಿಲ್ಲಾ ಹಾಗೂ ತಾಲೂಕಾ ಕೇಂದ್ರಗಳಲ್ಲಿ ಡಿಸೆಂಬರ್ 06, 2018 ನ್ನು "ಸಂವಿಧಾನ ಮತ್ತು ಜಾತ್ಯಾತೀತತೆಯ ಸಮರ್ಥನೆಯ ದಿನ" ವಾಗಿ ಆಚರಿಸಲು ದೇಶದ ಪ್ರಮುಖ ಆರು ಎಡ ಪಕ್ಷಗಳು ಜಂಟಿಯಾಗಿ ಕರೆ ನೀಡಿವೆ.

ಬಾಬರಿ ಮಸೀದಿಯನ್ನು ಒಡೆದ 26 ನೆಯ ವರ್ಷಾಚರಣೆಯ ಈ ದಿನವನ್ನು ಜಾತ್ಯಾತೀತತೆ ಹಾಗೂ ಪ್ರಜಾಸತ್ತೆಯ ಸಂರಕ್ಷಣೆಯ ದಿನವಾಗಿಯೂ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ರವರ ಪರಿನಿರ್ವಾಣದ ದಿನವಾಗಿಯೂ ಆಚರಿಸಬೇಕಾಗಿದೆ.

ಅರ್.ಎಸ್.ಎಸ್. ನೇತೃತ್ವದ ಸಂಘ ಪರಿವಾರವು ಸುಪ್ರೀಮ್ ಕೋರ್ಟನ್ನು ಬದಿಗೆ ತಳ್ಳಿ ಅಯೋಧ್ಯೆಯ ವಿವಾದಿತ ಸ್ಥಳದಲ್ಲಿಯೇ ರಾಮ ಮಂದಿರ ನಿರ್ಮಿಸಲು ಅನುವಾಗುವಂತೆ ಕೇಂದ್ರ ಸರಕಾರ ಕಾನೂನು/ಸುಗ್ರೀವಾಜ್ಞೆ ಜಾರಿಗೆ ತರುವಂತೆ ಒತ್ತಾಯಿಸಿ ಪ್ರಚಾರ ನಡೆಸುತ್ತಿವೆ. ಆ ಮೂಲಕ ಅವು ಭಾರತದ ಸಂವಿಧಾನ ಕೊಡಮಾಡಿರುವ ಜಾತ್ಯಾತೀತತೆ ಸಂಬಂದಿಸಿದ ಅನುಕೂಲಗಳನ್ನು ಮೂಲೆ ಗುಂಪಾಗಿಸಿ ತನ್ನ ಕೋಮುವಾದಿ ಅಜೆಂಡಾಗಳನ್ನು ಮುಂದೆ ತರಲು ಯತ್ನಿಸುತ್ತಿವೆ. ಕೋಮುವಾದಿಗಳ ಈ ಸಂಚನ್ನು ಬಯಲುಗೊಳಿಸಲು ಜನತೆಯನ್ನು ಅಣಿ ನೆರೆಸಿ ಅವುಗಳನ್ನು ಪ್ರತಿರೋಧಿಸುವುದು ಅಗತ್ಯವಿದೆ.

ಸಿಪಿಐ(ಎಂ) ಪಕ್ಷದ ಜಿಲ್ಲಾ ಹಾಗೂ ತಾಲೂಕಾ ಘಟಕಗಳು ಅಯಾ ಪ್ರದೇಶದಲ್ಲಿನ ಎಡಪಕ್ಷಗಳ ಆಯಾ ಹಂತದ ಘಟಕಗಳ ಜೊತೆ ಸೇರಿ ಆ ದಿನ, ಪ್ರತಿಭಟನಾ ಧರಣಿ, ಮೆರವಣಿಗೆ, ಮುಂತಾದ ವಿವಿಧ ಕಾರ್ಯಕ್ರಮಗಳನ್ನು ಅಯೋಜಿಸುವ ಮೂಲಕ ಯಶಸ್ವಿಗೊಳಿಸಲು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

ಡಾ. ಅಮಿತ್ ಸೇನ್‌ಗುಪ್ತ : ಸಿಪಿಐ(ಎಂ) ಶ್ರದ್ಧಾಂಜಲಿ

ದೇಶದ ಜನವಿಜ್ಞಾನ ಮತ್ತು ಸಾರ್ವಜನಿಕ ಆರೋಗ್ಯ ಆಂದೋಲನಗಳಲ್ಲಿ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದ ಡಾ. ಅಮಿತ್ ಸೇನ್‌ಗುಪ್ತ ನವಂಬರ್ 28ರಂದು ಗೋವಾದಲ್ಲಿ ದುರಂತಮಯ ಸಂದರ್ಭದಲ್ಲಿ ನಿಧನರಾಗಿದ್ದಾರೆ. ದೇಶದ ಪ್ರಗತಿಪರ ವಿಜ್ಞಾನ ಆಂದೋಲನಕ್ಕೆ ಮತ್ತು ಪಕ್ಷಕ್ಕೆ ಇದರಿಂದ ದೊಡ್ಡ ನಷ್ಟವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.


ಡಾ. ಅಮಿತ್ ಸೇನ್‌ಗುಪ್ತ ಅಖಿಲ ಭಾರತ ಜನ ವಿಜ್ಞಾನ ಜಾಲ(ಎಐಪಿಎಸ್‌ಎನ್)ದ ಮಾಜಿ ಪ್ರಧಾನ ಕಾರ್ಯದರ್ಶಿಯಾಗಿದ್ದರು ಮತ್ತು ಜನ ಸ್ವಾಸ್ಥ್ಯ ಅಭಿಯಾನದ ಸಂಯೋಜಕರಾಗಿದ್ದರು.

ಅವರು 1979ರಲ್ಲಿ ಒಬ್ಬ ವಿದ್ಯಾರ್ಥಿ ಕಾರ್ಯಕರ್ತನಾಗಿ ಸಿಪಿಐ(ಎಂ) ಸೇರಿದರು. ಜನ ವಿಜ್ಞಾನ ಪ್ರಚಾರಾಂದೋಲನ ಮತ್ತು ಸಾರ್ವಜನಿಕ ಆರೋಗ್ಯ ಕುರಿತಂತೆ ಪಕ್ಷದ ಧೋರಣೆಗಳನ್ನು ರೂಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು, ಪಕ್ಷದ ಅಖಿಲ ಭಾರತ ಜನಪ್ರಿಯ ವಿಜ್ಞಾನ ಸಮಿತಿಯ ಸಂಯೋಜಕರಾಗಿದ್ದರು.

ಅಮಿತ್ ಸೇನ್‌ಗುಪ್ತ ಪಕ್ಷದ ಕೇಂದ್ರ ಪತ್ರಿಕೆಯಾದ 'ಪೀಪಲ್ಸ್ ಡೆಮಾಕ್ರಸಿ' ಯಲ್ಲಿ 'ವಿಜ್ಞಾನ ಮತ್ತು ಅಭಿವೃದ್ಧಿ' ಅಂಕಣದಲ್ಲಿ ನಿಯಮಿತವಾಗಿ ಬರೆಯುತ್ತಿದ್ದವರು. ಅಲ್ಲದೆ ಸಾರ್ವಜನಿಕ ಆರೋಗ್ಯ ಮತ್ತು ವಿಜ್ಞಾನ ವಿಷಯಗಳ ಮೇಲೆ ವಿಸ್ತಾರವಾಗಿ ಬರೆದಿದ್ದಾರೆ ಎಂದು ನೆನಪಿಸಿಕೊಂಡಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರ ನೆನಪಿಗೆ ಶ್ರದ್ಧಾಂಜಲಿ ಅರ್ಪಿಸಿದೆ ಮತ್ತು ಅವರ ಪತ್ನಿ, ಪುತ್ರ ಹಾಗೂ ಕುಟುಂಬದ ಇತರ ಸದಸ್ಯರಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದೆ.

ಮಾತೆಂದರೆ ಇದು

ಬಂಡವಾಳ ಶೇಖರಣೆಯಾಗುವ ಪ್ರಮಾಣದಲ್ಲ ಕಾರ್ಮಿಕನ ಪರಿಸ್ಥಿತಿ (ಆತನ ವೇತನ ಹೆಚ್ಚಿರಲಿ ಅಥವಾ ಕಡಿಮೆ ಇರಲಿ) ಕೆಡುತ್ತಾ ಹೋಗುತ್ತದೆ. ಕೈಗಾರಿಕಾ ಮೀಸಲು ಪಡೆ, ಮತ್ತು ಶೇಖರಣೆಯ ವಿಸ್ತಾರ ಮತ್ತು ಚೈತನ್ಯಗಳ ಜತೆ ಕೊನೆಗೂ ಸಮತೋಲನಗೊಳಿಸುವ ಈ ನಿಯಮ, ಗ್ರೀಕ್ ಪುರಾಣದ ಪ್ರಾಮಿತಿಯಸ್ ನನ್ನು ವಲ್ಕನ್ ನ ಬಂಡೆಗೆ ಜಡಿದಂತೆ, ಕಾರ್ಮಿಕನನ್ನು ಬಂಡವಾಳಕ್ಕೆ ಮೊಳೆ ಜಡಿದು ಕಟ್ಟಿ ಹಾಕುತ್ತದೆ. ಬಂಡವಾಳದ ಶೇಖರಣೆಗೆ ಸಂವಾದಿಯಾಗಿರುವ ಸಂಕಟಗಳ ಶೇಖರಣೆಯನ್ನೂ ಅದು ದೃಢಪಡಿಸುತ್ತದೆ. ಒಂದು ತುದಿಯಲ್ಲ ಸಂಪತ್ತಿನ ಶೇಖರಣೆ ಆಗುವುದರಿಂದಲೇ, ಅದೇ ಸಮಯದಲ್ಲ ಇನ್ನೊಂದು ತುದಿಯಲ್ಲ, ತನ್ನ ಉತ್ಪನ್ನವನ್ನು ಬಂಡವಾಳದ ರೂಪದಲ್ಲ ಉತ್ಪಾದಿಸುವ ವರ್ಗದ ತುದಿಯಲ್ಲ, ಸಂಕಟ, ಗುಲಾಮ ದುಡಿಮೆಯ ಬೇಗುದಿ, ಅಜ್ಞಾನ, ಕ್ರೌರ್ಯ, ಮಾನಸಿಕ ಅಧೋಗತಿಗಳ ಶೇಖರಣೆ ಆಗುತ್ತಿರುತ್ತದೆ.



-ಕಾರ್ಲ್ ಮಾರ್ಕ್ಸ್ (ಬಂಡವಾಳ, ಅಧ್ಯಾಯ 25)

ಜೆಸಿಟಿಯು ಉಡುಪಿ ಜಿಲ್ಲಾ ಸಮಾವೇಶ



ಕಾರ್ಮಿಕರ ಪ್ರಬಲ ಅಸ್ತ್ರವಾಗಿರುವ 44 ಕಾರ್ಮಿಕ ಕಾನೂನುಗಳನ್ನು ಕೇಂದ್ರ ಸರಕಾರ ಬಂಡವಾಳಶಾಹಿಗಳ ಪರವಾಗಿ ತಿದ್ದುಪಡಿ ಮಾಡಲು ಹೊರಟಿದೆ. ಇದರಿಂದಾಗಿ ಭವಿಷ್ಯದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಕಾರ್ಮಿಕರ ಸ್ಥಿತಿ ಅತಂತ್ರವಾಗಲಿದೆ. ಕೇಂದ್ರ ಸರಕಾರವು ಅನುಸರಿಸುತ್ತಿರುವ ಆರ್ಥಿಕ ನೀತಿಯ ಕಾರಣ ಉದ್ಯೋಗ ಸೃಷ್ಟಿಯ ಬದಲು, ಇರುವ ಉದ್ಯೋಗಗಳು ನಾಶವಾಗುತ್ತಿದೆ ಎಂಬುದಾಗಿ ಸಿಐಟಿಯು ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಉಡುಪಿ ಜಿಲ್ಲಾ ಮಟ್ಟದ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ನೇತೃತ್ವದಲ್ಲಿ ನವಂಬರ್ 24 ರಂದು ಕೇಂದ್ರ ಸರಕಾರದ ಕಾರ್ಮಿಕ ನೀತಿಗಳ ವಿರುದ್ಧ ಆಯೋಜಿಸಿದ ಜಿಲ್ಲಾ ಸಮಾವೇಶವನ್ನು ಉದ್ದೇಶಿಸಿ ಅವರು ಉಡುಪಿಯಲ್ಲಿ ಮಾತನಾಡಿದರು.

ಕಾರ್ಮಿಕರಿಗೆ ಕನಿಷ್ಠ ಮಾಸಿಕ ವೇತನ ರೂ.18,000 ನೀಡಬೇಕು ಮೊದಲಾದ ಬೇಡಿಕೆಗಳು ಕೇಂದ್ರ ಸರಕಾರದ ಧೋರಣೆಯಿಂದಾಗಿ ಪಾಲಿಸಲ್ಪಡುತ್ತಿಲ್ಲ. ಈ ಎಲ್ಲಾ ಸಮಸ್ಯೆಗಳ ಬಗ್ಗೆ ಕೇಂದ್ರದ ಗಮನ ಸೆಳೆಯಲು ಕೇಂದ್ರ ಕಾರ್ಮಿಕ ಹಾಗೂ ನೌಕರ ಸಂಘಟನೆಗಳು ಬರುವ ಜನವರಿ 8, 9 ರಂದು ಹಮ್ಮಿಕೊಂಡಿರುವ ಅಖಿಲ ಭಾರತ ಮುಷ್ಕರಕ್ಕೆ ಎಲ್ಲಾ ಕಾರ್ಮಿಕ ಸಂಘಟನೆಗಳೂ ಕೈಜೋಡಿಸಬೇಕೆಂದು ಅವರು ಕರೆ ನೀಡಿದರು.

ವಾಸುದೇವ ಉಚ್ಚಿಲ್

ಸಿಐಟಿಯು ಜಿಲ್ಲಾಧ್ಯಕ್ಷ ಪಿ.ವಿಶ್ವನಾಥ ರೈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶಂಕರ್, ಎಐಟಿಯುಸಿ ದ.ಕ. ಮತ್ತು ಉಡುಪಿ ಜಿಲ್ಲಾ ಮುಖಂಡ ಎಚ್.ವಿ.ರಾವ್, ವಿಮಾ ನೌಕರರ ಮುಖಂಡ ಗುರುದತ್, ಬ್ಯಾಂಕ್ ನೌಕರರ ಸಂಘ ಮುಖಂಡ ಬಿ.ಎಂ.ಮಾಧವ, ಬಿಎಸ್ಎನ್ಎಲ್ ನೌಕರರ ಸಂಘದ ಶಶಿಧರ ಗೊಲ್ಲ ಸಮಾವೇಶದಲ್ಲಿ ಉಪಸ್ಥಿತರಿದ್ದರು.

ಬೀಡಿ ಡಿಪೋ ಮುಂದೆ ಗುರುಪುರದಲ್ಲಿ ಕಾರ್ಮಿಕರಿಂದ ಪ್ರತಿಭಟನೆ

ಬೀಡಿ ಮಾಲಕರು, ಕಾರ್ಮಿಕ ಸಂಘಟನೆಗಳು ಹಾಗೂ ರಾಜ್ಯ ಸರಕಾರ ನಡೆಸಿದ ತ್ರಿಪಕ್ಷೀಯ ಮಾತುಕತೆಗಳ ಅನಂತರ ಸರಕಾರ ನೀಡಿದ ಆದೇಶದಂತೆ ಬೀಡಿ ಕಾರ್ಮಿಕರಿಗೆ ಒಂದು ಸಾವಿರ ಬೀಡಿಗೆ 2015 ಎಪ್ರಿಲ್ 1ರಿಂದ ತಲಾ ರೂ.12.75 ರಂತೆ ಬಾಕಿ ಇರುವ ತುಟ್ಟಿಭತ್ತೆಯನ್ನು ಹಾಗೂ 2018 ಎಪ್ರಿಲ್ 1 ರಿಂದ ಜಾರಿಮಾಡಿರುವ ಕನಿಷ್ಠ ಕೂಲಿ ಸಾವಿರ ಬೀಡಿಗೆ ರೂ.210ನ್ನು ಶೀಘ್ರ ನೀಡಬೇಕು ಎಂದು ಆಗ್ರಹಿಸಿ ದ.ಕ. ಹಾಗೂ ಉಡುಪಿ ಜಿಲ್ಲೆಯ ಬೀಡಿ ಕಾರ್ಮಿಕರು ಕಳೆದ ಕೆಲವು ತಿಂಗಳುಗಳಿಂದ ಹೋರಾಟಗಳನ್ನು ಮಾಡುತ್ತಾ ಬಂದಿದ್ದಾರೆ.

ನಾಲ್ಕನೇ ಹಂತದ ಹೋರಾಟವಾಗಿ ಬೀಡಿ ಯೂನಿಯನ್‌ಗಳು ಸ್ಥಳೀಯ ಬೀಡಿ ಡಿಪೋಗಳ ಎದುರು ಪ್ರತಿಭಟನಾ ಪ್ರದರ್ಶನಗಳನ್ನು ನವಂಬರ್ 15 ರಿಂದ ಆರಂಭಿಸಿದ್ದು, ನವಂಬರ್ 22ರಂದು ಗುರುಪುರ ಕೈಕಂಬದಲ್ಲಿ ನಡೆದ ಪ್ರತಿಭಟನೆ ಬೃಹತ್ ಸ್ವರೂಪದ್ದಾಗಿದ್ದು, 650ಕ್ಕೂ ಮಿಕ್ಕಿ ಬೀಡಿ ಕಾರ್ಮಿಕರು ಭಾಗವಹಿಸಿದ್ದರು.

ಗುರುಪುರ ಪ್ರದೇಶದ ಕುಪ್ಪೆಪದವು, ಗುರುಪುರ ಮತ್ತು ವಾಮಂಜೂರು ಪ್ರದೇಶಗಳ ಸಿಐಟಿಯು ಸಂಯೋಜಿತ ಯೂನಿಯನ್‌ಗಳು ಒಟ್ಟಾಗಿ ಈ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದವು. ಪ್ರತಿಭಟನಾಕಾರರನ್ನುದ್ದೇಶಿಸಿ ಬೀಡಿ ಕಾರ್ಮಿಕ ಫೆಡರೇಶನ್ನಿನ ದ.ಕ.ಜಿಲ್ಲಾ ಮುಖಂಡರಾದ ವಸಂತ ಆಚಾರಿ, ಯು.ಬಿ.ಲೋಕಯ್ಯ, ಗುರುಪುರ ಪ್ರದೇಶದ ಮುಖಂಡರಾದ ಸದಾಶಿವದಾಸ್, ಗಂಗಯ್ಯ ಅಮೀನ್, ನೋಣಯ್ಯ ಗೌಡ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಇದೇ ರೀತಿ ಮಂಗಳೂರಿನ ಲಾಲ್‌ಬಾಗ್ ಮತ್ತು ಫರಂಗಿಪೇಟೆಯ ಬೀಡಿ ಡಿಪೋಗಳ ಮುಂದೆ ಬೀಡಿ ಕಾರ್ಮಿಕರ ಪ್ರತಿಭಟನೆಗಳು ನಡೆದಿವೆ. ಇದನ್ನು ಹಿಂದಿನ ದಿನಗಳಲ್ಲಿ ಸುರತ್ಕಲ್-ಕಾನ, ಮೂಡಬಿದ್ರಿ, ಬಿಸಿರೋಡ್, ಬೆಳ್ತಂಗಡಿಗಳಲ್ಲಿ ಬೀಡಿ ಕಾರ್ಮಿಕರು ಸ್ಥಳೀಯ ಪ್ರಮುಖ ಬೀಡಿ ಕಂಪೆನಿಗಳ ಡಿಪೋಗಳೆದುರು ಪ್ರತಿಭಟನೆ ನಡೆಸಿರುತ್ತಾರೆ.

ಮಂಗಳೂರಿನಲ್ಲಿ ಅಕ್ಷರದಾಸೋಹ ನೌಕರರ ದ.ಕ.ಜಿಲ್ಲಾ ಸಮ್ಮೇಳನ

ಮಹಿಳೆಯರನ್ನು ಮಾತೆಯರೆಂದು ಮೊಸಳೆ ಕಣ್ಣೀರು ಹಾಕುವ ಬಿಜೆಪಿ ಹಾಗೂ ಸಂಘ ಪರಿವಾರದ ನೀತಿ ಶಬರಿಮಲೆಯ ದೇಗುಲ ಪ್ರವೇಶ ವಿಚಾರದಲ್ಲಿ ಬಯಲಾಗಿದೆ ಎಂಬುದಾಗಿ ಸಾಹಿತಿ ಹಾಗೂ ಕಾರ್ಮಿಕ ಮುಂದಾಳು ಯಮುನಾ ಗಾಂವ್ಕರ್ ಮಂಗಳೂರಿನಲ್ಲಿ ನವಂಬರ್ 25ರಂದು ನಡೆದ ಅಕ್ಷರದಾಸೋಹ ನೌಕರರ ಸಮ್ಮೇಳನವನ್ನು ಉದ್ಘಾಟಿಸುತ್ತಾ ಹೇಳಿದರು.

ಯುವತಿಯನ್ನೊಳಗೊಂಡು ಎಲ್ಲಾ ವಯೋಮಾನದ ಮಹಿಳೆಯರು ಶಬರಿಮಲೆ ಅಯ್ಯಪ್ಪ ಸ್ವಾಮಿಯ ದರ್ಶನ ಪಡೆಯಲು ಅರ್ಹರು ಎಂಬ ಸುಪ್ರೀಂಕೋರ್ಟ್‌ನ ಚಾರಿತ್ರಿಕ ತೀರ್ಪನ್ನು ವಿರೋಧಿಸುವ ಬಿಜೆಪಿ ಮತ್ತು ಸಂಘಪರಿವಾರದವರು ಮಹಿಳಾ ವಿರೋಧಿಗಳು ಎಂಬುದಾಗಿ ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿ ಸಿಐಟಿಯು ದ.ಕ.ಜಿಲ್ಲಾ ಘಟಕದ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಜನವಾದಿ ಮಹಿಳಾ ಸಂಘಟನೆಯ ದ.ಕ.ಜಿಲ್ಲಾ ಅಧ್ಯಕ್ಷೆ ಜಯಂತಿ ಶೆಟ್ಟಿ ಮಾತನಾಡಿದರು. ಸಿಐಟಿಯು ಜಿಲ್ಲಾ ಮುಖಂಡರಾದ ವಸಂತ ಆಚಾರಿ, ರಾಬರ್ಟ್ ಡಿಸೋಜ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬಿಸಿಯೂಟ ನೌಕರರಿಗೆ ರೂ.5000 ಮಾಸಿಕ ವೇತನ ಅಲ್ಲದೆ ಬರುವ ಜನವರಿ 8,9ರ ಅಖಿಲ ಭಾರತ ಮುಷ್ಕರಕ್ಕೆ ಬೆಂಬಲಿಸಿ ನಿರ್ಣಯ ಕೈಗೊಳ್ಳಲಾಯಿತು.

ಸಮ್ಮೇಳನವು 21 ಮಂದಿ ಸದಸ್ಯರುಳ್ಳ ದ.ಕ. ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು.ಪದ್ಮಾವತಿ ಶೆಟ್ಟಿ ಅಧ್ಯಕ್ಷರಾಗಿ, ಗಿರಿಜಾ ಮೂಡಬಿದ್ರಿ ಕಾರ್ಯದರ್ಶಿಯಾಗಿ, ಭವ್ಯಾ ಖಜಾಂಚಿಯಾಗಿ ಆಯ್ಕೆಯಾಗಿರುತ್ತಾರೆ.

ಮರಳು ಸಮಸ್ಯೆ: ಉಡುಪಿಯಲ್ಲಿ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ



ಉಡುಪಿ ಜಿಲ್ಲೆಯಲ್ಲಿ ಮರಳು ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವಂತೆ ಒತ್ತಾಯಿಸಿ ಉಡುಪಿ ಜಿಲ್ಲಾ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ನೇತೃತ್ವದಲ್ಲಿ ನವಂಬರ್ 27 ರಿಂದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಉಡುಪಿ ಜಿಲ್ಲಾಧಿಕಾರಿಯವರ ಕಚೇರಿ ಎದುರು ಹಮ್ಮಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ತಡೆ ಹಾಕುವವರೆಗೂ ಮರಳುಗಾರಿಕೆ ಸಮಸ್ಯೆ ಪರಿಹಾರವಾಗಲು ಸಾಧ್ಯವಿಲ್ಲ. ಜಿಲ್ಲೆಯಲ್ಲಿ ಸಾಂಪ್ರದಾಯಿಕವಾಗಿ ಮರಳುಗಾರಿಕೆ ಮಾಡಲು ಅವಕಾಶ ಮಾಡಿಕೊಟ್ಟರೆ ಮರಳು ಸಮಸ್ಯೆ ಉದ್ಭವವಾಗುವುದಿಲ್ಲ. ರಾಜ್ಯದಲ್ಲಿ ಹಾಗೂ ಕೇಂದ್ರದಲ್ಲಿ ಆಳುತ್ತಿರುವ ಕಾಂಗ್ರೆಸ್ ಹಾಗೂ ಬಿಜೆಪಿ ನೇತೃತ್ವದ ಸರಕಾರಗಳು ಹಾಗೂ ಜನಪ್ರತಿನಿಧಿಗಳು ಸಮಸ್ಯೆ ಪರಿಹರಿಸುವಲ್ಲಿ ವಿಫಲರಾಗಿದ್ದಾರೆ. ಸಾವಿರಾರು ಕಟ್ಟಡ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಜಿಲ್ಲೆಯಲ್ಲಿ ಕಟ್ಟಡ ಕಾಮಗಾರಿಯೇ ನಿಂತುಹೋಗಿದೆ. ಈ ಬಗ್ಗೆ ಅಧಿಕಾರಿಗಳೂ, ಜನಪ್ರತಿನಿಧಿಗಳೂ ಮಾತನಾಡುತ್ತಿಲ್ಲ ಎಂಬುದಾಗಿ ಧರಣಿ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯ ಉಪಾಧ್ಯಕ್ಷ ಕೆ.ಶಂಕರ್ ಆಕ್ರೋಶ ವ್ಯಕ್ತಪಡಿಸಿದರು.

ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಸಂಚಾಲಕ ಸುರೇಶ ಕಲ್ಲಾಗರ, ಸಿಐಟಿಯು ಜಿಲ್ಲಾ ಮುಖಂಡ ಬಾಲಕೃಷ್ಣ ಶೆಟ್ಟಿ, ವಿಠಲ ಪೂಜಾರಿ, ಕವಿರಾಜ್, ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಧರಣಿಯು ಹಗಲು-ರಾತ್ರಿ ಮುಂದುವರಿದಿದೆ.

ಮರಳು ಸಮಸ್ಯೆ: ಕುಂದಾಪುರ ಗ್ರಾಮ ಪಂಚಾಯತಗಳ ಮುಂದೆ ಪ್ರತಿಭಟನೆ

ಜಿಲ್ಲಾಡಳಿತವು ಉಡುಪಿ ತಾಲೂಕಿನಲ್ಲಿ 2-3 ದಿನದಲ್ಲಿ ಸಿಆರ್ ಝಡ್ ವಲಯದಲ್ಲಿ ಮರಳುಗಾರಿಕೆಗೆ ಅವಕಾಶ ನೀಡಿದೆ. ಆದರೆ ಕುಂದಾಪುರದಲ್ಲಿ ಸಿಆರ್ ಝಡ್ ನಲ್ಲಿ ಮರಳುಗಾರಿಕೆಗೆ ಅವಕಾಶವಿಲ್ಲ. ಈ ಕ್ರಮವನ್ನು ಖಂಡಿಸಿ, ನವಂಬರ್ 28 ರಂದು ಕುಂದಾಪುರದ ಹಲವಾರು ಗ್ರಾಮಪಂಚಾಯತ್ ಕಚೇರಿಗಳಿಗೆ ಕಟ್ಟಡ ಕಾರ್ಮಿಕರು ಮೆರವಣಿಗೆ ನಡೆಸಿ ಮನವಿ ನೀಡಿದರು..

ಸರಕಾರ ಮಧ್ಯಪ್ರವೇಶಿಸಿ ಪರಿಸರ ಇಲಾಖೆಯಲ್ಲಿರುವ ತೊಡಕುಗಳನ್ನು ಬಗೆಹರಿಸಲು ಕ್ರಮವಹಿಸಬೇಕೆಂದು ಗ್ರಾಮ ಅಭಿವೃದ್ಧಿ ಅಧಿಕಾರಿ ಮುಖಾಂತರ ಸರಕಾರಕ್ಕೆ ಕೊಟ್ಟ ಮನವಿಯಲ್ಲಿ ಹೇಳಲಾಗಿದೆ. ಕೇಂದ್ರ ಸರಕಾರದಡಿಯಲ್ಲಿರುವ ಪರಿಸರ ಇಲಾಖೆಯ ನಿಯಮದಂತೆ ಕುಂದಾಪುರದ ಹಲವು ನದಿಗಳು ಜೈವಿಕ ಸೂಕ್ಷ್ಮವಲಯ ಎಂದು ಗುರುತಿಸಿರುವುದು, ಕಾರ್ಮಿಕರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಿದೆ. ಇದನ್ನು ಜಿಲ್ಲೆಯ ಸಂಸದರು ಕೇಂದ್ರ ಸರಕಾರದ ಗಮನಕ್ಕೆ ತಂದು ಪರಿಹರಿಸಬೇಕು. ಇಲ್ಲವಾದಲ್ಲಿ ಸರಕಾರದ ವಿರುದ್ಧ ಗ್ರಾಮ ಗ್ರಾಮಗಳಲ್ಲಿ ಹೋರಾಟಗಳನ್ನು ನಡೆಸಲಾಗುವುದು ಎಂದು ಉಡುಪಿ ಜಿಲ್ಲಾ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಮನ್ವಯ ಸಮಿತಿ ಮನವಿಯಲ್ಲಿ ಹೇಳಿದೆ.

ತಲ್ಲೂರು, ಕೋಟೇಶ್ವರ, ಮರವಂತೆ, ಅಂಪಾರು, ಕುಂದಬಾರಂದಾಡಿ, ಹೇರೂರು, ಸಿದ್ದಾಪುರ, ಗುಲ್ವಾಡಿ, ಗುಜ್ಜಾಡಿ, ಗಂಗೊಳ್ಳಿ, ಯಡ್ತರೆ, ನಾಡ, ಕಿರಿಮಂಜೇಶ್ವರ, ಆಜ್ರಿ, ಅಮಾಸೆಬೈಲು, ಹೊಸಂಗಡಿ-ಗ್ರಾಮ ಪಂಚಾಯತ್ ಕಚೇರಿಗಳಿಗೆ ಮೆರವಣಿಗೆಯಲ್ಲಿ ಹೋಗಿ ಪ್ರತಿಭಟನೆ ನಡೆಸಿ, ಮನವಿಯನ್ನು ನೀಡಲಾಯಿತು.





ಮೇಲ್ವಿಚಾರಕಿ ಹುದ್ದೆ ಆಯ್ಕೆ ವಿಳಂಬ ಪ್ರತಿಭಟಿಸಿ

ಅಂಗನವಾಡಿ ನೌಕರರಿಂದ ಕೆಪಿಎಸ್‌ಸಿ ಕಛೇರಿಗೆ ಮುತ್ತಿಗೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಖಾಲಿ ಇರುವ 643 ಮಹಿಳಾ ಮೇಲ್ವಿಚಾರಕಿಯರ ಹುದ್ದೆಗೆ ಕರ್ನಾಟಕ ಲೋಕ ಸೇವಾ ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿಟಿ: ಆರ್‌ಟಿ (4)ಬಿ–1/2006, ದಿನಾಂಕ: 05.10.2016ರ ಪ್ರಕಾರ ಅರ್ಜಿ ಆಹ್ವಾನಿಸಿ, 11.12.2016 ಮತ್ತು 18.12.2016ರಂದು ಎರಡು ಹಂತಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ, ನವೆಂಬರ್ 2016ರಲ್ಲಿ ಅರ್ಹತಾ ಪಟ್ಟಿಯನ್ನು ಬಿಡುಗಡೆ ಮಾಡಿ 4 ಹಂತಗಳಲ್ಲಿ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆಯನ್ನು ನಡೆಸಿತ್ತು.

ಆದರೆ, ಆಯ್ಕೆಪಟ್ಟಿಯನ್ನು ಬಿಡುಗಡೆ ಮಾಡುವಲ್ಲಿ ತನ್ನ ವಿಳಂಬ ನೀತಿಯನ್ನು ಅನುಸರಿಸುತ್ತಿತ್ತು. ಹುದ್ದೆ ಆಕಾಂಕ್ಷಿಗಳು ಹತ್ತಾರು ಬಾರಿ ಕೆಪಿಎಸ್‌ಸಿಗೆ ಹೋಗಿ ಅಧಿಕಾರಿಗಳನ್ನು ಭೇಟಿಮಾಡಿ ಮಾಡಿದಾಗ ಉಡಾಫೆಯ ಉತ್ತರ ನೀಡಿ ಕಳುಹಿಸುತ್ತಿದ್ದರು. ಇದಕ್ಕೆ ಬೇಸತ್ತು ಅಭ್ಯರ್ಥಿಗಳು ದಿನಾಂಕ: 28.11.2018ರಂದು 'ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ' ಸಿಐಟಿಯುನ ನೇತೃತ್ವದಲ್ಲಿ ಕೆಪಿಎಸ್‌ಸಿಗೆ ಮುತ್ತಿಗೆ ಹಾಕಲು ನಿರ್ಧರಿಸಿ ರಾಜ್ಯ ಅಧ್ಯಕ್ಷರಾದ ಕಾಂ॥ ವರಲಕ್ಷ್ಮಿಯವರ ನೇತೃತ್ವದಲ್ಲಿ ಹೋರಾಟ ನಡೆಸಲಾಯಿತು. 11 ಗಂಟೆಗೆ ಕೆಪಿಎಸ್‌ಸಿ ಕಛೇರಿಯ ಮುಂದೆ ಜಮಾಯಿಸಿದ ನೂರಾರು ಅಂಗನವಾಡಿ ನೌಕರರು. ವರಲಕ್ಷ್ಮಿಯವರ ನೇತೃತ್ವದಲ್ಲಿ ಕಛೇರಿಯ ಗೇಟ್ ಒಳಗೆ ನುಗ್ಗಿದರು.

ಆಗ ಪೊಲೀಸರು ಕಛೇರಿಯ 200 ಮೀಟರ್ ಒಳಗೆ ಯಾರು ಬರಬಾರದು, ಒಂದು ವೇಳೆ ಬರಬೇಕೆಂದಾದರೆ, ಅನುಮತಿ ಪಡೆಯಬೇಕು ಎಂದು ಹೇಳಿದ ಪೊಲೀಸರಿಗೆ ಸರಿಯಾದ ಉತ್ತರವನ್ನು ನೀಡಿದರು. ನಮ್ಮ ಆಯ್ಕೆಪಟ್ಟಿ ಬಿಡುಗಡೆ ಮಾಡುವವರೆಗೆ ಇಲ್ಲಿಂದ ಕದಲುವುದಿಲ್ಲವೆಂದು ಹೇಳಿ ಘೋಷಣೆ ಕೂಗಿ ಕೆಪಿಎಸ್‌ಸಿಗೆ ಧಿಕ್ಕಾರ ಕೂಗಿದರು. ಆಗ ಉಪಕಾರ್ಯದರ್ಶಿಗಳು ಮತ್ತು ಇತರ ಅಧಿಕಾರಿಗಳು ಬಂದು ಆಯ್ಕೆಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದರು. ಆದರೆ ನಿಮ್ಮ ಮಾತನ್ನು ನಂಬಲು ಸಾಧ್ಯವಿಲ್ಲ ಎಂದಾಗ ಪಟ್ಟಿಯ ಪ್ರತಿಯನ್ನು ತಂದು ಪ್ರತಿಭಟನಾಕಾರರ ಕೈಗೆ ಕೊಟ್ಟರು. ಸಂಘಟನೆಯ ಹೋರಾಟಕ್ಕೆ ಸಿಕ್ಕ ಈ ಜಯದಿಂದ 300 ಜನ ಅಂಗನವಾಡಿ ನೌಕರರು ಮೇಲ್ವಿಚಾರಕಿಯರಾಗಿ ಆಯ್ಕೆಯಾಗಲು ಸಾಧ್ಯವಾಗಿದೆ.

ಬಿಬಿಎಂಪಿ ಆಸ್ತಿ ತೆರಿಗೆ ಹೆಚ್ಚಳದ ವಿರುದ್ಧ ಪ್ರತಿಭಟನೆ


ಬಿಬಿಎಂಪಿ ಆಸ್ತಿ ತೆರಿಗೆ ಹೆಚ್ಚಳ ಮಾಡುವ ಪ್ರಸ್ತಾಪವನ್ನು ವಿರೋಧಿಸಿ ಸಿಪಿಐ(ಎಂ) ಬೆಂಗಳೂರು ಉತ್ತರ/ದಕ್ಷಿಣ ಜಿಲ್ಲಾ ಸಮಿತಿ ಆಶ್ರಯದಲ್ಲಿ ಬಿಬಿಎಂಪಿ ಪ್ರಧಾನ ಕಛೇರಿ ಎದುರು ನವೆಂಬರ್ 28ರಂದು ಪ್ರತಿಭಟನೆ ನಡೆಸಿತು. ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಉತ್ತರ ಮತ್ತು ದಕ್ಷಿಣ ಜಿಲ್ಲಾ ಕಾರ್ಯದರ್ಶಿಗಳಾದ ಆರ್.ಶ್ರೀನಿವಾಸ್ ಮತ್ತು ಕೆ.ಎನ್. ಉಮೇಶ್ ಮಾತನಾಡಿದರು. ಪಿರಮಿಡ್ ಪಾರ್ಟಿ ಆಫ್ ಇಂಡಿಯಾ ಕೂಡ ಬೆಂಬಲ ವ್ಯಕ್ತಪಡಿಸಿತು.

ಮಹಾಪೌರರಾದ ಗಂಗಾಂಬಿಕೆಯವರು ಪ್ರತಿಭಟನಾಕಾರರ ಬಳಿ ಬಂದು ಮನವಿ ಸ್ವೀಕರಿಸಿದರು. ತೆರಿಗೆ ಹೆಚ್ಚಳ ಮಾಡುವ ಉದ್ದೇಶ ಇಲ್ಲ ಎಂದಿದ್ದಾರೆ. ಮೂರು ವರ್ಷಕ್ಕೊಮ್ಮೆ ತೆರಿಗೆ ಹೆಚ್ಚಳ ಮಾಡುವ ಬದಲು ಐದು ವರ್ಷಕ್ಕೊಮ್ಮೆ ಮಾಡುವಂತಾಗಬೇಕೆಂಬ ಬೇಡಿಕೆಯನ್ನು ಚರ್ಚೆ ಮಾಡಿ ಪರಿಶೀಲಿಸಲಾಗುವುದು ಎಂದರು.

ಮನವಿಯ ಮುಖ್ಯ ಅಂಶಗಳು

* ಬಿಬಿಎಂಪಿ ವ್ಯಾಪ್ತಿಯ ಆಸ್ತಿ ತೆರಿಗೆಯನ್ನು ಗೃಹ ಬಳಕೆ ಕಟ್ಟಡಗಳಿಗೆ 25 ಶೇಕಡ ಮತ್ತು ವಾಣಿಜ್ಯ ಕಟ್ಟಡಗಳಿಗೆ 30 ಶೇಕಡ ಆಸ್ತಿ ತೆರಿಗೆ ಹೆಚ್ಚಳ ಪ್ರಸ್ತಾವವನ್ನು ನವೆಂಬರ್ 29 ರ ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ ಅನುಮೋದಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲಿದೆ ಎಂದು ವರದಿಯಾಗಿದೆ.
* 2016–17 ನೇ ಸಾಲಿನಲ್ಲಿ ಆಗಲೇ ಆಸ್ತಿ ತೆರಿಗೆ ಹೆಚ್ಚಳ ಮಾಡಲಾಗಿದೆ. ಈಗ ಮತ್ತೆ ಹೆಚ್ಚಳ ಮಾಡುವುದರಿಂದ ನಾಗರೀಕರ ಮೇಲೆ ಸದರಿ ಬೆಲೆ ಏರಿಕೆಯ ದಿನಗಳಲ್ಲಿ ಹೆಚ್ಚಿನ ಹೊರೆಯನ್ನು ಹೊರಿಸಲಿದೆ.
* ಅದೇ ಸಂದರ್ಭದಲ್ಲಿ ವಸೂಲಾಗದೆ ಉಳಿದಿರುವ ತೆರಿಗೆಯನ್ನು ವಸೂಲಿ ಮಾಡಲು ಮತ್ತು ಬಿಬಿಎಂಪಿಯ ಆರ್ಥಿಕ ಸಂಪನ್ಮೂಲಗಳನ್ನು ಉತ್ತಮ ಪಡಿಸಲು ಇರುವ ಇತರೆ ಸಂಪನ್ಮೂಲ ಸಂಗ್ರಹ ಪರ್ಯಾಯಗಳನ್ನು ಶೋಧಿಸಿ ಜಾರಿಗೊಳಿಸಬೇಕು.
* ಈ ನಿಟ್ಟಿನಲ್ಲಿ ಬಿಬಿಎಂಪಿ ಪುನರ್ ರಚನೆ ತಜ್ಞರ ಸಮಿತಿ ನೀಡಿರುವ ವರದಿಯಲ್ಲಿನ ಶಿಫಾರಸ್ಸು ಮಾರ್ಗದರ್ಶಕವಾಗಿವೆ. ಅವುಗಳನ್ನು ಅಳವಡಿಸಿ ಜಾರಿಗೊಳಿಸಬೇಕು.
* ಕರ್ನಾಟಕ ಮುನ್ಸಿಪಲ್ ಕೌನ್ಸಿಲ್ ಕಾಯ್ದೆಗೆ ಅಗತ್ಯ ತಿದ್ದುಪಡಿ ತರಲು ಆ ಮೂಲಕ ಹಾಲಿ 3 ವರ್ಷಕ್ಕೊಮ್ಮೆ ತೆರಿಗೆ ಪರಿಷ್ಕರಣೆಗೆ ಇರುವ ಅವಕಾಶವನ್ನು 5 ವರ್ಷಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರವನ್ನು ಕೋರಬೇಕು.





ಜನ ವಿಜ್ಞಾನ ಚಳುವಳಿಯ ಬದ್ಧ ನೇತಾರ

ಡಾ. ಅಮಿತ್ ಸೇನ್ ಗುಪ್ತಾ ಇನ್ನಿಲ್ಲ

– ಆರ್. ರಾಮಕೃಷ್ಣ –

ದೇಶದ ಜನಾರೋಗ್ಯ ಚಳುವಳಿಯ ಪ್ರಮುಖ ಆಧಾರ ಸ್ಥಂಭವೊಂದು ಉರುಳಿದಂತಾಗಿದೆ. ಪೀಪಲ್ಸ್ ಹೆಲ್ತ್ ಮೂವ್‌ಮೆಂಟ್(ಜನಸ್ವಾಸ್ಥ್ಯ ಅಭಿಯಾನ)ನ ರಾಷ್ಟ್ರೀಯ ಸಂಚಾಲಕರಾದ ಹಾಗೂ ಅಖಿಲ ಭಾರತ ಜನ ವಿಜ್ಞಾನ ಚಳುವಳಿಗಳ ಜಾಲ (ಎಐಪಿಎಸ್‌ಎನ್)ನ ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಡಾ. ಅಮಿತ್ ಗುಪ್ತಾ ಅವರು ನವೆಂಬರ್ 28, 2018 ರಂದು ಗೋವಾದಲ್ಲಿ ನಿಧನರಾಗಿದ್ದಾರೆ. ಅವರಿಗೆ 60 ವರ್ಷ ವಯಸ್ಸಾಗಿತ್ತು. ಡಾ. ಅಮಿತ್ ಸೇನ್ ಗುಪ್ತಾ ಅವರು ದೇಶದಲ್ಲಿ ಜನಾರೋಗ್ಯ ಚಳುವಳಿಯ ಸಂಸ್ಥಾಪಕ ಮುಖಂಡರು ಮತ್ತು ಜನಾರೋಗ್ಯ ಚಳುವಳಿಯ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮುಖಂಡರೂ ಆಗಿದ್ದರು.

ವೃತ್ತಿಯಿಂದ ವೈದ್ಯರಾಗಿದ್ದ ಡಾ. ಸೇನ್ ಗುಪ್ತ 1980ರ ದಶಕ ಆರಂಭದಲ್ಲಿ ದೆಹಲಿಯ ಮೌಲಾನಾ ಅಜಾದ್ ವೈದ್ಯಕೀಯ ಕಾಲೇಜಿನಿಂದ ವೈದ್ಯಕೀಯ ಪದವಿ ಪಡೆದ ನಂತರ ವೈದ್ಯರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ಆದರೆ ಅದನ್ನು ಅವರು ಹೆಚ್ಚು ದಿನ ಮುಂದುವರಿಸಲಿಲ್ಲ. ಬಡವರಿಗೂ ಸಹ ದುಬಾರಿ ವೈದ್ಯಕೀಯ ಶುಲ್ಕವನ್ನು ವಿಧಿಸಬೇಕಾದ ವೈದ್ಯಕೀಯ ರಂಗದ ಪರಿಸ್ಥಿತಿಯು ಅವರನ್ನು ವ್ಯಾಕುಲಗೊಳಿಸಿತು. ಈ ಅವಧಿಯಲ್ಲಿ 'ಡೆಲ್ಲಿ ಸೈನ್ಸ್ ಫೋರಂ'ನ ಸಂಪರ್ಕಕ್ಕೆ ಬಂದ ಅವರು ವೃತ್ತಿಯಿಂದ ವೈದ್ಯರಾಗುವ ಬದಲಿಗೆ ಜನ ಸಮಾನ್ಯರಿಗೆ ಔಷಧ ಮತ್ತು ಆರೋಗ್ಯ ಸೌಲಭ್ಯಗಳು ದೊರಕುವಂತೆ ಮಾಡುವ 'ಜನಸ್ವಾಸ್ಥ್ಯ ಅಭಿಯಾನ'ದ ಕಡೆಗೆ ಆಕರ್ಷಿತರಾದರು. ಈ ಕ್ಷೇತ್ರದಲ್ಲಿ ಅತ್ಯಂತ ಬದ್ಧತೆಯಿಂದ ಕೆಲಸ ಮಾಡಿದರು. ಔಷಧ ಮತ್ತು ವೈದ್ಯಕೀಯ ಸಾಧನಗಳ ಬೌದ್ಧಿಕ ಆಸ್ತಿ ಹಕ್ಕಿನ ವಿಷಯದಲ್ಲಿ ಕೂಡ ಅವರು ಸಾಕಷ್ಟು ಆಳವಾದ ತಿಳುವಳಿಕೆಯನ್ನು ಪಡೆದಿದ್ದು, ಈ ವಿಷಯದಲ್ಲಿಯೂ ಜನಸಾಮಾನ್ಯರ ದನಿಯಾಗಿ ದುಡಿದರು.

ಸದೃಢ ಸಾರ್ವಜನಿಕ ಆರೋಗ್ಯ ಕ್ಷೇತ್ರದ ಪ್ರಬಲ ಪ್ರತಿಪಾದಕರಾಗಿದ್ದ ಡಾ. ಅಮಿತ್ ಅವರು ಜಾಗತೀಕರಣ ನೀತಿಗಳು ಆರೋಗ್ಯ ಕ್ಷೇತ್ರದ ಮೇಲೆ ಉಂಟುಮಾಡಿರುವ ಪರಿಣಾಮಗಳ ಬಗೆಗೆ ಸಹ ಆಳವಾದ ಅಧ್ಯಯನ ನಡೆಸಿದವರಾಗಿದ್ದರು. ಅವರು ಆರೋಗ್ಯ ಕ್ಷೇತ್ರದ ಖಾಸಗೀಕರಣ ಮತ್ತು ಕಾರ್ಪೋರೇಟೀಕರಣದ ವಿರೋಧಿಯಾಗಿದ್ದರು. ಸುಮಾರು 3 ದಶಕಗಳ ಕಾಲ ಅವರು ಜನ ವಿಜ್ಞಾನ ಚಳುವಳಿಯಲ್ಲಿ ಅವಿಶ್ರಾಂತವಾಗಿ ದುಡಿದಿದ್ದಾರೆ. 1990ರ ದಶಕದಲ್ಲಿ ಆರಂಭವಾದ ಸಾಕ್ಷರತಾ ಆಂದೋಲನದಲ್ಲಿಯೂ ಅವರು ದುಡಿದಿದ್ದಾರೆ. ಆರೋಗ್ಯ, ಶಿಕ್ಷಣ, ಕುಡಿಯುವ ನೀರು ಮುಂತಾದ ಜನಜೀವನದ ಮೂಲಭೂತ ಅಗತ್ಯಗಳ ವಿಷಯದಲ್ಲಿ ಅಖಿಲ ಭಾರತ ಜನ ವಿಜ್ಞಾನ ಚಳುವಳಿಗಳ ಜಾಲಬಂಧ(ಎಐಪಿಎಸ್‌ಎನ್) ಸದ್ಯ ದೇಶದಾದ್ಯಂತ ನಡೆಸುತ್ತಿರುವ 'ಸಬ್ ಕಾ ದೇಶ್ – ಹಮಾರ್ ದೇಶ್' ಪ್ರಚಾರಾಂದೋಲನವನ್ನು ರೂಪಿಸುವುದರಲ್ಲಿಯೂ ಡಾ. ಅಮಿತ್ ನಿರ್ಣಾಯಕ ಪಾತ್ರ ನಿರ್ವಹಿಸಿದ್ದರು.

ಜಾಗತಿಕ ಆರೋಗ್ಯ ಸಂಸ್ಥೆಗಳ ವರದಿಗಳಿಗೆ ಪರ್ಯಾಯವಾದ ಅಧ್ಯಯನ ಮತ್ತು ವರದಿ ರೂಪಿಸುವಲ್ಲಿಯೂ ಅವರು ಮಹತ್ವದ ಪಾತ್ರವನ್ನು ವಹಿಸಿದ್ದರು. ಇತ್ತೀಚೆಗೆ ನವೆಂಬರ್ 15 ರಿಂದ 19, 2018 ರ ವರೆಗೆ ಬಾಂಗ್ಲಾದೇಶದ ಢಾಕ್ಕಾದಲ್ಲಿ ನಡೆದ 'ಜಾಗತಿಕ ಜನ ಸ್ವಾಸ್ಥ್ಯ ಸಭೆ'ಯಲ್ಲಿಯೂ ಡಾ. ಅಮಿತ್ ಅವರು ಮುಂಚೂಣಿ ಪಾತ್ರವನ್ನು ವಹಿಸಿದ್ದರು. ಸೆಪ್ಟೆಂಬರ್ 2018 ರಲ್ಲಿ ರಾಯಪುರದಲ್ಲಿ 'ರಾಷ್ಟ್ರೀಯ ಆರೋಗ್ಯ ಸಭೆ'ಯು ನಡೆಯುವುದರಲ್ಲಿಯೂ ಅವರು ಪ್ರಮುಖ ಪಾತ್ರವಹಿಸಿದ್ದರು.

ಡೆಲ್ಲಿ ಸೈನ್ಸ್ ಫೋರಂನ ಸದಸ್ಯರಾದ ಪ್ರಬೀರ್ ಪುರಕಾಯಸ್ಥ ಹೇಳುವಂತೆ "ಡಾ. ಅಮಿತ್ ಸೇನ್ ಗುಪ್ತಾ ಅವರು ಔಷಧ ಜ್ಞಾನ ಮತ್ತು ರಾಜಕೀಯ ಜ್ಞಾನವನ್ನು ಮಿಳಿತಗೊಳಿಸಿ ಜನರ ಪರವಾಗಿ ದುಡಿದರು. ಡಾ. ಅಮಿತ್ ನಿಜವಾಗಿಯೂ ಸಮಾಜದಲ್ಲಿ ಬದಲಾವಣೆ ಬಯಸಿದ್ದರು. ಅದಕ್ಕಾಗಿ ಜೀವನನುದ್ದಕ್ಕೂ ಶ್ರಮಿಸಿದರು. ಅವರಿಗೆ ವೈದ್ಯಕೀಯ ಕ್ಷೇತ್ರದ ಜ್ಞಾನದ ಜೊತೆಗೆ ಸಾಮಾಜಿಕ ಪ್ರಜ್ಞೆಯು ಪ್ರಖರವಾಗಿತ್ತು."

ಡಾ. ಅಮಿತ್ ಸೇನ್ ಗುಪ್ತಾ ಅವರು ಪತ್ನಿ ಮತ್ತು ಮಗನನ್ನು, ಬಂಧು ಮಿತ್ರರನ್ನು ಹಾಗೂ ಜನ ವಿಜ್ಞಾನ ಚಳುವಳಿಯ ಅಪಾರ ಸಂಗಾತಿಗಳನ್ನು ಅಗಲಿದ್ದಾರೆ. ಪ್ರತ್ಯಕ್ಷದರ್ಶಿಯಾದ ಅವರ ಪತ್ನಿಯ ಪ್ರಕಾರ ಡಾ. ಅಮಿತ್ ಗೋವಾದ ಬೆಟಲ್ ಬಾಟಿಮ್ ಸಮುದ್ರ ಕಿನಾರೆಯಲ್ಲಿ ಮೊಣಕಾಲುದ್ದ ನೀರಿನಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ಅವರು ನೀರಿನಲ್ಲಿದ್ದರು. ಆ ನಂತರ ನೋಡಿದಾಗ ಅವರು ಕಾಣೆಯಾದರು. ಸಮುದ್ರ ತೀರದ ರಕ್ಷಕ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ಅವರು ಅಲ್ಲಿಯೇ ನೀರಿನಲ್ಲಿ ಬಿದ್ದದ್ದು ಕಂಡು ಬಂತು. ತಕ್ಷಣ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಆಸ್ಪತ್ರೆಯಲ್ಲಿ ಡಾ. ಅಮಿತ್ ಮೃತರಾಗಿದ್ದಾರೆ ಎಂದು ಘೋಷಿಸಲಾಯಿತು. ಘಟನೆ ನಡೆದ ಪ್ರದೇಶದ ಕೋಲ್ವಾ ಪೋಲಿಸ್ ಠಾಣೆಯ ಪೋಲೀಸರು ಇದೊಂದು ಸಹಜ ಸಾವಿನ ಪ್ರಕರಣ ಎಂದು ತಿಳಿಸಿದ್ದಾರೆ. ಮರಣೋತ್ತರ ವರದಿ ಬಂದ ನಂತರ ಸಾವಿನ ನಿಖರವಾದ ಕಾರಣ ತಿಳಿಯಲಿದೆ.

ಡಾ. ಅಮಿತ್ ಸೇನ್ ಗುಪ್ತಾ ಅವರು ನ್ಯಾಯ, ಸಮಾನತೆ, ವೈಚಾರಿಕತೆಯನ್ನು ಆಧರಿಸಿದ ಸಮಾಜವನ್ನು ಕಟ್ಟಲು ಬದ್ಧವಾಗಿದ್ದ ನೇತಾರ ಎಂದೂ, ಈ ಉದಾತ್ತ ಉದ್ದೇಶಕ್ಕಾಗಿ ಅವರು ಜೀವನವಿಡಿ ಜನರನ್ನು ಸಂಘಟಿಸಿದರು, ಅದಕ್ಕಾಗಿ ಬರೆದರು, ಮಾತನಾಡಿದರು, ಸಂಶೋಧನೆ ನಡೆಸಿದರು, ಇಂತಹ ಉದಾತ್ತ ಉದ್ದೇಶಕ್ಕಾಗಿ ನಾವೆಲ್ಲಾ ಶ್ರಮಿಸುವುದೇ ನಾವು ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ ಎಂದು, ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಕಾರ್ಯಕಾರಿ ಸಮಿತಿಯು, ತನ್ನ ಶ್ರದ್ಧಾಂಜಲಿ ಸಂದೇಶದಲ್ಲಿ ತಿಳಿಸಿದೆ.

ಮಲೈ ಅರಯನ್ ಆದಿವಾಸಿ ಸಮುದಾಯದ ಗುಡಿಗಳನ್ನು ಕೇರಳ ರಾಜರು ಹಾಗೂ ಆಸ್ಥಾನ ಪುರೋಹಿತರು ಕೈವಶ ಮಾಡಿಕೊಂಡ ಚರಿತ್ರೆ ಅಯ್ಯಪ್ಪನ ಚರಿತ್ರೆಯಾಗಿದೆ. ಕೇರಳದ ಕೋಟ್ಟಯಂ, ಇಡುಕ್ಕಿ, ಪಟ್ಟಣಂತಿಟ್ಟ ಜಿಲ್ಲೆಗಳ ಗುಡ್ಡಗಾಡು ಪ್ರದೇಶದಲ್ಲಿ ಬಹುಸಂಖ್ಯಾಕರಾಗಿದ್ದ 'ಮಲೈ ಅರಯನ್' ಎಂಬ ಆದಿವಾಸಿ ಜನಾಂಗ, 'ಅಯ್ಯಪ್ಪ' ತನ್ನ ಮೂಲಪುರುಷನೆಂದು ಹೇಳಿಕೊಳ್ಳುತ್ತದೆ. ಹಲವು ಶತಮಾನಗಳ ಹಿಂದೆಯೇ ಅಯ್ಯಪ್ಪನ ಆರಾಧನೆಯನ್ನು ಮಲೈ ಅರಯನ್ ಸಮುದಾಯದವರು ಮಾಡಿಕೊಂಡು ಬಂದಿದ್ದರು ಎಂದು ತಿಳಿದು ಬರುತ್ತಿದೆ. ರಾಜರು ಹಾಗೂ ಮತ್ತವರ ಆಸ್ಥಾನಿಗರಾದ ನಂಬೂದಿರಿ ಬ್ರಾಹ್ಮಣರು ದಟ್ಟ ಅರಣ್ಯವನ್ನು ವಶ ಪಡಿಸಿಕೊಳ್ಳಲು ನಡೆಸಿದ ದಬ್ಬಾಳಿಕೆಗಳಿಂದ ತಪ್ಪಿಸಿಕೊಳ್ಳಲು ಮಲೈ ಅರಯನ್ನರು ತಮ್ಮ ಮೂಲಸ್ಥಾನವನ್ನು ಬಿಟ್ಟು ವಲಸೆ ಹೋಗುತ್ತಾರೆ. ಅಯ್ಯಪ್ಪ ಗುಡಿ ಶಾಶ್ವತವಾಗಿ ಆದಿವಾಸಿಗಳಿಂದ ಕೈತಪ್ಪಿಹೋಗುತ್ತದೆ. ಈಗ ಶಬರಿಮಲೆ ಅಯ್ಯಪ್ಪ ದೇವಸ್ಥಾನವೆಂದು ಖ್ಯಾತವಾದ ಗುಡಿಗೆ 1942ರಲ್ಲಷ್ಟೆ ಬ್ರಾಹ್ಮಣ ಅರ್ಚಕರು ಪ್ರವೇಶಿಸುತ್ತಾರೆ. ಅಯ್ಯಪ್ಪನು ಹರಿಹರಸುತನೆಂದು ನಿರೂಪಿಸುವ ಪುರಾಣ ಬಹುಶ: ಗುಡಿಯು ಬ್ರಾಹ್ಮಣ ಅರ್ಚಕರು ಬಂದ ಮೇಲೆ ಸೃಷ್ಟಿಯಾದುದಾಗಿರಬೇಕು. ಎಲ್ಲ ಮಹಿಳೆಯರಿಗೂ ಪ್ರವೇಶವಿದ್ದ ದೇಗುಲದಲ್ಲಿ 1991 ರಿಂದ 10–50 ವಯಸ್ಸಿನ ಮಹಿಳೆಯರಿಗೆ ನಿರ್ಬಂಧ ಹೇರಲಾಯಿತು. ಶಬರಿಮಲೆ ಬೆಟ್ಟದ ಈ ದೇಗುಲಕ್ಕೆ ತಾವು ವಾರೀಸುದಾರರು ಎಂಬುದಾಗಿ ಮಲೈ ಅರಯನ್ ಆದಿವಾಸಿ ಸಮುದಾಯದವರು ಇದೀಗ ಸುಪ್ರೀಂ ಕೋರ್ಟಿಗೆ ಮನವಿ ಸಲ್ಲಿಸಿದ್ದಾರೆ. ಇದು 'ಅಯ್ಯಪ್ಪ ದೇವರ' ನಿಜವಾದ ಚರಿತ್ರೆ.

'ಅಯ್ಯಪ್ಪ'ನ ನಿಜವಾದ ಚರಿತ್ರೆ

ಆದಿವಾಸಿಗಳಿಂದ ಬ್ರಾಹ್ಮಣಶಾಹಿ ಕಿತ್ತುಕೊಂಡ ದೇವರು: ಅಯ್ಯಪ್ಪ

ವಾಸುದೇವ ಉಚ್ಚಿಲ

ವಿಶೇಷ ಲೇಖನ

ಕ್ರಿ.ಶ. 8–9ನೇ ಶತಮಾನಕ್ಕೂ ಮೊದಲು ಕೇರಳದಲ್ಲಿ ದೇವಾಲಯ ಸಂಸ್ಕೃತಿ ಇರಲಿಲ್ಲವೆಂಬುದರ ಬಗ್ಗೆ ಎಂ.ಜಿ.ಎಸ್.ನಾರಾಯಣನ್ ಮತ್ತು ಇತರ ಇತಿಹಾಸಜ್ಞರು ವ್ಯಾಪಕವಾಗಿ ಬರೆದಿದ್ದಾರೆ. 'ಕಾವು' ಅಥವಾ ಪವಿತ್ರ ಬನಗಳು ಹಿಂದೆ ಇದ್ದುವು. ಅವರ್ಣ ಸಂಸ್ಕೃತಿ ಹಾಗೂ ಬೌದ್ಧ ಸಂಸ್ಕೃತಿಗಳು ಇದ್ದ ಆಧಾರಗಳಿವೆ ಎಂದವರು ಹೇಳುತ್ತಾರೆ. ಆ ಜಾಗಗಳನ್ನೇ ವೈದಿಕ ಹಾಗೂ ಇತರ ಮೇಲ್ವರ್ಗದವರು ಸ್ವಾಧೀನಪಡಿಸಿದರೆಂದು ತಿಳಿದು ಬರುತ್ತದೆ. ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿಯೂ ಮೊದಲು ಬೌದ್ಧ ಧರ್ಮ ಪ್ರಚಲಿತವಿದ್ದು, ಆ ಧರ್ಮಕ್ಕೆ ಸಂಬಂಧಿಸಿದ ವಾಸ್ತು ರಚನೆಗಳು ವೈದಿಕ ದೇವಾಲಯಗಳಾದ ಬಗ್ಗೆ ಇತಿಹಾಸಜ್ಞರು ಹೇಳುತ್ತಾರೆ. ಉದಾಹರಣೆಗೆ ಮಂಗಳೂರಿನ ಕದ್ರಿ ಮಂಜುನಾಥ ದೇವಾಲಯವು ಮೊದಲು ಬೌದ್ಧ ಆಲಯವಾಗಿತ್ತು.

ಮಲೈ ಅರಯನ್ ಆದಿವಾಸಿ ಸಮುದಾಯದ ಗುಡಿಗಳನ್ನು ಕೇರಳ ರಾಜರು ಹಾಗೂ ಆಸ್ಥಾನ ಪುರೋಹಿತರು ಕೈವಶ ಮಾಡಿಕೊಂಡ ಚರಿತ್ರೆ ಅಯ್ಯಪ್ಪನ ಚರಿತ್ರೆಯಾಗಿದೆ. ಅಂತೆಯೇ ಪುಲಯರ್ ಎಂಬ ದಲಿತ ಸಮುದಾಯದ ಗುಡಿಗಳನ್ನು ರಾಜರೂ ಪುರೋಹಿತರು ಕೈವಶ ಮಾಡಿಕೊಂಡಿದ್ದಾರೆ. ಕೆಳಜಾತಿಗಳ ದೈವಗಳ ಗುಡಿಗಳನ್ನು ಮೇಲ್ವರ್ಗದವರು ಕೈವಶಮಾಡಿ ದೇವಾಲಯಗಳಾಗಿ ಮಾಡಿದ ಅನೇಕ ಉದಾಹರಣೆಗಳು ಕರಾವಳಿ ಕರ್ನಾಟಕದಲ್ಲೂ ಇವೆ. ದುರ್ಗೆಯ ಸ್ವರೂಪದಲ್ಲಿ ಕಟೀಲು, ಮಂದರ್ತಿ, ಅಂಬಲ್ಪಾಡಿ ಮೊದಲಾದೆಡೆ ಇಂದು ಆರಾಧಿಸಲ್ಪಡುವ ದೇವಿಯರು ಹಿಂದೆ ಮಾತೃಮೂಲೀಯ ತುಳುವರ ಆದಿಮ ಸ್ವರೂಪದ ಮಾತೃದೇವತೆಗಳಾಗಿದ್ದುದಾಗಿ ತಿಳಿದು ಬರುತ್ತದೆ. ಕುಕ್ಕೆ ಸುಬ್ರಹ್ಮಣ್ಯದ ಮಲೆಕುಡಿಯರ ಮೂಲದೇವತೆ ನಾಗಸ್ವರೂಪಿಯಾಗಿದ್ದ ದೈವವನ್ನು, ಮೇಲ್ವರ್ಗದವರು ವಶಪಡಿಸಿದ್ದು, ಇಂದು ಸುಬ್ರಹ್ಮಣ್ಯನೆಂದು ಆರಾಧಿಸುತ್ತಿದ್ದಾರೆ; ಅಲ್ಲದೆ ಮೂಲ ಆರಾಧಕರಾದ ಮಲೆಕುಡಿಯರಿಗೆ ಸುಬ್ರಹ್ಮಣ್ಯದಲ್ಲಿ ಇಂದು ಚಾಕರಿ ಹಾಗೂ ಬಿಟ್ಟಿಸೇವೆಗಳು ಮಾತ್ರ ಲಭಿಸಿದೆ.

ಶಬರಿಮಲೆ ಅಯ್ಯಪ್ಪನ ಚರಿತ್ರೆಯೂ ಆದಿವಾಸಿಗಳಿಂದ ಅವರ ದೈವವನ್ನು ಕಿತ್ತುಕೊಂಡು, ಆದಿವಾಸಿಗಳನ್ನು ಕಾಡುಪಾಲು ಮಾಡಿದ ಚರಿತ್ರೆಯೂ ಆಗಿದೆ. ಕೇರಳದ ಮೇಲು ಜಾತಿಯ ವೈದಿಕರು ಎಂದಿಗೂ ಅಯ್ಯಪ್ಪನ ಹೆಸರನ್ನು ಮಕ್ಕಳಿಗೆ ಇಡುವುದಿಲ್ಲ. ಕೆಳಜಾತಿಯವರಲ್ಲಿ ಅದರಲ್ಲೂ ದಲಿತರು ಮತ್ತು ಆದಿವಾಸಿಗಳಲ್ಲಿ ಇದು ಸಾಮಾನ್ಯ ಹೆಸರಾಗಿದೆ. ವೈದಿಕ ದೇವರುಗಳಲ್ಲೂ ಅಯ್ಯಪ್ಪನ ಹೆಸರಿಲ್ಲ. ಆದುದರಿಂದ ಶಬರಿಮಲೆ ಗುಡಿಯು ಮೊದಲು ಅವರ್ಣೀಯರ ಗುಡಿಯಾಗಿತ್ತು. ಆದಿವಾಸಿಗಳ ನಾಯಕರಾಗಿದ್ದ ಅಯ್ಯನ್ ಅಯ್ಯನಾರ್ ಎಂಬಾತನೇ ಅಯ್ಯಪ್ಪ ಎಂಬುದಾಗಿ ಕರೆಯಲ್ಪಟ್ಟ ಎಂಬುದಾಗಿ ರಾಜನ್ ಗುರುಕ್ಕಳ್ ಮತ್ತು ಇತರ ಇತಿಹಾಸಕಾರರು ವಾದಿಸುತ್ತಾರೆ.

ಮಹಿಳೆಯರಿಗೆ ಶಬರಿಮಲೆ ದೇಗುಲ ಪ್ರವೇಶಕ್ಕೆ ಅವಕಾಶ ಕೊಟ್ಟ ಸುಪ್ರೀಮ್ ಕೋರ್ಟಿನ ಆದೇಶವನ್ನು ಪ್ರತಿಭಟಿಸುತ್ತಿರುವವರಿಗಾಗಲೀ, ಧಾರ್ಮಿಕ ನಂಬಿಕೆಗಳ ಬಗ್ಗೆ ಕೋರ್ಟು ತೀರ್ಪು ನೀಡಬಾರದು ಎಂದು ವಾದಿಸುವವರಿಗಾಗಲೀ, ಅವಗಣಿತ ತಳಸಮುದಾಯಗಳ ನಂಬಿಕೆಗಳು ಧಾರ್ಮಿಕ ನಂಬಿಕೆಗಳಲ್ಲ; ಆಕ್ರಮಣಕಾರಿ ಮೇಲ್ವರ್ಗದ ನಂಬಿಕೆಗಳು ಮಾತ್ರ ನಂಬಿಕೆಗಳಾಗಿರುವುದು ವಿಚಿತ್ರ !

ಕೇರಳದ ಕೋಟ್ಟಯಂ, ಇಡುಕ್ಕಿ, ಪಟ್ಟಣಂತಿಟ್ಟ ಜಿಲ್ಲೆಗಳ ಗುಡ್ಡಗಾಡು ಪ್ರದೇಶದಲ್ಲಿ ಬಹುಸಂಖ್ಯಾಕರಾಗಿದ್ದ 'ಮಲೈ ಅರಯನ್' ಎಂಬ ಆದಿವಾಸಿ ಜನಾಂಗ, 'ಅಯ್ಯಪ್ಪ' ತನ್ನ ಮೂಲಪುರುಷನೆಂದು ಹೇಳಿಕೊಳ್ಳುತ್ತದೆ. ಅವರಲ್ಲಿ ಪ್ರಚಲಿತವಿರುವ ನಂಬಿಕೆಗಳ ಪ್ರಕಾರ ಕಂಡನ್ ಮತ್ತು ಕರುತ್ತಮ್ಮ ಎಂಬ ಮಲೈ ಅರಯನ್ ಬುಡಕಟ್ಟಿನ ಮುಂದಾಳು ದಂಪತಿಗೆ ಹುಟ್ಟಿದ ಮಗನೇ ಅಯ್ಯಪ್ಪ. ಚೋಳ ರಾಜರ ದಬ್ಬಾಳಿಕೆಗಳಿಂದ ಅಯ್ಯಪ್ಪನು ತನ್ನ ಸಮುದಾಯವನ್ನು ರಕ್ಷಿಸುತ್ತಾನೆ.



ಅಯ್ಯಪ್ಪನ ಮರಣಾನಂತರ ಎಂಟು ಬೆಟ್ಟಗಳ ಸಾಲಿನ 'ಕರಿಮಲೆ'ಯಲ್ಲಿ ಮಲೈ ಅರಯನ್ ಸಮುದಾಯದವರು ಪುಟ್ಟದೊಂದು ಗುಡಿ ಕಟ್ಟಿ ಅವನ ಆರಾಧನೆ ಪ್ರಾರಂಭಿಸುತ್ತಾರೆ. ಆದಿವಾಸಿಗಳ ಈ ಸ್ಥಳ ಪುರಾಣವನ್ನು ಗಮನಿಸಿದರೆ, ಹಲವು ಶತಮಾನಗಳ ಹಿಂದೆಯೇ ಅಯ್ಯಪ್ಪನ ಆರಾಧನೆಯನ್ನು ಮಲೈ ಅರಯನ್ ಸಮುದಾಯದವರು ಮಾಡಿಕೊಂಡು ಬಂದಿದ್ದರು ಎಂದು ತಿಳಿದು ಬರುತ್ತಿದೆ.



ಕಣ್ಣೂರಿನಲ್ಲಿರುವ ಅಯ್ಯಪ್ಪ ಮೂರ್ತಿ

ಮುಂದೆ ಪಂದಳಂ ಅರಸರ ಕಾಲದಲ್ಲಿ ಅಯ್ಯಪ್ಪ ಗುಡಿ ಹಾಗೂ ಸುತ್ತಲಿನ ಬೆಟ್ಟ ಪ್ರದೇಶ ರಾಜಾಡಳಿತದ ವಶಕ್ಕೆ ಬರುತ್ತದೆ. ಪಂದಳ ರಾಜರು ಹಾಗೂ ಮತ್ತವರ ಆಸ್ಥಾನಿಗರಾದ ನಂಬೂದಿರಿ ಬ್ರಾಹ್ಮಣರು ದಟ್ಟ ಅರಣ್ಯವನ್ನು ತಮ್ಮ ವಶ ಇಟ್ಟುಕೊಳ್ಳುವ ದೃಷ್ಟಿಯಿಂದ ಮಲೈ ಅರಯನ್ನರಿಗೆ ಹಲವು ಬಗೆಯ ಕಿರುಕುಳಗಳನ್ನು ನೀಡಿದರೆಂದು ತಿಳಿಯುತ್ತದೆ. ಈ ದಬ್ಬಾಳಿಕೆಗಳಿಂದ ತಪ್ಪಿಸಿಕೊಳ್ಳಲು ಮಲೈ ಅರಯನ್ನರು ತಮ್ಮ ಮೂಲಸ್ಥಾನವನ್ನು ಬಿಟ್ಟು 'ತೋಡುಂಪುಳ' ಅರಣ್ಯ ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ಅಯ್ಯಪ್ಪ ಗುಡಿ ಶಾಶ್ವತವಾಗಿ ಆದಿವಾಸಿಗಳಿಂದ ಕೈತಪ್ಪಿಹೋಗುತ್ತದೆ.

ಈಗ ಶಬರಿಮಲೆ ಅಯ್ಯಪ್ಪ ದೇವಸ್ಥಾನವೆಂದು ಖ್ಯಾತವಾದ ಗುಡಿಗೆ 1942ರಲ್ಲಷ್ಟೆ ಬ್ರಾಹ್ಮಣ ಅರ್ಚಕರು ಪ್ರವೇಶಿಸುತ್ತಾರೆ. ತುರುವಾಂಕೂರು ಸಂಸ್ಥಾನದ ಅಂದಿನ ರಾಜ, ಚೆಂಗನ್ನೂರು ಮೂಲದ ತಳಮೋಳ್ ಬ್ರಾಹ್ಮಣ ತಂತ್ರಿಗೆ ಅಯ್ಯಪ್ಪನ ಗುಡಿಯ ಪೂಜೆಯ ಅಧಿಕಾರವನ್ನು ವಹಿಸಿಕೊಡುತ್ತಾನೆ. 1950ರಲ್ಲಿ ಅಂದಿನ ತಿರುವಾಂಕೂರು ರಾಜ್ಯದ ಅಡಿಯಲ್ಲಿ ರಚಿಸಲಾಗಿದ್ದ 'ತಿರುವಾಂಕೂರು ದೇವಸ್ವಂ ಬೋರ್ಡ್' (ಟಿಡಿಬಿ) ವ್ಯಾಪ್ತಿಯಲ್ಲಿ ಈ ದೇವಾಲಯವನ್ನು ತರಲಾಯಿತು. ಇಂದಿನ ಕೇರಳ ರಾಜ್ಯದಲ್ಲೂ, ಟಿಡಿಬಿ ಆಡಳಿತದಡಿ ದೇವಾಲಯವನ್ನು ನಿರ್ವಹಿಸಲಾಗುತ್ತಿದೆ.

1950ರ ಆನಂತರದ ಅವಧಿಯಲ್ಲಿ ಆಡಳಿತವರ್ಗದ ಬೆಂಬಲದಿಂದಲೇ ದೇವಾಲಯಕ್ಕೆ ಬೆಂಕಿ ಬಿದ್ದಿತೆಂದೂ, ಮೂಲವಿಗ್ರಹ ವಿರೂಪವಾಯಿತೆಂದೂ ತಿಳಿಯುತ್ತದೆ. 1951 ರಲ್ಲಿ ವಿಶಿಷ್ಟ ಭಂಗಿಯ ವೈದಿಕ ರೂಪದ ಅಯ್ಯಪ್ಪನ ಇಂದಿನ ವಿಗ್ರಹವನ್ನು ಪಂಚಲೋಹದಲ್ಲಿ ಚೆಂಗನ್ನೂರಿನ ಪಾರ್ವತಿ ಜ್ಯುವೆಲ್ಲರ್ಸ್‌ನಲ್ಲಿ ಮಾಡಿಸಿ ಪ್ರತಿಷ್ಠಾಪಿಸಲಾಯಿತು. ವಿರೂಪಗೊಂಡ ಮೂಲ ಬುಡಕಟ್ಟಿನ ವಿಗ್ರಹವನ್ನು ಬದಲಿಸಲಾಯಿತು. ಶಬರಿಮಲೆ ಗುಡಿಯ ಮೂರ್ತಿಯಲ್ಲಿ ಮೂಲ ಆದಿವಾಸಿ ಚಹರೆಯೇ ಇಲ್ಲದಂತೆ ಮಾಡಲಾಯಿತು. ಅಲ್ಲಿಂದೀಚೆಗೆ ಸಂಪೂರ್ಣವಾಗಿ ಬ್ರಾಹ್ಮಣ ತಂತ್ರಿಗಳಿಂದ ವೈದಿಕ ರೀತಿಯ ಪೂಜಾವಿಧಿಗಳು ನಡೆಯುತ್ತಿವೆ. ಬುಡಕಟ್ಟಿನವರು 'ತೇನಾಭಿಷೇಕಂ' (ಜೇನಿನ ಅಭಿಷೇಕ) ಮಾಡುತ್ತಿದ್ದ ಜಾಗದಲ್ಲಿ 'ನೆಯ್ಯಾಭಿಷೇಕಂ' (ತುಪ್ಪದ ಅಭಿಷೇಕ) ಚಾಲ್ತಿಗೆ ಬಂದಿದೆ. ಅನೇಕ ಪ್ರಸಿದ್ಧ ದೇವಾಲಯಗಳಂತೆ ಶಬರಿ ಮಲೆಯೂ ಇಂದು ಧಾರ್ಮಿಕ ಉದ್ಯಮ ಕೇಂದ್ರವಾಗಿದೆ.


ಅಯ್ಯಪ್ಪನ ಗುಡಿಯನ್ನು ಕಳೆದುಕೊಂಡ ಮಲೈ ಅರಯನ್ನರು ಏನು ಮಾಡಿದರು ಗೊತ್ತೆ? ಶಬರಿ ಮಲೆಯ ಎದುರಿರುವ ಪೊನ್ನಂಬಲಮೇಡು ಗುಡ್ಡದಲ್ಲಿ ಕರ್ಪೂರ ಹಚ್ಚಿ ಅಯ್ಯಪ್ಪನಿಗೆ ದೂರದಿಂದಲೇ ಪೂಜಿಸುತ್ತಿದ್ದರು. ಇದೇ ಮಕರವಿಳಕ್ಕು. ದೇವಸ್ವಂ ಬೋರ್ಡಿನವರು ಅವರನ್ನು ಅಲ್ಲಿಂದಲೂ ಓಡಿಸಿ, ತಾವೇ ಕರ್ಪೂರ ಹಚ್ಚಿ, ಮಕರವಿಳಕ್ಕಿಗೆ ಪವಾಡದ ಪ್ರಚಾರ ನೀಡಿದರು. ಪವಾಡ ಸುಳ್ಳೆಂದು ವಿಚಾರವಾದಿಗಳು ಬಹಳ ವರ್ಷಗಳ ಹಿಂದೆಯೇ ತೋರಿಸಿಕೊಟ್ಟಿದ್ದಾರೆ. ಕೇರಳ ಸರ್ಕಾರವೇ, ತಾನೂ ದೇವಸ್ವಂ ಮಂಡಳಿಯೂ ಕೂಡಿ ಮಕರವಿಳಕ್ಕನ್ನು ಹಚ್ಚುತ್ತಿದ್ದೇವೆ ಎಂದೂ ಒಪ್ಪಿಕೊಂಡಿದೆ.

ಅಯ್ಯಪ್ಪನು ಹರಿಹರಸುತನೆಂದು ನಿರೂಪಿಸುವ ಪುರಾಣ ಬಹುಶ: ಗುಡಿಯು ಬ್ರಾಹ್ಮಣ ಅರ್ಚಕರು ಬಂದ ಮೇಲೆ ಸೃಷ್ಟಿಯಾದುದಾಗಿರಬೇಕು. ಬರಿಯ 75 ವರ್ಷಗಳ ಅವಧಿಯಲ್ಲಿ ಈ ಕಟ್ಟುಕತೆಯನ್ನು ನಂಬಿ, ಭಕ್ತರಾದ ಲಕ್ಷಾಂತರ ಮಂದಿ ಇದ್ದಾರೆ.

ಎಲ್ಲ ಮಹಿಳೆಯರಿಗೂ ಪ್ರವೇಶವಿದ್ದ ದೇಗುಲದಲ್ಲಿ 1991 ರಿಂದ 10–50 ವಯಸ್ಸಿನ ಮಹಿಳೆಯರಿಗೆ ನಿರ್ಬಂಧ ಹೇರಲಾಯಿತು. ಈಚೆಗೆ 28 ಸಪ್ಟೆಂಬರ್ 2018 ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪು, ಎಲ್ಲ ಮಹಿಳೆಯರಿಗೆ ಶಬರಿಮಲೆ ದೇಗುಲಕ್ಕೆ ಪ್ರವೇಶಕ್ಕೆ ಅವಕಾಶ ನೀಡಿದೆ. ಇದನ್ನು ವಿರೋಧಿಸಿ ಹಿಂದೂತ್ವವಾದಿ ಸಂಘಟನೆಗಳು, ಕೇರಳದ ಕಾಂಗ್ರೆಸ್ ಪಕ್ಷ ಮಾಡುತ್ತಿರುವ ಪ್ರತಿಭಟನೆಗಳು ಮತ್ತು ಅವುಗಳ ಹಿಂದಿನ ರಾಜಕೀಯ, ಪ್ರತ್ಯೇಕ ಅಧ್ಯಯನದ ವಿಷಯವಾಗಿದೆ.

ಶಬರಿಮಲೆ ಬೆಟ್ಟದ ಈ ದೇಗುಲಕ್ಕೆ ತಾವು ವಾರೀಸುದಾರರು ಎಂಬುದಾಗಿ ಮಲೈ ಅರಯನ್ ಆದಿವಾಸಿ ಸಮುದಾಯದವರು ಇದೀಗ ಸುಪ್ರೀಂ ಕೋರ್ಟಿಗೆ ಮನವಿ ಸಲ್ಲಿಸಿದ್ದಾರೆ. 'ಐಕ್ಯ ಮಲೈ ಅರಯನ್ ಮಹಾಸಭಾ'ದ ಕಾರ್ಯದರ್ಶಿ ಹಾಗೂ ಸಂಶೋಧಕರೂ ಆದ ಪಿ.ಕೆ.ಸಂಜೀವ್ ಅವರು ಶಬರಿಮಲೆ ಹಾಗೂ ಪಕ್ಕದಲ್ಲಿರುವ ಕರಿಮಲೆಯಲ್ಲಿರುವ ದೇವಾಲಯಗಳು 20ನೇ ಶತಮಾನದ ಆರಂಭದ ಕೆಲವು ವರ್ಷಗಳ ವರೆಗೂ ತಮ್ಮ ಸಮುದಾಯದ ವಶದಲ್ಲೇ ಇತ್ತು; ಹಾಗಾಗಿ ಆ ದೇಗುಲದ ಹಕ್ಕುಗಳನ್ನು ತಮಗೇ ಕೊಡಬೇಕೆಂದು ವಾದಿಸುತ್ತಿದ್ದಾರೆ. ಮೊದಲ ಅರ್ಚಕನಾಗಿದ್ದ ಕರಿಮಲ ಅರಯನ್ ಹೆಸರು ಅಯ್ಯಪ್ಪ ಗುಡಿಯ 18 ಮೆಟ್ಟಲುಗಳ ಕೆಳಗಿನ ಮೆಟ್ಟಲಲ್ಲಿ ಕೊರೆಯಲಾಗಿದೆ ಎಂದು ಅವರು ಹೇಳುತ್ತಾರೆ. ಅವರ ಹೇಳಿಕೆಯಂತೆ 18 ಮೆಟ್ಟಲುಗಳು ಶಬರಿಮಲೆಯ ಸುತ್ತಲಿನ 18 ಬೆಟ್ಟಗಳ ಸಂಕೇತ. ಮಲೈ ಅರಯನ್ ಸಮುದಾಯದಿಂದ ದೇಗುಲದ ಒಡೆತನವನ್ನು ಇಂದು ಪಾರಂಪರಿಕ ಅರ್ಚಕರೆನೆಸಿರುವ ತಂತ್ರಿಗಳು ತಮ್ಮಿಂದ ಕಿತ್ತುಕೊಂಡರೆಂದು ಆರೋಪಿಸುತ್ತಾರೆ. ಅಲ್ಲದೆ ತಮಗಿದ್ದ 'ತೇನಾಭಿಷೇಕಂ' ಮತ್ತು ಪೊನ್ನಂಬಲವೀಡುವಿನ 'ಮಕರವಿಳಕ್ಕು' ಹಚ್ಚುವ ಅಧಿಕಾರವನ್ನೂ ಕಿತ್ತುಕೊಂಡರೆಂಬುದು ಅವರ ಆರೋಪ.

ಮಹಿಳೆಯರಿಗೆ ಶಬರಿಮಲೆ ದೇಗುಲ ಪ್ರವೇಶಕ್ಕೆ ಅವಕಾಶಕೊಟ್ಟ ಸುಪ್ರೀಮ್ ಕೋರ್ಟಿನ ಆದೇಶವನ್ನು ಪ್ರತಿಭಟಿಸುತ್ತಿರುವವರಿಗಾಗಲೀ, ಧಾರ್ಮಿಕ ನಂಬಿಕೆಗಳ ಬಗ್ಗೆ ಕೋರ್ಟು ತೀರ್ಪು ನೀಡಬಾರದು ಎಂದು ವಾದಿಸುವವರಿಗಾಗಲೀ, ಅವಗಣಿತ ತಳಸಮುದಾಯಗಳ ನಂಬಿಕೆಗಳು ಧಾರ್ಮಿಕ ನಂಬಿಕೆಗಳಲ್ಲ; ಆಕ್ರಮಣಕಾರಿ ಮೇಲ್ವರ್ಗದ ನಂಬಿಕೆಗಳು ಮಾತ್ರ ನಂಬಿಕೆಗಳಾಗಿರುವುದು ವಿಚಿತ್ರ!



<u>**ಗಡಿಗಳಲ್ಲಿ ಒಂದು ಕಾರಿಡಾರ್ ನಿರ್ಮಾಣಕ್ಕೆ ತೆಗೆದುಕೊಂಡಿರುವ ಹೆಜ್ಜೆ ಎರಡೂ ದೇಶಗಳ ನಡುವೆ ಒಂದು ಸೌಹಾರ್ದ ವಾತಾವರಣ ಸೃಷ್ಟಿಗೆ ಸಹಕಾರಿಯಾಗಬಹುದೆಂಬ ಆಶಾವಾದ ಕೇವಲ ಒಂದೆರಡು ದಿನಗಳಲ್ಲಿ ಹುಸಿಯಾಗಿವೆ. ಶಂಕು ಸ್ಥಾಪನೆ ದಿನದಂದೇ ವಿದೇಶಾಂಗ ಸಚಿವೆ ಪಾಕಿಸ್ತಾನ್ ಆಹ್ವಾನವನ್ನು ತಿರಸ್ಕರಿಸುವ ವಿಚಾರವನ್ನು ಘೋಷಿಸಿದರು. ಇದು ಪಾಕಿಸ್ತಾನದ ಜೊತೆಗಿನ ಬಾಂಧವ್ಯಕ್ಕೆ ಸಂಬಂಧಿಸಿದಂತೆ ಮೋದಿ ಸರಕಾರದ ವಿರೋಧಾಭಾಸದ ಹಾಗೂ ತಾನೇ ಸೋಲುಂಟು ಮಾಡಿಕೊಳ್ಳುವ ಧೋರಣೆಯನ್ನು ಮತ್ತೊಮ್ಮೆ ಎತ್ತಿ ತೋರಿಸಿದೆ.**</u>



*** ಪ್ರಕಾಶ್ ಕಾರಟ್**

ಕರ್ತಾರ್‌ಪುರ ಕಾರಿಡಾರ್‌ನ ಸಾಧ್ಯತೆಗಳು ಮತ್ತು ಮೋದಿ ಸರಕಾರದ ಎಡಬಿಡಂಗಿ ಪಾಕ್–ಧೋರಣೆ

ಭಾರತದ ಕಡೆಯಿಂದ ಪಾಕಿಸ್ತಾನದ ಕರ್ತಾರ್‌ಪುರದಲ್ಲಿರುವ ಗುರುದ್ವಾರ ದರ್ಬಾರ್ ಸಾಹಿಬ್‌ವರೆಗೆ ಕಾರಿಡಾರ್ ನಿರ್ಮಾಣ ಮಾಡುವ ನಿರ್ಧಾರವು ಉಭಯ ದೇಶಗಳ ನಡುವಿನ ದೀರ್ಘ ಕಾಲದ ಬಿಗುವಿನ ಪರಿಸ್ಥಿತಿಯ ನಂತರ ಭಾರತ ಮತ್ತು ಪಾಕಿಸ್ತಾನ ಸರಕಾರಗಳು ಸಹಕಾರಕ್ಕೆ ಒಪ್ಪಿರುವ ಕೆಲವೇ ಅಪರೂಪದ ಪ್ರಕರಣಗಳಲ್ಲಿ ಒಂದಾಗಿದೆ.

ಪಂಜಾಬ್‌ನ ಗುರುದಾಸ್‌ಪುರ ಜಿಲ್ಲೆಯ ಡೇರಾ ಬಾಬಾ ನಾನಕ್ ಗುರುದ್ವಾರದಿಂದ ಗುರುನಾನಕ್ ದೇವ್ ತಮ್ಮ ಜೀವಿತದ 18 ವರ್ಷಗಳನ್ನು ಕಳೆದ ದರ್ಬಾರ್ ಸಾಹಿಬ್ ಗುರುದ್ವಾರವರೆಗಿನ ಕಾರಿಡಾರ್‌ಅನ್ನು ಮುಂದಿನ ವರ್ಷ ನಡೆಯಲಿರುವ ಸಿಖ್ ಧರ್ಮ ಸಂಸ್ಥಾಪಕನ 550ನೇ ಜಯಂತಿ ಅಂಗವಾಗಿ ಆರಂಭಿಸಲಾಗುತ್ತಿದೆ. ಈ ಕಾರಿಡಾರ್ ನಿರ್ಮಾಣದಿಂದಾಗಿ ಪಂಜಾಬ್‌ನ ಸಿಖ್ ಯಾತ್ರಿಗಳು ಸಿಖ್ ಧರ್ಮದ ಅತ್ಯಂತ ಪವಿತ್ರ ಸ್ಥಳಕ್ಕೆ ಯಾವುದೇ ಅಡೆತಡೆಯಿಲ್ಲದೆ ಹೋಗಬಹುದಾಗಿದೆ.

ಕಾರಿಡಾರ್ ನಿರ್ಮಾಣಕ್ಕೆ ಗುರುದ್ವಾರ ದರ್ಬಾರ್ ಸಾಹಿಬ್ ಬಳಿ ನಡೆದ ಶಂಕು ಸ್ಥಾಪನೆ ಸಮಾರಂಭವನ್ನು ಪಾಕ್ ಪ್ರಧಾನಿ ಇಮ್ರಾನ್ ಖಾನ್ ಉದ್ಘಾಟಿಸಿದರು. ಭಾರತದ ಕೇಂದ್ರ ಸಚಿವರಾದ ಹರ್‌ಸಿಮ್ರತ್ ಕೌರ್ ಬಾದಲ್ ಮತ್ತು ಹರ್‌ದೀಪ್ ಸಿಂಗ್ ಪುರಿ ಭಾಗವಹಿಸಿದ್ದರು. ಪಂಜಾಬ್‌ನ ಸಚಿವರಾದ ನವಜೋತ್ ಸಿಂಗ್ ಸಿಧು ಕೂಡ ಭಾಗವಹಿಸಿದ್ದರು. ಇಮ್ರಾನ್ ಖಾನ್‌ರ ಪದಗ್ರಹಣ ಸಮಾರಂಭದ ವೇಳೆ ಪಾಲ್ಗೊಂಡಿದ್ದ ಸಂದರ್ಭದಲ್ಲಿ ಸಿಧು ಅವರು ಕಾರಿಡಾರ್ ವಿಚಾರವನ್ನು ಪಾಕಿಸ್ತಾನದ ಸೇನಾ ಮುಖ್ಯಸ್ಥರ ಜೊತೆ ಚರ್ಚಿಸಿದ್ದಕ್ಕಾಗಿ ಸಿಧುರನ್ನು ಬಿಜೆಪಿ ಟೀಕಿಸಿತ್ತು.

ಕರ್ತಾರ್‌ಪುರ ಕಾರಿಡಾರ್ ನಿರ್ಮಾಣಕ್ಕೆಂದು ಈಗ ನಡೆಯುತ್ತಿರುವ ಜಂಟಿ ಪ್ರಯತ್ನಗಳು ಉಭಯ ದೇಶಗಳ ನಡುವೆ ಸಂಬಂಧಗಳು ಹಾಗೂ ಸಹಕಾರವನ್ನು ಸುಧಾರಿಸುವ ಅಗತ್ಯವನ್ನು ಮತ್ತೊಮ್ಮೆ ಎತ್ತಿಹಿಡಿದಿದೆ. ಸಹಜ ವಾತಾವರಣವನ್ನು ಮತ್ತು ಉತ್ತಮ ನೆರೆಹೊರೆ ಬಾಂಧವ್ಯವನ್ನು ಮರುಸ್ಥಾಪಿಸಲು ಜನತೆಯ ನಡುವಣ ಸಂಬಂಧಗಳನ್ನು ಬೆಳೆಸುವುದು ಕೂಡ ಮಹತ್ವದ್ದು ಎನ್ನುವುದನ್ನು ಕೂಡ ಇದು ಸಾಬೀತುಪಡಿಸಿದೆ.

ಗಡಿಗಳಲ್ಲಿ ಒಂದು ಕಾರಿಡಾರ್ ನಿರ್ಮಾಣಕ್ಕೆ ತೆಗೆದುಕೊಂಡಿರುವ ಹೆಜ್ಜೆ ಎರಡೂ ದೇಶಗಳ ನಡುವೆ ಒಂದು ಸೌಹಾರ್ದ ವಾತಾವರಣ ಸೃಷ್ಟಿಗೆ ಸಹಕಾರಿಯಾಗಬಹುದೆಂಬ ಆಶಾವಾದ ವ್ಯಕ್ತವಾಗಿದೆ. ಕಾರಿಡಾರ್ ಕುರಿತ ಪಾಕಿಸ್ತಾನದ ಪ್ರಸ್ತಾವನೆಯನ್ನು ಮೋದಿ ಸರಕಾರ ಅಂಗೀಕರಿಸಿರುವುದು ಮೋದಿ ಸರಕಾರ ವಾಸ್ತವತೆಗೆ ಹಾಗೂ ಕಳೆದ ನಾಲ್ಕು ವರ್ಷಗಳಿಂದ ತಳೆದಿರುವ 'ಮಾತುಕತೆಯಿಲ್ಲ' ಧೋರಣೆಯಿಂದ ಮರಳಿರುವ ದ್ಯೋತಕವಾಗಿದೆ ಎಂದು ಕೆಲವು ಅಭಿಪ್ರಾಯಪಟ್ಟಿದ್ದಾರೆ. ಸ್ವತಃ ನರೇಂದ್ರ ಮೋದಿ ಅವರೇ ಕರ್ತಾರ್‌ಪುರ ಕಾರಿಡಾರ್ ಅನ್ನು ಬರ್ಲಿನ್ ಗೋಡೆ ನಾಶಕ್ಕೆ ಹೋಲಿಸಿದ್ದಾರೆ; ಇದು ಉಭಯ ದೇಶಗಳ ಜನತೆಯ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಬಹುದೆಂದು ಆಶಿಸಿದ್ದಾರೆ.

ಆದರೆ ಈ ಎಲ್ಲಾ ಆಶಯಗಳು ಕೇವಲ ಒಂದೆರಡು ದಿನಗಳಲ್ಲಿ ಹುಸಿಯಾಗಿವೆ. ಇಸ್ಲಾಮಾಬಾದ್‌ನಲ್ಲಿ ನಡೆಯುವ ಸಾರ್ಕ್ ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲು ಪಾಕಿಸ್ತಾನವು ಪ್ರಧಾನಿ ಮೋದಿಗೆ ಆಹ್ವಾನ ನೀಡಿತ್ತು. ಆದರೆ ಶಂಕು ಸ್ಥಾಪನೆ ದಿನದಂದೇ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಪಾಕಿಸ್ತಾನ ಆಹ್ವಾನವನ್ನು ತಿರಸ್ಕರಿಸುವ ವಿಚಾರವನ್ನು ಘೋಷಿಸಿದರು ಹಾಗೂ ಭಯೋತ್ಪಾದನೆ ಚಟುವಟಿಕೆಗಳು ನಡೆಯುತ್ತಿರುವಾಗಲೇ ಮಾತುಕತೆ ನಡೆಯಲು ಸಾಧ್ಯವಿಲ್ಲ ಎಂಬ ನಿಲವನ್ನು ಪುನರುಚ್ಚರಿಸಿದರು.

ಈ ಕಟು ನಿಲವಿಗೆ ಅಂಟಿಕೊಂಡಿರುವುದು ಪಾಕಿಸ್ತಾನದ ಜೊತೆಗಿನ ಬಾಂಧವ್ಯಕ್ಕೆ ಸಂಬಂಧಿಸಿದಂತೆ ಮೋದಿ ಸರಕಾರದ ವಿರೋಧಾಭಾಸದ ಹಾಗೂ ತಾನೇ ಸೋಲುಂಟು ಮಾಡಿಕೊಳ್ಳುವ ಧೋರಣೆಯನ್ನು ಮತ್ತೊಮ್ಮೆ ಎತ್ತಿ ತೋರಿಸಿದೆ. ಮೋದಿ ಸರಕಾರ ಅಧಿಕಾರಕ್ಕೆ ಬಂದ ನಂತರ 2014ರ ಆಗಸ್ಟ್‌ನಲ್ಲಿ ಮೊದಲ ಬಾರಿಗೆ ಪಾಕಿಸ್ತಾನ ಜೊತೆಗಿನ ಮಾತುಕತೆಯನ್ನು ವಾಪಸ್ ಪಡೆಯಲಾಯಿತು. ಅದಕ್ಕೆ ಕಾರಣವಾಗಿದ್ದು ಭಯೋತ್ಪಾದಕರ ದಾಳಿ ವಿಚಾರವಲ್ಲ; ಬದಲಿಗೆ ವಿದೇಶಾಂಗ ಕಾರ್ಯದರ್ಶಿಗಳ ಮಾತುಕತೆ ವೇಳೆ ಪಾಕಿಸ್ತಾನದ ಹೈಕಮಿಷನರ್ ಕಾಶ್ಮೀರದ ಹುರಿಯತ್ ನಾಯಕರನ್ನು ಭೇಟಿ ಮಾಡಿದರು ಎಂಬ ಆಧಾರದಲ್ಲಿ ಹಾಗೆ ಮಾಡಲಾಯಿತು. ಅದರ ನಂತರ 2015 ಮಾರ್ಚ್‌ನಲ್ಲಿ ಪಾಕ್ ಪ್ರಧಾನಿ ನವಾಜ್ ಷರೀಫ್‌ರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲು ಪ್ರಧಾನಿ ಮೋದಿ ಲಾಹೋರ್‌ಗೆ ಅಚ್ಚರಿಯ ಭೇಟಿ ನೀಡಿದರು. ಅದರ ನಂತರ, ರಾಜಕೀಯ ಮಟ್ಟದಲ್ಲಿ ಯಾವುದೇ ಮಾತುಕತೆಗಳನ್ನು ತಡೆಯುವ ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು. 2016ರಲ್ಲಿ ಪಾಕಿಸ್ತಾನದಲ್ಲಿ ನಡೆದ ಸಾರ್ಕ್ ಸಮ್ಮೇಳನದಲ್ಲಿ ಭಾಗವಹಿಸಲು ತಿರಸ್ಕರಿಸಿದ್ದೂ ಅವುಗಳಲ್ಲಿ ಸೇರಿದೆ. ಪಠಾಣ್‌ಕೋಟ್ ಮತ್ತು ಉರಿಗಳಲ್ಲಿ ಉಗ್ರಗಾಮಿಗಳ ದಾಳಿಯನ್ನು ಇದಕ್ಕೆ ಕಾರಣವಾಗಿ ತೋರಿಸಲಾಯಿತು.

2016ರ ಸೆಪ್ಟೆಂಬರ್‌ನಲ್ಲಿ ನಡೆದ ಮಿಂಚಿನ ಪ್ರಹಾರಗಳನ್ನು (ಸರ್ಜಿಕಲ್ ಸ್ಟ್ರೈಕ್ಸ್) ಆಂತರಿಕವಾಗಿ ರಾಜಕೀಯವಾಗಿ ಬಂಡವಾಳ ಮಾಡಿಕೊಳ್ಳಲು ಕುರುಡು ದೇಶಭಕ್ತಿಯ ರೀತಿಯಲ್ಲಿ ಬಳಸಲಾಯಿತು. ಆದರೆ ವಾಸ್ತವವಾಗಿ ಸರ್ಜಿಕಲ್ ದಾಳಿಗಳ ನಂತರ ನಿಯಂತ್ರಣ ರೇಖೆಯುದ್ದಕ್ಕೂ ಗುಂಡು ಹಾಗೂ ಶೆಲ್ ದಾಳಿಗಳು ಹೆಚ್ಚಿದವು ಎರಡೂ ಕಡೆ ಸಾವು ನೋವುಗಳು ಹೆಚ್ಚಿದವು. ಬರ್ಬರ ಸರಕಾರಿ ದಬ್ಬಾಳಿಕೆ ಮತ್ತು ಹೆಚ್ಚಿದ ಉಗ್ರಗಾಮಿ ಚಟುವಟಿಕೆಗಳ ವಿಷವೃತ್ತದಿಂದಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಪರಿಸ್ಥಿತಿ ಹದಗೆಟ್ಟಿತು.

ಪಾಕಿಸ್ತಾನ ಕುರಿತ ಭಾರತದ ಧೋರಣೆಯಲ್ಲಿ ಒಂದು ಸುಸಂಗತತೆ ಇಲ್ಲ ಎಂಬುದು ತೀರಾ ಇತ್ತೀಚೆಗೆ ಇನ್ನೊಮ್ಮೆ ಸಾಬೀತಾಯಿತು. ಇದೇ ವರ್ಷ ಸೆಪ್ಟೆಂಬರ್‌ನಲ್ಲಿ ವಿಶ್ವಸಂಸ್ಥೆ ಜನರಲ್ ಅಸೆಂಬ್ಲಿ ಅಧಿವೇಶನದ ಸಂದರ್ಭದಲ್ಲಿ ಉಭಯ ದೇಶಗಳ ವಿದೇಶಾಂಗ ಸಚಿವರ ಸಭೆ ನಡೆಸಬಹುದು ಎಂಬ ಪಾಕಿಸ್ತಾನದ ಪ್ರಸ್ತಾವವನ್ನು ಭಾರತ ಅಂಗೀಕರಿಸಿತು. ಆದರೆ ಅದಾದ ಎರಡೇ ದಿನಗಳಲ್ಲಿ ಆ ನಿರ್ಧಾರವನ್ನು ವಾಪಸ್ ಪಡೆಯಲಾಯಿತು. ಅದಕ್ಕೆ ನೀಡಿದ ಕಾರಣವನ್ನು ಯಾರೂ ಒಪ್ಪಲು ಕಷ್ಟವಾಗುವಂಥದ್ದು.

ಕರ್ತಾರ್‌ಪುರ ಕಾರಿಡಾರ್‌ಗೆ ಕೇಂದ್ರ ಸಚಿವ ಸಂಪುಟ ಅಂಗೀಕಾರ ನೀಡಿರುವುದು ಧಾರ್ಮಿಕ ಯಾತ್ರೆ ಸಾಧ್ಯವಾಗಬೇಕು ಎಂಬ ಪಂಜಾಬ್ ಜನತೆಯ ಭಾವನೆಗಳಿಂದಷ್ಟೆ ಹೆಚ್ಚಾಗಿ ಪ್ರೇರಿತವಾಗಿರುವಂತೆ ಕಾಣುತ್ತದೆ. ವಾಣಿಜ್ಯ, ವ್ಯಾಪಾರ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಹೆಚ್ಚಿನ ಸಹಕಾರ ಅಗತ್ಯವೆಂಬ ಪಂಜಾಬ್‌ನ ಎರಡೂ ಕಡೆಯ ಜನರ ಹೆಚ್ಚುತ್ತಿರುವ ಬಯಕೆಯ ಹಿನ್ನೆಲೆಯಲ್ಲಿಯೂ ಕೇಂದ್ರದ ನಿರ್ಧಾರ ಹೊರಬಿದ್ದಿದೆ.

ಭಯೋತ್ಪಾದನೆಯನ್ನು ನಿಭಾಯಿಸಲು ಒಂದು ದೃಢ ನಿಲವನ್ನು ತೆಗೆದುಕೊಳ್ಳುವ ಜೊತೆಜೊತೆಯಲ್ಲೇ ಸಮಗ್ರ ಮಾತುಕತೆಯನ್ನು ಪುನರಾರಂಭಿಸುವುದು ತುಂಬಾ ಅಗತ್ಯವಾಗಿದೆ.

ದೇಶದದೊಳಗಿನ ತನ್ನ ಕೋಮುವಾದಿ ಕಾರ್ಯಸೂಚಿಯಿಂದ ಪ್ರೇರಿತವಾಗಿ ಪಾಕಿಸ್ತಾನದೊಂದಿಗಿನ ಸಂಬಂಧದ ವಿಚಾರದಲ್ಲಿ ಕಣ್ಣಾಮುಚ್ಚಾಲೆಯ ಧೋರಣೆ ತಾಳುವ ಮೋದಿ ಸರಕಾರ ತನ್ನ ವ್ಯೂಹಾತ್ಮಕ ಸ್ವಾಯತ್ತೆಯ ಅವಕಾಶವನ್ನು ಕಿರಿದುಗೊಳಿಸಿಕೊಳ್ಳುತ್ತಿದೆ. ಅಫಘಾನಿಸ್ತಾನವೇ ಆಗಲಿ ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರವೇ ಆಗಲಿ, ಪಾಕಿಸ್ತಾನದೊಂದಿಗೆ ಸಂಘರ್ಷದ ಧೋರಣೆ ಹೊಂದುವುದರಿಂದ ಭಾರತ ಒಂದು ಸಕಾರಾತ್ಮಕ ಪಾತ್ರವನ್ನು ನಿರ್ವಹಿಸಲು ಆಗುವುದಿಲ್ಲ.

ಇಂಥ ಧೋರಣೆಯಿಂದ ನಮ್ಮ ವಿದೇಶಾಂಗ ನೀತಿಯ ಮೇಲೆ ಪರಿಣಾಮ ಬೀರುವುದು ಮಾತ್ರವೇ ಅಲ್ಲ; ಆಂತರಿಕವಾಗಿಯೂ ಹಾನಿಕಾರಕ ಪರಿಣಾಮ ಬೀರಲಿದೆ– ಕಾಶ್ಮೀರದಲ್ಲಿ ಪರಿಸ್ಥಿತಿ ಹದಗೆಡುತ್ತಿರುವುದು ಹಾಗೂ ಪಂಜಾಬ್‌ನಲ್ಲಿ ಉಗ್ರವಾದ ಪುನಃ ತಲೆಯೆತ್ತುತ್ತಿರುವುದು ಈ ಸಂಬಂಧದಲ್ಲಿ ಎರಡು ಸ್ವಯಂವೇದ್ಯವಾಗಿರುವ ಸೂಚನೆಗಳಾಗಿವೆ.

ಅನು: ವಿಶ್ವ

ಬಿಜೆಪಿ ಚುನಾವಣಾ ಬಾಂಡುಗಳ ಮರೆಯಲ್ಲಿ ಅಡಗಿಕೊಳ್ಳಬಾರದು–ಇವನ್ನು ನೀಡಿದವರ ಗುರುತನ್ನು ಸಾರ್ವಜನಿಕಗೊಳಿಸಬೇಕು : ಪ್ರಕಾಶ ಕಾರಟ್

ಚುನಾವಣಾ ಬಾಂಡ್ ವ್ಯವಸ್ಥೆ ರಾಜಕೀಯ ನಿಧಿ ನೀಡಿಕೆಯನ್ನು ಸ್ವಚ್ಛಗೊಳಿಸಲು ಮತ್ತು ಪಾರದರ್ಶಕತೆ ತರಲು ಎಂದು ಮಾನ್ಯ ಹಣಕಾಸು ಮಂತ್ರಿಗಳು ಉದ್ಗರಿಸಿದ್ದರು. ಆದರೆ ಇದಕ್ಕಿಂತ ದೊಡ್ಡ ಅಸತ್ಯ ಮತ್ತು ಗೋಸುಂಬೆತನ ಬೇರೆ ಇರಲಿಕ್ಕಿಲ್ಲ ಎನುತ್ತಾರೆ ಹಿರಿಯ ಸಿಪಿಐ(ಎಂ) ಮುಖಂಡ ಪ್ರಕಾಶ್ ಕಾರಟ್.

ಈ ಬಾಂಡ್‌ನ್ನು ಸ್ಟೇಟ್ ಬ್ಯಾಂಕ್ ಮಾತ್ರ ಮಾರಾಟ ಮಾಡುತ್ತದೆ. ಇದನ್ನು ಖರೀದಿಸಿದವರು 15 ದಿನಗಳೊಳಗೆ ರಾಜಕೀಯ ಪಕ್ಷಗಳಿಗೆ ಇದನ್ನು ಕೊಡಬೇಕು. ಯಾರಿಗೆ ಕೊಟ್ಟಿದ್ದೇವೆ ಎಂದು ಅವರು ಹೇಳಬೇಕಾಗಿಲ್ಲ, ಪಡೆದವರು ಯಾರಿಂದ ಪಡೆದೆವು ಎಂದು ಹೇಳಬೇಕಾಗಿಲ್ಲ. ಈ ಸರಕಾರ ತಂದಿರುವ ತಿದ್ದುಪಡಿಯಿಂದಾಗಿ ವಿದೇಶಿ ಕಂಪನಿಗಳೂ ಈ ಮೂಲಕ ತಮಗೆ ಬೇಕಾದ ರಾಜಕೀಯ ಪಕ್ಷಗಳಿಗೆ ಹಣ ನೀಡಬಹುದು.

ಈಗ ಐದು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಒಂದು ರಾಜ್ಯದಲ್ಲಿ ಸಿಪಿಐ(ಎಂ)ಗೂ ಈ ಚುನಾವಣಾ ಬಾಂಡುಗಳ ರೂಪದಲ್ಲಿ ವಂತಿಗೆ ನೀಡುವ ಪ್ರಸ್ತಾಪ ಬಂದಿದೆ. ಆದರೆ, ಸಿಪಿಐ(ಎಂ) ಚುನಾವಣಾ ಹೋರಾಟ ನಡೆಸಲು ಹಣದ ಕೊರತೆ ಗಂಭೀರವಾಗಿದ್ದರೂ ಇದನ್ನು ಸ್ವೀಕರಿಸಲು ನಿರಾಕರಿಸಿದೆ ಎಂದು ಪ್ರಕಾಶ್ ಕಾರಟ್ ತಿಳಿಸಿದ್ದಾರೆ. ಇದಕ್ಕೆ ಕಾರಣಗಳನ್ನು ಸಿಪಿಐ(ಎಂ) ಈಗಾಗಲೇ ಚುನಾವಣಾ ಬಾಂಡನ್ನು ಬಲವಾಗಿ ವಿರೋಧಿಸಿದಾಗ ವಿಶದ ಪಡಿಸಿದೆ. ಅಲ್ಲದೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಇದರ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಹಾಕಿದ್ದಾರೆ ಎಂದು ಅವರು ನೆನಪಿಸಿದ್ದಾರೆ.

ಚುನಾವಣಾ ಬಾಂಡುಗಳ ವ್ಯವಸ್ಥೆ ಆಳುವ ಪಕ್ಷಕ್ಕೆ ಕಾರ್ಪೊರೇಟ್ ದೇಣಿಗೆಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಆಳುವ ಪಕ್ಷದ ಕೃಪಾಕಟಾಕ್ಷ ಪಡೆಯಲು ಕಂಪನಿಗಳು ಅದಕ್ಕೆ ಅಗಾಧ ದೇಣಿಗೆಗಳನ್ನು ಕೊಡುವಂತಹ ಆಮಿಷವನ್ನು ಇದು ಸೃಷ್ಟಿಸಿದೆ. ಇದಕ್ಕೆ ಮೊದಲೇ ಹಣಕಾಸು ಮಸೂದೆಯ ಮೂಲಕ ಕಂಪನಿ ಕಾನೂನಿಗೆ ತಿದ್ದುಪಡಿ ತಂದು ರಾಜಕೀಯ ಪಕ್ಷಗಳಿಗೆ ದೇಣಿಗೆಗಳ ಮೊತ್ತವು ಹಿಂದಿನ ಮೂರು ವರ್ಷಗಳ ಕಂಪನಿ ಲಾಭಗಳ 7.5% ವನ್ನು ಮೀರಬಾರದೆಂಬ ಮಿತಿಯನ್ನು ತೆಗೆದು ಹಾಕಲಾಗಿತ್ತು. ಜನತಾ ಪ್ರಾತಿನಿಧ್ಯ ಕಾಯ್ದೆ, ಆರ್‌ಬಿಐ ಕಾಯ್ದೆ ಮತ್ತು ಆದಾಯ ತೆರಿಗೆ ಕಾಯ್ದೆಗೂ ಕಾರ್ಪೊರೇಟ್ ದೇಣಿಗೆಗಳಿಗೆ ಅನುಕೂಲವಾಗುವಂತಹ ತಿದ್ದುಪಡಿಗಳನ್ನು ಈ ಸರಕಾರ ತಂದಿದೆ, ಅದನ್ನು ರಾಜ್ಯಸಭೆಯ ಪರೀಕ್ಷಣೆಯಿಂದ ತಪ್ಪಿಸಲು ಹಣಕಾಸು ಮಸೂದೆಗಳ ದಾರಿಯನ್ನು ಅನುಸರಿಸಿದೆ ಎಂಬುದನ್ನು ಪ್ರಕಾಶ ಕಾರಟ್ ಪಕ್ಷದ ಕೇಂದ್ರಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದಿರುವ ಈ ಕುರಿತ ಲೇಖನದಲ್ಲಿ ನೆನಪಿಸಿದ್ದಾರೆ.

ಈ ಮೂಲಕ ಮೋದಿ ಸರಕಾರ ಲಂಚಗುಳಿತನವನ್ನು ಕಾನೂನುಬದ್ಧಗೊಳಿಸಲು ಒಂದು ದಾರಿ ಹುಡುಕಿಕೊಂಡಿದೆ ಎನ್ನುತ್ತಾರೆ ಅವರು. ಉದಾಹರಣೆಗೆ, ಈ ಮೊದಲು 1000 ಕೋಟಿ ರೂ.ಗಳ ಕಾಂಟ್ರಾಕ್ಟ್ ಪಡೆದ ಕಂಪನಿ ಅದಕ್ಕೆ 10% ಕಮಿಶನ್ ಕೊಡಬೇಕಿದ್ದರೆ ಅದನ್ನು ಟೇಬಲ್ ಕೆಳಗೆ ಕೊಡಬೇಕಾಗಿತ್ತು. ಈಗ 100 ಕೋಟಿ ರೂ.ಗಳ ಚುನಾವಣಾ ಬಾಂಡ್ ಖರೀದಿಸಿ ಆಳವ ಪಕ್ಷಕ್ಕೆ ಕೊಟ್ಟರಾಯಿತು. ಸಾರ್ವಜನಿಕರ ಗಮನಕ್ಕೆ ಇದು ಬರುವುದೂ ಇಲ್ಲ, ಯಾವ ತನಿಖಾ ಸಂಸ್ಥೆಯೂ ಈ ಬಗ್ಗೆ ಪ್ರಶ್ನೆ ಕೇಳುವಂತಿಲ್ಲ. ರಫೇಲ್ ವ್ಯವಹಾರದಲ್ಲಿ ಅನಿಲ್ ಅಂಬಾನಿ ಕಂಪನಿಗೆ ಆಫ್‌ಸೆಟ್ ಗುತ್ತಿಗೆ, ಅದನ್ನು ಪಡೆಯಲು ಯಾವುದೇ ಸಮರ್ಥನೀಯ ಆಧಾರ ಇಲ್ಲದಿದ್ದರೂ ಸಿಕ್ಕಿದೆ. ಇಂತಹ ಒಂದು ವ್ಯವಹಾರಕ್ಕೆ ಪ್ರತಿಫಲ ಬಿಜೆಪಿಗೆ ಚುನಾವಣಾ ಬಾಂಡ್ ರೂಪದಲ್ಲಿ ಇರುವ ಸಾಧ್ಯತೆ ಇದೆ, ಈ ಬಗ್ಗೆ ಯಾರೂ ಏನೂ ಕೇಳುವಂತಿಲ್ಲ ಎಂದು ಪ್ರಕಾಶ್ ಕಾರಟ್ ಹೇಳಿದ್ದಾರೆ.

ಸಿಪಿಐ(ಎಂ) ಬಹಿರಂಗ ರೀತಿಯಲ್ಲಿ ಪಕ್ಷಕ್ಕೆ ದೇಣಿಗೆಗಳನ್ನು ಸ್ವೀಕರಿಸುತ್ತದೆ. ಈಗಿರುವ ಕಾನೂನಿನಲ್ಲಿ 20,000ರೂ. ಮೀರಿದ ದೇಣಿಗೆಗಳನ್ನು ಅದನ್ನು ಕೊಡುವವರ ಗುರುತು, ವಿಳಾಸ ಮತ್ತು ಪಾನ್ ನಂಬರ್ ವಿವರಗಳನ್ನು ನಮೂದಿಸಿ ಪಡೆಯಬಹುದಾಗಿದೆ. ಈ ರೀತಿಯಲ್ಲಿ ಬರುವ ದೇಣಿಗೆಗಳನ್ನು ಸಿಪಿಐ(ಎಂ) ಸ್ವೀಕರಿಸುತ್ತದೆ ಮತ್ತು ಅವುಗಳ ಲೆಕ್ಕವನ್ನು ಆದಾಯ ತೆರಿಗೆ ಇಲಾಖೆ ಮತ್ತು ಚುನಾವಣಾ ಆಯೋಗಕ್ಕೆ ಕೊಡುತ್ತದೆ.

ಚುನಾವಣಾ ಸುಧಾರಣೆಗಳನ್ನು ತರುವ ಹೋರಾಟದಲ್ಲಿ ಚುನಾವಣಾ ಬಾಂಡ್ ವ್ಯವಸ್ಥೆಯನ್ನು ಮತ್ತು ಕಾರ್ಪೊರೇಟ್ ನಿಧಿಗಳಿಗೆ ಮತ್ತು ವಿದೇಶಿ ಕಂಪನಿಗಳಿಂದ ಬರುವ ಹಣಕ್ಕೆ ಬಾಗಿಲು ತೆರೆದಿಟ್ಟಿರುವ ತಿದ್ದುಪಡಿಗಳನ್ನು ರದ್ದು ಮಾಡುವುದು ಮೊದಲ ಹೆಜ್ಜೆಯಾಗಬೇಕು. ಬಿಜೆಪಿ ಚುನಾವಣಾ ಬಾಂಡುಗಳ ಮರೆಯಲ್ಲಿ ಅಡಗಿಕೊಳ್ಳಬಾರದು, ತನಗೆ ದೇಣಿಗೆ ನೀಡಲು ಚುನಾವಣಾ ಬಾಂಡುಗಳನ್ನು ಬಳಸಿಕೊಂಡ ದಾನಿಗಳ ಗುರುತನ್ನು ಸಾರ್ವಜನಿಕಗೊಳಿಸಬೇಕು ಎಂದು ಪ್ರಕಾಶ್ ಕಾರಟ್ ಹೇಳಿದ್ದಾರೆ.





ದಿಲ್ಲಿಯಲ್ಲಿ ಲಕ್ಷಾಂತರ ರೈತರ ನಡೆ–

ಸಂಸತ್ತಿನ ಮುಂದೆ ಮೋದಿ ಸರಕಾರಕ್ಕೆ ಎಚ್ಚರಿಕೆ

“ರೈತ–ವಿರೋಧಿ ಧೋರಣೆಗಳನ್ನು ಕೈಬಿಡಿ– ಇಲ್ಲವೇ ಅಧಿಕಾರ ನಿಮ್ಮ ಕೈಬಿಡುತ್ತದೆ”

ದೇಶದ ವಿವಿಧ ಭಾಗಗಳಲ್ಲಿ ಹೋರಾಟಕ್ಕಿಳಿದ ರೈತರ ಮನವಿಗಳಿಗೆ ಕಿವುಡಾಗಿರುವ ಮೋದಿ ಸರಕಾರದ ಕಣ್ಣು–ಕಿವಿ ತೆರೆಸಲು ದೇಶದ 26 ರಾಜ್ಯಗಳಿಂದ ಒಂದು ಲಕ್ಷಕ್ಕೂ ಹೆಚ್ಚು ರೈತರು ಮತ್ತು ಬುಡಕಟ್ಟು ಜನಗಳು ನವಂಬರ್ 29ರಂದು ದೇಶದ ರಾಜಧಾನಿಗೇ ಬಂದರು. ನಗರದ ನಾಲ್ಕು ದಿಕ್ಕುಗಳಿಂದ ಕೆಂಪು, ಹಸಿರು, ಹಳದಿ, ನೀಲಿ ಬಾವುಟಗಳನ್ನು ಹಿಡಿದು ರಾಮಲೀಲಾ ಮೈದಾನದತ್ತ ಸಾಗಿ ಹೋದರು. ಮರುದಿನ ಅಲ್ಲಿಂದ ಸಂಸತ್ತಿನ ದ್ವಾರದ ಬಳಿಗೆ ಬರಲು ಬಿಡದಿದ್ದರೂ ಸಾಕಷ್ಟು ಹತ್ತಿರದಿಂದಲೇ ಸರಕಾರಕ್ಕೆ ಎಚ್ಚರಿಕೆ ನೀಡಿದರು, ರೈತ–ವಿರೋಧಿ ಧೋರಣೆಗಳನ್ನು ಕೈಬಿಡದಿದ್ದರೆ, ಹಿಂದಿನ ಚುನಾವಣೆಗಳಲ್ಲಿ ರೈತರಿಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ದೇಶದ ವಿವಿಧೆಡೆಗಳಲ್ಲಿ ರೈತರ ನಡುವೆ ಕೆಲಸ ಮಾಡುತ್ತಿರುವ ಸುಮಾರು 200 ರೈತ ಸಂಘಟನೆಗಳನ್ನು ಒಟ್ಟುಗೂಡಿಸಿದ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ (ಎಐಕೆಎಸ್‌ಸಿಸಿ) ದೇಶವ್ಯಾಪಿ ಪ್ರಚಾರಾಂದೋಲನದ ಕೊನೆಯಲ್ಲಿ ಈ ಬೃಹತ್ ಕಿಸಾನ್ ಮುಕ್ತಿ ಮಾರ್ಚ್ ಸಂಘಟಿಸಿತ್ತು.

* **ದೇಶವನ್ನು ಅವರಿಸಿರುವ ಕರ್ಷಕ ಬಿಕ್ಕಟ್ಟನ್ನು, ಕೋಟ್ಯಂತರ ರೈತರ ಸಮಸ್ಯೆಗಳನ್ನು ಆಮೂಲಾಗ್ರವಾಗಿ ಚರ್ಚಿಸಲು 21 ದಿನಗಳ ವಿಶೇಷ ಸಂಸತ್ ಅಧಿವೇಶವನ್ನು ನಡೆಸಬೇಕು.**
* **ಕಳೆದ ವರ್ಷ ಕಿಸಾನ್ ಸಂಸದ್ ಅಂಗೀಕರಿಸಿದ ರೈತರ ಸಾಲಮನ್ನಾ ಮತ್ತು ರೈತರಿಗೆ ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿದಂತೆ ವೆಚ್ಚದ ಒಂದೂವರೆ ಪಟ್ಟಿಗೆ ಕಡಿಮೆ ಇಲ್ಲದಂತೆ ಕನಿಷ್ಟ ಬೆಂಬಲ ಬೆಲೆಗೆ ಸಂಬಂಧಪಟ್ಟ ಎರಡು ಮಸೂದೆಗಳನ್ನು ಅಂಗೀಕರಿಸಬೇಕು.**


ಇವು ಈ ಕಿಸಾನ್ ಮುಕ್ತಿ ಮಾರ್ಚ್‌ನ ಮುಖ್ಯ ಬೇಡಿಕೆಗಳು. ಲೋಕಸಭೆಯಲ್ಲಿ ಮಹಾರಾಷ್ಟ್ರದಿಂದ ಚುನಾಯಿತರಾದ ‘ಸ್ವಾಭಿಮಾನಿ ಶೇತ್ಕರಿ ಸಂಘಟನ’ದ ಮುಖಂಡರಾದ ರಾಜು ಶೆಟ್ಟಿ ಹಾಗೂ ರಾಜ್ಯ ಸಭೆಯಲ್ಲಿ ಎಐಕೆಎಸ್ ಜಂಟಿ ಕಾರ್ಯದರ್ಶಿ ಹಾಗೂ ಸಿಪಿಐ(ಎಂ) ಸಂಸತ್ ಸದಸ್ಯ ಕೆ.ಕೆ. ರಾಜೇಶ್ ಈ ಮಸೂದೆಗಳನ್ನು ಮಂಡಿಸಿದ್ದರು. ಇವನ್ನು ಅಂಗೀಕರಿಸಿ ಈ ದೇಶದ ಕೋಟ್ಯಂತರ ರೈತರ ಹಕ್ಕುಗಳನ್ನು ಮಾನ್ಯ ಮಾಡಬೇಕು ಎಂಬುದು ದೇಶದ ರೈತರ ಆಗ್ರಹ.

ಸಂಸತ್ತಿನ ಬಳಿ ಸಭೆ ಸೇರಿದ ಸಾವಿರಾರು ರೈತ ಹೋರಾಟಗಾರರನ್ನು ಉದ್ದೇಶಿಸಿ ಮಾತನಾಡಿದ ರಾಜು ಶೆಟ್ಟಿ ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ ರೈತರು ಹೀಗೆ ಒಂದಾಗಿದ್ದಾರೆ, ಬರಿಗಾಲಲ್ಲಿ ದಿಲ್ಲಿಗೆ ಬಂದು ಈ ಸರಕಾರವನ್ನು ನಗ್ನಗೊಳಿಸಿದ್ದಾರೆ, ಇನ್ನೂ ಈ ಸರಕಾರ ಕಿವಿಗೊಡದಿದ್ದರೆ ಮುಂದಿನ ಬಾರಿ ಕೆಂಪು ಕೋಟೆಯಿಂದ ಯಾರು ಭಾಷಣ ಮಾಡಬೇಕು ಎಂದು ನಿರ್ಧರಿಸುತ್ತಾರೆ ಎಂದು ರೈತರ ಪರವಾಗಿ ಎಚ್ಚರಿಸಿದರು.

ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಮಾತಾಡುತ್ತ, ರೈತ ಈಗ ಏಕಾಂಗಿಯಲ್ಲ, ನಾವೆಲ್ಲ ಅವರ ಜತೆಗೆ ನಿಂತಿದ್ದೇವೆ, ಇದನ್ನೇ 2019ರಲ್ಲಿ ಚುನಾವಣೆಗಳಲ್ಲಿ ಬಿಜೆಪಿಗೆ ತೋರಿಸಬೇಕಾಗಿದೆ, ಅವರ ಸುಳ್ಳು ಆಶ್ವಾಸನೆಗಳ ಫಲವನ್ನು ಅವರ ಮುಂದೆ ತೆರೆದಿಡಬೇಕಾಗಿದೆ ಎಂದರು.

ಸುಮಾರು ಇಪ್ಪತ್ತು ರಾಜಕೀಯ ಪಕ್ಷಗಳ ಮುಖಂಡರು ಈ ಸಭೆಯಲ್ಲಿ ಭಾಗವಹಿಸಿ ರೈತರ ಬೇಡಿಕೆಗಳನ್ನು ಬೆಂಬಲಿಸಿದ್ದಾರೆ. ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಮುಖ್ಯಮಂತ್ರಿ ಕೇಜ್ರಿವಾಲ್ ಮತ್ತಿತರರು ರೈತರ ಈ ಬೃಹತ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ದೇಶಾದ್ಯಂತ ಕಾರ್ಮಿಕರು, ಡಾಕ್ಟರುಗಳು, ಲಾಯರುಗಳು ಮತ್ತು ಸಾಹಿತಿ–ಕಲಾವಿದರು ರೈತರ ಈ ಹೋರಾಟಕ್ಕೆ ಬೆಂಬಲವಾಗಿ ನಿಂತಿರುವುದು, ದಿಲ್ಲಿಯಲ್ಲಿ ವಿವಧ ರೀತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ನೆರವು ನೀಡಿದ್ದು ಈ ಕಿಸಾನ್ ಮುಕ್ತಿ ಮಾರ್ಚ್‌ನ ಇನ್ನೊಂದು ವೈಶಿಷ್ಟ್ಯ.



ಮುಂದಿನ ದಿನಗಳಲ್ಲಿ ಚುನಾವಣೆಗಳು ಸಮೀಪಿಸುತ್ತಿರುವಂತೆ ಕಾವಿ ಪಡೆಗಳು ‘ಧರ್ಮ ಸಭೆ’ಗಳನ್ನು ಅಯೋಧ್ಯೆ, ಕಾಶಿ, ನಾಗ್ಪುರ ಮುಂತಾದೆಡೆಗಳಲ್ಲಿ ನಡೆಸಿ ಜನಗಳನ್ನು ವಿಭಜಿಸಲು ಹೊರಟಿದ್ದರೆ, ದುಡಿಯುವ ಜನರು, ಈಗ ರೈತರು ಮಾಡಿರುವಂತೆ ತಮ್ಮದೇ ಸಂಸತ್ತುಗಳನ್ನು ನೆರೆಸಿ ದೇಶದ ಭವಿಷ್ಯದ ಅಜೆಂಡಾವನ್ನು ರೂಪಿಸಲು ಹೊರಡುವಂತೆ ಈ ಐತಿಹಾಸಿಕ ನಡೆ ಪ್ರೇರೇಪಿಸಿದೆ. ಜನವರಿ 8–9ರಂದು ದೇಶದ ಕಾರ್ಮಿಕರ ಎರಡು ದಿನಗಳ ಮುಷ್ಕರದೊಂದಿಗೆ ಈ ಆಂದೋಲನ ತೀವ್ರಗೊಳ್ಳುವ ಪ್ರಕ್ರಿಯೆ ಆರಂಭವಾಗುತ್ತಿದೆ.
















ಕೊಲ್ಕತಾದಲ್ಲಿ ಕೆಂಬಾವುಟಗಳ ಅಲೆಯೆಬ್ಬಿಸಿದ ಸಿಂಗೂರ್ ಕಿಸಾನ್ ಮಾರ್ಚ್

"ರೈತರಿಗೆ ಬೇಕು ಫಲದಾಯಕ ಬೆಲೆಗಳು ; ಗ್ರಾಮೀಣ ಯುವಜನರಿಗೆ ಬೇಕು ಕೈಗಾರಿಕಾ ಉದ್ಯೋಗಗಳು"

ನವಂಬರ್ 29 ರಂದು ದೇಶದ ರಾಜಧಾನಿಯಲ್ಲಿ ಸಾವಿರ–ಸಾವಿರ ಸಂಖ್ಯೆಯಲ್ಲಿ ದೇಶದ 24 ರಾಜ್ಯಗಳಿಂದ ಬಂದ ರೈತರು ತಮ್ಮ ಸಮಸ್ಯೆಗಳ ಮೇಲೆ ಸಂಸತ್ತಿನ ವಿಶೇಷ ಅಧಿವೇಶನವನ್ನು ನಡೆಸಬೇಕು ಎಂದು ಘೋಷಣೆಗಳನ್ನು ಕೂಗುತ್ತ ದಿಲ್ಲಿಯ ರಸ್ತೆಗಳಲ್ಲಿ 'ಕಿಸಾನ್ ಮುಕ್ತಿ ಮಾರ್ಚ್' ನಡೆಸುತ್ತಿದ್ದರೆ ಪಶ್ಚಿಮ ಬಂಗಾಲದ ರಾಜಧಾನಿ ಕೊಲ್ಕತಾದಲ್ಲಿ 50,000 ರೈತರು ಮತ್ತು ಗ್ರಾಮೀಣ ಯುವಜನ "ನಮ್ಮ ಬೆಳೆಗಳಿಗೆ ಫಲದಾಯಕ ಬೆಲೆ ಕೊಡಿ, ನಮ್ಮ ಗ್ರಾಮೀಣ ಯುಜನರಿಗೆ ಕೈಗಾರಿಕಾ ಉದ್ಯೋಗ ನೀಡಿ" ಎಂಬ ಘೋಷಣೆಗಳೊಂದಿಗೆ 'ಸಿಂಗೂರ್–ರಾಜಭವನ್ ಕಿಸಾನ್ ಮಾರ್ಚ್' ನಡೆಸುತ್ತಿದ್ದರು. ಇದು ಅಖಿಲ ಭಾರತ ಹೋರಾಟದ ಭಾಗವಾಗಿಯೇ ನಡೆದಿರುವ ರ್‍ಯಾಲಿ.

ಪಶ್ಚಿಮ ಬಂಗಾಲದ ಕಿಸಾನ್ ಸಭಾ ಮತ್ತು ಕೃಷಿಕೂಲಿಕಾರರ ಸಂಘದ ರಾಜ್ಯ ಘಟಕಗಳು ಸಂಘಟಿಸಿದ್ದ ಈ ಬೃಹತ್ ಮೆರವಣಿಗೆ ಹಿಂದಿನ ದಿನ ಸಿಂಗೂರ್‌ನಿಂದ ಹೊರಟಿತ್ತು. ಏಕೆಂದರೆ ಈಗ ಈ ರಾಜ್ಯದಲ್ಲಿ ಸಿಂಗೂರ್ ಕೃಷಿ ಮತ್ತು ಕೈಗಾರಿಕೆ ಇವೆರಡನ್ನೂ ನಾಶಗೊಳಿಸಿರುವುದರ ಪ್ರತೀಕ. ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಇದನ್ನು ಉದ್ಘಾಟಿಸಿದರು. ಸಿಂಗೂರ್ ಈಗ ಪಶ್ಚಿಮ ಬಂಗಾಲದ ರೈತರಿಗೆ ಇಬ್ಬಗೆಯ ವಂಚನೆಯ ಪ್ರತೀಕವಾಗಿದೆ. ಒಂದೆಡೆಯಲ್ಲಿ, ಟಿಎಂಸಿಯ ಹಿಂಸಾತ್ಮಕ ಚಳುವಳಿಯಿಂದಾಗಿ ಒಂದು ಕಾರ್ ಕಂಪನಿ ನಿರ್ಮಾಣವನ್ನು ಕೈಬಿಡಬೇಕಾಯಿತು, ಈ ಮೂಲಕ ಇಲ್ಲಿಯ ಕುಟುಂಬಗಳಿಗೆ ಉದ್ಯೋಗಾವಕಾಶಗಳ ವಂಚನೆಯಾಯಿತು. ಇನ್ನೊಂದೆಡೆಯಲ್ಲಿ ಟಿಎಂಸಿ ಸರಕಾರ ಆಶ್ವಾಸನೆ ನೀಡಿದಂತೆ ಅವರಿಗೆ ಜಮೀನೂ ವಾಪಾಸು ಸಿಗಲಿಲ್ಲ ಎಂದು ಅವರು ಹೇಳಿದರು. ರಾಜ್ಯದ ರೈತರು ಇನ್ನು ಸುಮ್ಮನಿರುವುದಿಲ್ಲ. ಈ ಹಿಂದೆ ಹೋರಾಟಗಳಿಂದ ತಮ್ಮ ಹಕ್ಕುಗಳನ್ನು ಪಡೆದಿದ್ದಾರೆ. ಈಗಲೂ ಪಡೆಯುತ್ತಾರೆ ಎಂದು ಅವರು ಹೇಳಿದರು.

ಈ ದೀರ್ಘ ನಡೆಯಲ್ಲಿ ಮೂರು ಜಿಲ್ಲೆಗಳ ಸಾವಿರಾರು ರೈತರು ಮತ್ತು ಕೃಷಿಕೂಲಿಕಾರರು ಭಾಗವಹಿಸಿದರು. ನವಂಬರ್ 28ರ ರಾತ್ರಿ ಅವರೆಲ್ಲ ಹೌರಾ– ಹೂಗ್ಲಿ ಜಿಲ್ಲಾ ಗಡಿಯಲ್ಲಿ ತಂಗಿದ್ದರು. ಸ್ಥಳೀಯ ಜನಗಳ ಮನೆಗಳಲ್ಲಿ ಅವರಿಗೆ ವ್ಯವಸ್ಥೆಗಳನ್ನು ಮಾಡಲಾಯಿತು. ಇವು ಹೆಚ್ಚಿನವು ಮಧ್ಯಮ ವರ್ಗಗಳ ಜನರ ಮನೆಗಳು ಎಂಬುದು ಗಮನಾರ್ಹ.

ನವಂಬರ್ 29ರಂದು ಬೆಳಿಗ್ಗೆ ಹೊರಟ ಮೆರವಣಿಗೆಕಾರರು ಐತಿಹಾಸಿಕ ಹೌರಾ ಸೇತುವೆಯನ್ನು ದಾಟಿ ಮಧ್ಯಾಹ್ನದ ವೇಳೆಗೆ ಕೊಲ್ಕತಾದ ಇನ್ನೊಂದು ಐತಿಹಾಸಿಕ ಜಾಗವಾದ ರಾನೀ ರಾಶ್ಮೋಣಿ ರಸ್ತೆ ತಲುಪಿದರು. ಕಿಸನ್ ಸಭಾದ ರಾಜ್ಯ ಕಾರ್ಯದರ್ಶಿ ಅಮಲ್ ಹಲ್ದರ್, ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಕಾರ್ಯದರ್ಶಿ ಅಮಿಯ ಪಾತ್ರ ಮತ್ತು ಅಧ್ಯಕ್ಷ ತುಷಾರ್ ಘೋಷ್ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ ರೈತರು ಮತ್ತು ಯುವಜನರನ್ನು ಉದ್ದೇಶಿಸಿ ಮಾತನಾಡಿದರು.

ಸಿಂಗೂರ್‌ನಿಂದ ಕೊಲ್ಕತಾ ವರೆಗಿನ ಈ 52 ಕಿ.ಮೀ ದೀರ್ಘ ನಡೆ ರಾಜ್ಯದ ರೈತರಲ್ಲಿ ಮತ್ತು ಯುವಜನರಲ್ಲಿ ಹೊಸ ಚೈತನ್ಯವನ್ನು ತುಂಬಿದರೆ, ದಾರಿಯುದ್ದಕ್ಕೂ ತಮ್ಮ ಸೌಹಾರ್ದವನ್ನು ವ್ಯಕ್ತಪಡಿಸಲು ನಿಂತಿದ್ದ ನಾಗರಿಕರಲ್ಲೂ ವಿದ್ಯುತ್ ಸಂಚಾರವನ್ನು ಉಂಟು ಮಾಡಿತು.















ಬಿಬಿಎಂಪಿ ಆಸ್ತಿತೆರಿಗೆ ಹೆಚ್ಚಳ

ಬಿಬಿಎಂಪಿ ವಸತಿ ಹಾಗೂ ವಾಣಿಜ್ಯ ಕಟ್ಟಡಗಳ ಆಸ್ತಿ ತೆರಿಗೆಯನ್ನು 2019ರ ಏಪ್ರಿಲಿನಿಂದ ಅನ್ವಯವಾಗುವಂತೆ ಕ್ರಮವಾಗಿ ಶೇ.25 ಹಾಗೂ ಶೇ.30 ರಷ್ಟು ಏರಿಕೆ ಮಾಡಲು ಮುಂದಾಗಿದೆ. 2016 ರಲ್ಲಿ ತೆರಿಗೆ ಪರಿಷ್ಕರಣೆಯಾದ ಮೇಲೆ ಮತ್ತೆ ಮಾಡಿಲ್ಲ' ಎಂದು ಬಿಬಿಎಂಪಿ ತನ್ನ ನಿಲುವನ್ನು ಸಮರ್ಥಿಸಿಕೊಂಡಿದೆ. 2008–09 ಹಾಗೂ 2013–14ರ ಅವಧಿಯಲ್ಲಿ ಚುನಾವಣೆಗಳು ಘೋಷಣೆಯಾದ ಪರಿಣಾಮ ಆ ಸಂದರ್ಭದಲ್ಲಿ ತೆರಿಗೆ ಹೆಚ್ಚಳದ ನಿರ್ಧಾರವನ್ನು ಕೈಬಿಡಲಾಗಿತ್ತು. ಹತ್ತು ವರ್ಷಗಳ ಅವಧಿಯಲ್ಲಿ ಒಂದೇ ಸಲ ತೆರಿಗೆ ಹೆಚ್ಚಳ ಮಾಡಿದ್ದರಿಂದ ವರಮಾನ ಸಂಗ್ರಹ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ ಎಂದೂ ಪಾಲಿಕೆ ಹೇಳುತ್ತಿದೆ. ರಾಜಕೀಯ ಲಾಭ ಪಡೆಯುವ ದುರುದ್ದೇಶದಿಂದ ಚುನಾವಣೆ ಸಂದರ್ಭದಲ್ಲಿ ಸುಮ್ಮನಿದ್ದು, ಈಗ ಹತ್ತು ವರ್ಷಗಳಲ್ಲಿ ಅನುಭವಿಸಿದ ಕೊರತೆಯನ್ನೆಲ್ಲ ಒಮ್ಮಿಂದೊಮ್ಮೆಲೇ ಸರಿದೂಗಿಸುವ ಉಮೇದಿನಿಂದ ತೆರಿಗೆದಾರರ ಮೇಲೆ ಭಾರಿ ಪ್ರಮಾಣದ ಹೊರೆ ಹೊರಿಸಲು ಹೊರಟಿರುವುದು ಹೊಣೆಗೇಡಿತನದ ಕ್ರಮ.

ತೆರಿಗೆ ಸಂಗ್ರಹದ ವಿಷಯದಲ್ಲಿ ಇದುವರೆಗಿನ ಬಿಬಿಎಂಪಿ ಯ ಕಾರ್ಯವೈಖರಿ ಕಳಪೆಯಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಬಜೆಟ್‌ನಲ್ಲಿ ಹಾಕಿಕೊಂಡ ತೆರಿಗೆ ಸಂಗ್ರಹದ ಗುರಿಯ ಹತ್ತಿರಕ್ಕೂ ಯಾವತ್ತೂ ಬಂದಿಲ್ಲ. ಬಿಬಿಎಂಪಿಯ ವ್ಯಾಪ್ತಿಯಲ್ಲಿ ಸದ್ಯದ ದರದ ಪ್ರಕಾರ ವಾರ್ಷಿಕ 6,500 ಕೋಟಿ ರೂ.ಯಷ್ಟು ತೆರಿಗೆ ಸಂಗ್ರಹಕ್ಕೆ ಅವಕಾಶಗಳುಂಟು. ಆದರೆ, ಸದ್ಯ ಸಂಗ್ರಹ ಆಗುತ್ತಿರುವುದು ಅದರ ಮೂರನೇ ಒಂದಂಶದಷ್ಟು ತೆರಿಗೆಯಷ್ಟೆ. ಭೌಗೋಳಿಕ ಮಾಹಿತಿ ವ್ಯವಸ್ಥೆಯ (ಜಿಐಎಸ್) ನೆರವಿನಿಂದ ನಗರದಲ್ಲಿ ಒಟ್ಟು 19 ಲಕ್ಷ ಆಸ್ತಿಗಳನ್ನು ಗುರುತಿಸಲಾಗಿದೆ. ಅದರಲ್ಲಿ ಐದು ಲಕ್ಷದಷ್ಟು ಆಸ್ತಿಗಳು ಈಗಲೂ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿರುವುದು ಬೆಳಕಿಗೆ ಬಂದಿದೆ.

ಆಸ್ತಿ ಮೌಲ್ಯದ ಲೆಕ್ಕಾಚಾರ ಸಮರ್ಪಕವಾಗಿ ನಡೆಯದೇ ಇರುವುದು, ತೆರಿಗೆ ಸಂಗ್ರಹದ ವಿಷಯದಲ್ಲಿ ಅಧಿಕಾರಿಗಳು ಉದಾಸೀನ ತೋರುತ್ತಿರುವುದು, ಸುಸ್ತಿದಾರರ ಕಡೆಗೆ ಕಣ್ಣೆತ್ತಿಯೂ ನೋಡದಿರುವುದು, ತೆರಿಗೆ ಕಳ್ಳರಿಗೆ ಕಾರ್ಪೊರೇಟರ್‌ಗಳೇ ಮುಂದೆ ನಿಂತುಕೊಂಡು ಕುಮ್ಮಕ್ಕು ನೀಡುತ್ತಿರುವುದು – ಇವು ವರಮಾನ ಕ್ರೋಡೀಕರಣದಲ್ಲಿ ಆಗಿರುವ ವೈಫಲ್ಯಕ್ಕೆ ಮುಖ್ಯ ಕಾರಣಗಳು. ಬೃಹತ್ ವಾಣಿಜ್ಯ ಕಟ್ಟಡಗಳ ಮಾಲೀಕರು ಆಸ್ತಿಯ ನೈಜ ವಿಸ್ತೀರ್ಣವನ್ನು ಮರೆಮಾಚಿಸಿ, ಸುಳ್ಳು ಲೆಕ್ಕ ನೀಡುವ ಮೂಲಕ ಕೋಟ್ಯಂತರ ರೂಪಾಯಿ ತೆರಿಗೆ ವಂಚಿಸುತ್ತಿರುವ ವಿದ್ಯಮಾನ ಅಧಿಕಾರಿಗಳಿಗೆ ಗೊತ್ತಿಲ್ಲದಿಲ್ಲ. ನಾಗರಿಕರ ಮೇಲೆ ಹೆಚ್ಚಿನ ಹೊರೆಹಾಕುವ ಬದಲು ದಕ್ಷತೆಯಿಂದ ಕಾರ್ಯನಿರ್ವಹಿಸುವ ಮೂಲಕ ಬಾಕಿ ಉಳಿಸಿಕೊಂಡವರನ್ನು, ತೆರಿಗೆ ಕಳ್ಳರನ್ನು ಪತ್ತೆಹಚ್ಚಿ ವರಮಾನ ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸಬೇಕು. ◉

ರೈತರ ಋಣ ಮುಕ್ತಿಗೆ ಮಾರ್ಚ್ ಗಡುವು

ಸಾಲಮನ್ನಾ ಬರಿಯ ಘೋಷಣೆ. ಏನೂ ಆಗುತ್ತಿಲ್ಲ ಎಂಬ ಸತತ ಟೀಕೆಯ ಹಿನ್ನೆಲೆಯಲ್ಲಿ ಸರಕಾರ ಸಂಭಂಧಿಸಿದ ಕೆಲಸಕ್ಕೆ ಇಳಿದಂತೆ ಕಾಣುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳ ಸಾಲ ಮನ್ನಾ ಪ್ರಕ್ರಿಯೆಯನ್ನು 2019ರ ಮಾರ್ಚ್ 15 ರೊಳಗೆ ಪೂರ್ಣಗೊಳಿಸಿ ರೈತರಿಗೆ ಋಣ ಮುಕ್ತ ಪ್ರಮಾಣಪತ್ರಗಳನ್ನು ನೀಡಬೇಕು ಎಂದು ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು. 'ರೈತರ ಸಾಲ ಮನ್ನಾ ಯೋಜನೆ ಕುರಿತಂತೆ ಕೆಲವು ವಲಯಗಳಲ್ಲಿ ಅನಗತ್ಯ ಅಪಪ್ರಚಾರ ನಡೆಯುತ್ತಿದೆ. ರೈತರ ಆತಂಕ ದೂರವಾಗಬೇಕು. ಸಾಲ ಮನ್ನಾ ಪ್ರಕ್ರಿಯೆ ಸ್ಪಷ್ಟವಾಬೇಕು. ಈ ಬಗ್ಗೆ ಜಿಲ್ಲಾಧಿಕಾರಿಗಳು ರೈತರಿಗೆ ಸ್ಪಷ್ಟ ಚಿತ್ರಣ ನೀಡಬೇಕು' ಎಂದು ಅವರು ಸೂಚಿಸಿದ್ದಾರೆ. 'ಡಿಸೆಂಬರ್ 1 ರೊಳಗಾಗಿ ಎಲ್ಲ ಮಾಹಿತಿಯನ್ನು ಸಂಗ್ರಹಿಸಿ, ಸಹಕಾರಿ ಹಾಗೂ ವಾಣಿಜ್ಯ ಬ್ಯಾಂಕುಗಳಲ್ಲಿ ಸಾಲಮನ್ನಾಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಡಿಸೆಂಬರ್ 5 ರಿಂದ ಪ್ರಾರಂಭಿಸಬೇಕು' ಎಂದೂ ಆದೇಶಿಸಿದ್ದಾರೆ..



ಈವರೆಗೆ ದೊರೆತ ಮಾಹಿತಿಯಂತೆ, 16 ಸಾವಿರ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ 21.8 ಲಕ್ಷ ರೈತರ ಸಾಲ ಮಾಹಿತಿ ದತ್ತಾಂಶ ಸೇರ್ಪಡೆ ಪ್ರಗತಿಯಲ್ಲಿದೆ. 1.8 ಲಕ್ಷ ರೈತರ ಆಧಾರ್ ಸಂಖ್ಯೆ, ಪಡಿತರ ಚೀಟಿ ಮತ್ತು ಸರ್ವೆ ಸಂಖ್ಯೆ ದೃಢೀಕರಣ ಮಾಡಲಾಗಿದೆ. ನವೆಂಬರ್ 30ರೊಳಗೆ 2.2 ಲಕ್ಷ ರೈತರು ಸಾಲ ಮನ್ನಾ ಅರ್ಹತೆ ಪಡೆಯಲಿದ್ದಾರೆ. 133 ಬ್ಯಾಂಕ್ಗಳಿಂದ 20.8 ಲಕ್ಷ ರೈತರ ಮಾಹಿತಿ ಸಂಗ್ರಹ. ಅಂದರೆ ಶೇ 92ರಷ್ಟು ಮಾಹಿತಿ ಸಿಕ್ಕಿದೆ. ◉

'ಬಯೋಮೆಟ್ರಿಕ್ಸ್ ನಿಂದ 580 ಕೋಟಿ ರೂ. ಉಳಿತಾಯ' ಅಥವಾ ಪಡಿತರ ಕಡಿತ?

ನ್ಯಾಯಬೆಲೆ ಅಂಗಡಿಗಳಿಗೆ ಬಯೋಮೆಟ್ರಿಕ್ ಅಳವಡಿಸಿದ್ದರಿಂದ ಅಕ್ರಮಗಳಿಗೆ ಕಡಿವಾಣ ಬಿದ್ದಿದ್ದು, ಇದರಿಂದ ಇಲಾಖೆಗೆ ಒಂದು ವರ್ಷದಲ್ಲಿ 580 ಕೋಟಿ ರೂ. ಉಳಿತಾಯವಾಗಿದೆ ಎಂದು ಆಹಾರ ಇಲಾಖೆ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದ್ದಾರೆ. ಅಲ್ಲದೆ, ಪಡಿತರ ಚೀಟಿಗಳಿಗೆ ಆಧಾರ್ ಜೋಡಣೆ ಪ್ರಕ್ರಿಯೆ ಬಳಿಕ 4.5 ಲಕ್ಷ ಬೋಗಸ್ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ ಎಂದು ಅವರು ಇಲಾಖೆ ಪ್ರಗತಿ ಪರಿಶೀಲನೆ ಬಳಿಕ ಮಾಧ್ಯಮ ಪ್ರತಿನಿಧಿಗಳಿಗೆ ವಿವರಿಸಿದರು.

ರಾಜ್ಯದಲ್ಲಿ ಎಲ್ಲ ನ್ಯಾಯಬೆಲೆ ಅಂಗಡಿಗಳಲ್ಲಿ ಬಯೋ ಮೆಟ್ರಿಕ್ ಅಳವಡಿಕೆ ಪೂರ್ಣಗೊಂಡ ಬಳಿಕ ಸರ್ಕಾರಕ್ಕೆ ಇನ್ನಷ್ಟು ಉಳಿತಾಯವಾಗಲಿದೆ. ಪಡಿತರ ಚೀಟಿದಾರರು ತಮ್ಮ ಹೆಬ್ಬೆಟ್ಟು ಹಾಕಿಯೇ ಪಡಿತರ ಖರೀದಿಸಬೇಕು. ಇದರಿಂದ ಬಹುತೇಕ ಅಕ್ರಮಗಳು ನಿಂತಿದೆ ಎಂದರು. ಅಲ್ಲದೆ, ಇಲ್ಲಿಯವರೆಗೆ ಶೇ 99 ರಷ್ಟು ಪಡಿತರ ಚೀಟಿಗಳನ್ನು ಆಧಾರ್‌ಗೆ ಜೋಡಿಸಲಾಗಿದೆ. ಇನ್ನು ಸುಮಾರು 30 ಸಾವಿರ ಕಾರ್ಡ್‌ಗಳನ್ನು ಆಧಾರ್‌ಗೆ ಜೋಡಣೆ ಮಾಡಬೇಕಾಗಿದೆ ಎಂದು ಹೇಳಿದರು.

ಪಡಿತರ ವಿತರಣೆಯಲ್ಲಿ 'ಹಣ ಉಳಿತಾಯ', 'ಅಕ್ರಮಗಳಿಗೆ ಕಡಿವಾಣ', 'ಬೋಗಸ್ ಕಾರ್ಡುದಾರರ ನಿವಾರಣೆ' ಇವುಗಳ ಬಗ್ಗೆ ಇಷ್ಟರ ವರೆಗೆ ಆಗಿ ಹೋದ ಎಲ್ಲಾ ಆಹಾರ ಇಲಾಖೆ ಸಚಿವರು ಹೇಳುತ್ತಲೇ ಬಂದಿದ್ದಾರೆ. ಆಗಾಗ ಪಡಿತರ ಚೀಟಿಗೆ ವಿದ್ಯುತ್ ಶಕ್ತಿ ಬಿಲ್ ಜೋಡಣೆ ಇತ್ಯಾದಿಯಾಗಿ ಹೊಸ ಷರತ್ತುಗಳನ್ನು ಹಾಕಿದಾಗಲೆಲ್ಲ ಇಂತಹ ಹೇಳಿಕೆಗಳು ಬರುತ್ತಲೇ ಇರುತ್ತವೆ. ಆದರೆ 'ಅಕ್ರಮಗಳಿಗೆ ಕಡಿವಾಣ', 'ಬೋಗಸ್ ಕಾರ್ಡುದಾರರ ನಿವಾರಣೆ' ಗೆ ಹೊಸ ಹೊಸ ಕ್ರಮಗಳನ್ನು ಕೈಗೊಳ್ಳುತ್ತಲೇ ಇರುತ್ತಾರೆ. ಆದರೆ ತಳಮಟ್ಟದ ವರದಿಗಳು ಹೇಳುವುದು ತಿರುವು ಮುರುವಾಗಿರುತ್ತದೆ. ಪ್ರತಿ ಇಂತಹ ಕ್ರಮಗಳು ಬಂದಾಗ ನಿಜವಾದ ಫಲಾನುಭವಿಗಳಿಗೆ ತೊಂದರೆಯಾಗಿರುವುದು, ಮತ್ತು ಅಕ್ರಮಗಳು ಅವ್ಯಾಹತವಾಗಿ ಮುಂದುವರೆಯುತ್ತವೆ. ಆಧಾರ ಜೋಡಣೆಯನ್ನೇ ತೆಗೆದುಕೊಂಡರೆ ಉಪಕರಣದ ತಾಂತ್ರಿಕ ವೈಫಲ್ಯ, ಸಂಪರ್ಕ ಲಿಂಕ್ ವೈಫಲ್ಯ, ಕೆಲವೊಮ್ಮೆ ಕಠಿಣ ಕೆಲಸ ಮಾಡುವ ರೇಖೆಗಳು ಬದಲಾಗುವುದರಿಂದ ಹಲವಾರು ನಿಜವಾದ ಪಡಿತರ ಚೀಟಿ ಇರುವವರಿಗೆ ಪಡಿತರ ನಿರಾಕರಿಸಲಾಗಿದೆ. ಇವೆಲ್ಲ ಪಡಿತರ ವ್ಯವಸ್ಥೆಯನ್ನೇ ಕಳಚಿ ಬಿಡುವ ಹುನ್ನಾರವಷ್ಟೇ. ◉

ಕಲಬುರ್ಗಿ ಹತ್ಯೆ ತನಿಖೆ: ಸರ್ಕಾರಕ್ಕೆ ತರಾಟೆ

ಹಿರಿಯ ಸಂಶೋಧಕ ಡಾ.ಎಂ.ಎಂ. ಕಲಬುರ್ಗಿ ಅವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ರಾಜ್ಯ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡ ಸುಪ್ರೀಂ ಕೋರ್ಟ್, 'ತನಿಖೆಯಲ್ಲಿ ಪ್ರಗತಿಯನ್ನೇ ಸಾಧಿಸದೇ ಎಲ್ಲರನ್ನೂ ಮೂರ್ಖರನ್ನಾಗಿ ಮಾಡಲಾಗುತ್ತಿದೆ' ಎಂದು ಅಭಿಪ್ರಾಯಪಟ್ಟಿತು. ಕಲಬುರ್ಗಿ ಅವರ ಪತ್ನಿ ಉಮಾದೇವಿ ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಆರ್. ಎಫ್. ನರೀಮನ್ ಹಾಗೂ ನವೀನ್ ಸಿನ್ಹಾ ಅವರಿದ್ದ ಪೀಠ, ಇದುವರೆಗೆ ನಡೆದಿರುವ ತನಿಖೆಯ ವಿವರ ಒಳಗೊಂಡ ವರದಿ ಯನ್ನು ಎರಡು ವಾರಗಳಲ್ಲಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿತು.

'ನೀವು ಸಲ್ಲಿಸಲಿರುವ ವರದಿಯನ್ನು ಅವಲೋಕಿಸಲಾಗುತ್ತದೆ. ಒಂದೊಮ್ಮೆ ತನಿಖೆಯಲ್ಲಿ ಪ್ರಗತಿ ಸಾಧಿಸದಿದ್ದರೆ ತನಿಖೆಯ ಉಸ್ತುವಾರಿಯನ್ನು ನೋಡಿಕೊಳ್ಳುವಂತೆ ಬಾಂಬೆ ಹೈಕೋರ್ಟ್‌ಗೆ ಸೂಚಿಸುವುದು ಅನಿವಾರ್ಯವಾಗಲಿದೆ' ಎಂದು ನ್ಯಾಯಪೀಠ ಸುಳಿವು ನೀಡಿತು. ತನಿಖೆ ಪೂರ್ಣಗೊಳ್ಳಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗಬಹುದು ಎಂಬ ಮಾಹಿತಿ ಸಲ್ಲಿಸಲಾಗುವುದು ಎಂದು ಹೆಚ್ಚುವರಿ ಅಡ್ವೋಕೇಟ್ ಜನರಲ್ ದೇವದತ್ತ ಕಾಮತ್ ತಿಳಿಸುತ್ತಿದ್ದಂತೆಯೇ, 'ನೀವು ಮಾಹಿತಿ ನೀಡಿ, ಇದೇ ರೀತಿಯ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ಬಾಂಬೆ ಹೈಕೋರ್ಟ್‌ಗೆ ನಾವು ಈ ಪ್ರಕರಣವನ್ನೂ ವರ್ಗಾಯಿಸುತ್ತೇವೆ' ಎಂದು ಪೀಠ ಎಚ್ಚರಿಸಿತು. ಪ್ರಕರಣದ ತನಿಖೆಯ ಉಸ್ತುವಾರಿ ಯನ್ನು ಬಾಂಬೆ ಹೈಕೋರ್ಟ್‌ಗೆ ವರ್ಗಾಯಿಸುವುದು ಸೂಕ್ತ ಎಂದು ಅರ್ಜಿದಾರರ ಪರ ವಕೀಲರೂ ಅಭಿಪ್ರಾಯಪಟ್ಟರು.

ಇದೊಂದು ಗಂಭೀರ ಬೆಳವಣಿಗೆ. ಗೌರಿ ಲಂಕೇಶ್ ಅವರ ಪ್ರಕರಣದಲ್ಲಿ ಉತ್ತಮ ಪ್ರಗತಿ ಸಾಧಿಸಿರುವ ರಾಜ್ಯ ಪೊಲೀಸ್ ಇಲಾಖೆ ಕಲಬುರ್ಗಿ ಪ್ರಕರಣದಲ್ಲಿ ಯಾಕೆ ಪ್ರಗತಿ ಸಾಧಿಸಲು ಸಾಧ್ಯವಾಗಿಲ್ಲ? ಅದೂ ಎರಡೂ ಪ್ರಕರಣಗಳು ಸಂಭಂಧಿತ ಎಂಬ ಮಾಹಿತಿ ಹಿಂದಿನಿಂದಲೂ ಇರುವ ಹಿನ್ನೆಲೆಯಲ್ಲಿ ಇನ್ನಷ್ಟು ಆಶ್ಚರ್ಯಕರ. ಗೌರಿ ಹತ್ಯೆ ಪ್ರಕರಣದಲ್ಲೇ ಪ್ರಗತಿ ಕುಂಠಿತವಾಗಿದೆ. ಅದೂ ವಿಶೇಷ ತನಿಖಾ ದಳದದ ಬಿಲ್ಲುಗಳು ಪಾಸಾಗಲಿಲ್ಲವೆಂಬ ಕಾರಣಕ್ಕೆ ಎಂಬುದು ಇನ್ನೂ ಆತಂಕಕಾರಿ. ◉

ಗೌರವಕ್ಕೂ ಅಧಿಕೃತತೆಯೇ?

ಕೇಳಿಸಿದ್ದು

ನಮ್ಮ ಸಮಾಜದಲ್ಲಿ ಒಂದು ಸಾರ್ವತ್ರಿಕ ತತ್ವಕ್ಕೆ (ಉದಾಹರಣೆಗೆ ಸಾವಿಗೆ) ಅದರದ್ದೇ ಆದ ಅಪವಾದ ಇರುತ್ತದೆ. ಆದರೆ ಅಪವಾದಗಳು ತಮ್ಮದೇ ಆದ ಪ್ರತ್ಯೇಕ ನಿಯಮಾವಳಿಯನ್ನು ರೂಪಿಸಿಕೊಳ್ಳಲು ಹೊರಟರೆ ಅದು ಅನರ್ಥಕಾರಿ.

ಇಂದು ರಾಜಕೀಯ ಪ್ರಭಾವವುಳ್ಳ ಮಠಾಧಿಪತಿ, ಸಾಹಿತಿ, ಕಲಾವಿದ, ಉದ್ಯಮಿ, ರಾಜಕಾರಣಿ ತೀರಿಕೊಂಡರೆ ಅವರನ್ನು 'ಸಕಲ ಸರ್ಕಾರಿ ಗೌರವದೊಂದಿಗೆ' ಬೀಳ್ಕೊಡುವ ಪರಿಪಾಟ ಪ್ರಾರಂಭವಾಗಿದೆ. ಇದು ಯುದ್ಧದಲ್ಲಿ ಹುತಾತ್ಮರಾದ ಸೈನಿಕರಿಗೆ, ಹಾಲಿ– ಮಾಜಿ ರಾಷ್ಟ್ರಪತಿ, ಪ್ರಧಾನಿ, ಮುಖ್ಯಮಂತ್ರಿಗಳಿಗೆ ಮಾತ್ರ ಸಲ್ಲಬೇಕಾದ ಅಧಿಕೃತ ಶಿಷ್ಟಾಚಾರ. ಯಾವುದೇ ರಾಜಕೀಯ ಅಧಿಕಾರ ಹೊಂದಿರದಿದ್ದ, ರಾಷ್ಟ್ರಪಿತ ಮಹಾತ್ಮ ಗಾಂಧಿ ಅನಿರೀಕ್ಷಿತವಾಗಿ ಹತ್ಯೆಯಾದಾಗ ಈ ಶಿಷ್ಟಾಚಾರಕ್ಕೆ 'ಸರ್ಕಾರದ ವಿವೇಚನೆಯ ಮೇರೆಗೆ' ಎಂಬ ಹೊಸದೊಂದು ನಿಬಂಧನೆ ಸೇರಿಸಲಾಯಿತು. ರಾಜಕೀಯೇತರ ವ್ಯಕ್ತಿಗಳ ಪೈಕಿ ಗಾಂಧಿಯ ನಂತರ ಅಂತ್ಯವಿಧಿಯ ಈ ಅಧಿಕೃತ ಗೌರವ ಸಂದದ್ದು 49 ವರ್ಷಗಳ ನಂತರ, ಮದರ್ ತೆರೇಸಾಗೆ (1997ರಲ್ಲಿ).

ಅಲ್ಲಿಂದಾಚೆಗೆ ನಾನಾ ರಾಜ್ಯ ಸರ್ಕಾರಗಳು ಈ ಶಿಷ್ಟಾಚಾರವನ್ನು ತನ್ನಿಚ್ಛೆಯಂತೆ ದುರ್ಬಳಕೆ ಮಾಡಿಕೊಂಡು ಬಂದಿವೆ. ಬಾಳಾ ಠಾಕ್ರೆ, ಶಶಿ ಕಪೂರ್, ಶ್ರೀದೇವಿ, ಅಜಿತ್ ವಾಡೇಕರ್ ಮುಂತಾದ ವಿಐಪಿಗಳಿಗೆ ಇದನ್ನು ನೀಡಲಾಯಿತು. ಕರ್ನಾಟಕದಲ್ಲೂ ಮೃತರಾದ ಹಲವು ಮಠಾಧಿಪತಿಗಳು, ಚಿತ್ರ ನಿರ್ಮಾಪಕರು ಮತ್ತು ಹಲವು ರಾಜಕೀಯೇತರ ವ್ಯಕ್ತಿಗಳು ಈ ಮರಣೋತ್ತರ ಗೌರವ ಪಡೆದಿರುವುದುಂಟು. .. ..'ಸರ್ಕಾರಿ ಗೌರವ' ಸಲ್ಲಿಸುವ ವಿಷಯದಲ್ಲಿ ಕಟ್ಟುನಿಟ್ಟಾದ ನಿಯಮಾವಳಿ ರೂಪಿಸಬೇಕಾಗಿದೆ.

ಬೆಂಗಳೂರಿನಲ್ಲಿ ಯಾವುದೇ ವಿಐಪಿ ಸತ್ತಾಗ ನಡೆಸಲಾಗುವ ಅಂತಿಮ ಯಾತ್ರೆಯ ಮೆರವಣಿಗೆ, ಅಂತಿಮ ದರ್ಶನಗಳ ವ್ಯವಸ್ಥೆ ಮಾಡುವ ಬಗೆಗೂ ಸರ್ಕಾರಗಳು ಮರುಚಿಂತನೆ ನಡೆಸಬೇಕಾಗುತ್ತದೆ. .. ..

ಸಾವು ಬೇರೆ ಮತ್ತು ಅಂತ್ಯವಿಧಿ ಬೇರೆ. ಯಾವುದೇ ವ್ಯಕ್ತಿ ತೀರಿಕೊಂಡಾಗ ಆ ವ್ಯಕ್ತಿ ಉಂಟು ಮಾಡುವ ಖಾಲಿತನವನ್ನು ತುಂಬಲು ಯಾರಿಂದಲೂ ಸಾಧ್ಯವಿಲ್ಲ. ಬದುಕಿನ ನಿರರ್ಥಕತೆಯನ್ನು, ಕ್ಷಣ ಭಂಗುರತೆಯನ್ನು ಧ್ಯಾನಿಸಲು ಆ ಖಾಲಿತನ ಬದುಕಿರುವವರಿಗೆ ಒಂದು ಅವಕಾಶ ನಿರ್ಮಿಸಿಕೊಡುತ್ತದೆ. ಅಂತ್ಯವಿಧಿಯನ್ನು ವೈಭವೀಕರಿಸುತ್ತ ಆ ಖಾಲಿತನವನ್ನು ಮರೆಮಾಚಲು, ವಿಸ್ಮೃತಿಗೆ ಸರಿಸಲು ಪ್ರಯತ್ನಿಸಿದರೆ ಅದು ಆತ್ಮವಂಚನೆಯಾಗುತ್ತದೆ. ಕ್ರಮೇಣ ಒಂದು ಮೌಢ್ಯವಾಗಿ ಪರಿಣಮಿಸುತ್ತದೆ.

ಇದು ಸಾಲದೆಂದು ವಿಐಪಿಗಳಿಗೆ ಸರ್ಕಾರಿ ಜಾಗಗಳಲ್ಲಿ ಸಮಾಧಿ ನಿರ್ಮಿಸುವ ಹೊಸ ಪದ್ಧತಿ ಬೇರೆ ಕರ್ನಾಟಕದಲ್ಲಿ ಪ್ರಾರಂಭವಾಗಿದೆ. .. ..ಪ್ರತಿಯೊಬ್ಬ ಕರ್ಮಯೋಗಿಗೂ ಹೀಗೆ ಅವನ ಕರ್ಮಭೂಮಿಯಲ್ಲೇ ಸಮಾಧಿ ನಿರ್ಮಿಸುತ್ತ ಹೋದರೆ ಕರ್ಮಭೂಮಿಗಳೆಲ್ಲ ರುದ್ರಭೂಮಿಗಳಾಗಿ ಬದಲಾಗುತ್ತವೆ. .. ..ನಮ್ಮ ವಿಶ್ವವಿದ್ಯಾಲಯಗಳು, ಕಲಾಕ್ಷೇತ್ರಗಳು, ಸ್ಟುಡಿಯೊಗಳು, ಸ್ಟೇಡಿಯಂಗಳು, ನ್ಯಾಯಾಲಯದ ಆವರಣಗಳು, ವಿಧಾನಸೌಧ–ವಿಕಾಸಸೌಧಗಳು ಮೃತರ ಸ್ಮಾರಕಗಳಾಗಿ, ಪ್ರವಾಸಿಗರನ್ನು ಆಕರ್ಷಿಸುವ ತಾಣಗಳಾಗಿ ಬೆಳೆಯುವುದರಲ್ಲಿ ಸಂಶಯವಿಲ್ಲ. ಇವೆಲ್ಲ ಅಂತಹ ಸಂಸ್ಥೆಗಳ ಘನತೆಗೆ ಮತ್ತು ಆ ಸಂಸ್ಥೆಗಳಿಗೆ ಕೊಡುಗೆ ನೀಡಿದ ಹುತಾತ್ಮರುಗಳಿಗೆ ಅಪಚಾರವಾಗುವ ಕೆಲಸಗಳಾಗಿವೆ. .. ..

ನಾಡಿಗಾಗಿ ತಮ್ಮ ಬದುಕನ್ನು ಮುಡಿಪಿರಿಸಿದ ಯಾವುದೇ ವ್ಯಕ್ತಿ ಸತ್ತರೆ ಇಡೀ ನಾಡೇ ಶೋಕಾಚರಣೆ ನಡೆಸುತ್ತದೆ, ಮೃತ ವ್ಯಕ್ತಿಯ ಕೊಡುಗೆಗಳನ್ನು ಸ್ಮರಿಸುತ್ತದೆ. ಈ ಸ್ಮರಣೆ, ಶೋಕಾಚರಣೆಗಳು ತುಂಬ ಖಾಸಗಿಯಾದವು. ಅದು ರಾಜಕಾರಣಿಗಳ ಪಾರುಪತ್ಯೆಯಲ್ಲಿ ಬಹಿರಂಗದ ಪ್ರದರ್ಶನವಾಗುವ ಬಡಿವಾರದ ಪ್ರವೃತ್ತಿಯಷ್ಟೇ ಆಕ್ಷೇಪಾರ್ಹ.

– ಮಹೇಶ್ ನಾಗರಾಜ್, ಟಿ.ಎನ್. ವಾಸುದೇವಮೂರ್ತಿ (ಪ್ರಜಾವಾಣಿ, ನವೆಂಬರ್ 27)

ಅಂಬರೀಶ್ ಸಾವಿನ ಹಿನ್ನೆಲೆಯಲ್ಲಿ

ಸಿನೆಮಾ, ರಾಜಕಾರಣ ಮತ್ತು ಟಿವಿಗಳ ಅನೈತಿಕ ತ್ರಿಕೋನ

ಜಿ.ಎನ್. ನಾಗರಾಜ್

ಲಾಭಕೋರ ಸಿನೆಮಾ ರಂಗದ ಅಡಿಪಾಯ ಭ್ರಮೆಯ ಸೃಷ್ಟಿ. ಆಳುವ ವರ್ಗಗಳ ರಾಜಕೀಯದ ಆಧಾರವೂ ಭ್ರಮೆಯೇ. ಆದರೆ ಇವೆರಡೂ ಭ್ರಮೆಗಳೂ ಬೇರೆಯೇ. ಕರ್ನಾಟಕದಲ್ಲಿ ಜನಮರುಳು ಸಿನೆಮಾ ಮತ್ತು ಆಳುವ ವರ್ಗದ ರಾಜಕಾರಣದ ಅವಳಿ ಭ್ರಮೆಗಳನ್ನು ಜೋಡಿಸುವ ನಿಟ್ಟಿನಲ್ಲಿ ಹೆಚ್ಚಿನ ಸಾಧ್ಯತೆಯಿದ್ದ ಅಂಬರೀಶ್ ಅವರ ವೈಫಲ್ಯ, ಮತ್ತು ಅಂತಹ ಸಾಧ್ಯತೆ ಮುಂದೆಯೂ ಕಡಿಮೆಯೇ ಎನ್ನುವುದು, ನೈಜ ಜನಪರ ರಾಜಕಾರಣ ಮತ್ತು ಪ್ರಜಾಪ್ರಭುತ್ವದ ದೃಷ್ಟಿಯಿಂದ ಸಕಾರಾತ್ಮಕವಾದದ್ದೇ. ಏಕೆಂದರೆ ಅಂತಹ ಅವಳಿ ಭ್ರಮೆಗಳ ಜೋಡಣೆಯನ್ನು ಒಡೆಯುವ ಕೆಲಸ ಇನ್ನೂ ಹೆಚ್ಚಿನ ಸವಾಲಿನದ್ದು. ಆದರೆ ಅಂಬರೀಶರ ಬದುಕಿನ ಮತ್ತು ಮರಣದ ಸಂದರ್ಭದಲ್ಲಿ ಸಿನೆಮಾ, ರಾಜಕಾರಣ ಮತ್ತು ಟಿವಿಗಳ ಒಳ ಸಂಬಂಧಗಳು ಸಿಟಿ ಸ್ಕ್ಯಾನ್‌ಗೆ ಒಳಗಾದಂತೆ ಬಯಲಾಗಿದೆ. ಈ ತ್ರಿಕೋನ ಸೃಷ್ಟಿಸುವ ಸಾಂಸ್ಕೃತಿಕ, ರಾಜಕೀಯ ಪರಿಸರದ ಪರಿಣಾಮವನ್ನು ನಿವಾರಿಸುವ ಸವಾಲು, ನೈಜ ಜನಪರ ಪ್ರಜಾಪ್ರಭುತ್ವ ರಾಜಕಾರಣಕ್ಕಾಗಿ ಮತ್ತು ಸಾಮಾಜಿಕ ಬದಲಾವಣೆಗಾಗಿ ದುಡಿಯುತ್ತಿರುವ ಚಳುವಳಿಗಳ ಮೇಲಿದೆ.

ಅಂಬರೀಶ್ ಎಂಬ ಜನಪ್ರಿಯ ನಟನ ನಿಧನಕ್ಕೆ ಸಂತಾಪ ಸಹಜವಾದದ್ದೇ. ಅವರ ಚಿತ್ರಗಳ ನೋಡುಗರು ದುಃಖಕ್ಕೆ ಮಿಡಿಯುವುದು ಸಹಜವೇ. ಆದರೆ ನಾಲ್ಕು ದಿನವಾದರೂ ಸುದ್ದಿ ಟಿವಿಗಳು ಅಂಬರೀಶ್‌ರವರ ಸಾವನ್ನು, ರಾಜ್ಯದ ಮೊದಲ ಸಾಲಿನ ನಾಯಕರಾದ ಜಾಫರ್ ಶರೀಫರ ಕೊಡುಗೆಯನ್ನಿರಲಿ ಅವರ ಅಂತಿಮ ಸಂಸ್ಕಾರದ ವರದಿ ಮಾಡುವುದನ್ನೂ ಅಲಕ್ಷಿಸಿ, ಉಳಿದನೇಕ ಜನರ ಸಂಕಟ, ಸಮಸ್ಯೆಗಳನ್ನು ಮೂಲೆಗೆ ಹಾಕಿ ಮೆರೆಸುತ್ತಿರುವ ರೀತಿ ಮಾಧ್ಯಮ ಸ್ವಾತಂತ್ರ್ಯಕ್ಕೆ ಎಸಗಿದ ಅಪಚಾರ. ದುರ್ಲಾಭಕೋರ ಸಿನೆಮಾ ಮತ್ತು ಮಾಧ್ಯಮಗಳ ಅನೈತಿಕ ಸಂಬಂಧದ ಬಹಿರಂಗ ಪ್ರದರ್ಶನ ಮಾತ್ರವಲ್ಲ, ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಕೊಡಲಿಪೆಟ್ಟಾದ ದುಷ್ಟ ರಾಜಕೀಯವೂ ಹೌದು.

ಲಾಭಕೋರ ಸಿನೆಮಾ ರಂಗದ ಅಡಿಪಾಯ ಭ್ರಮೆಯ ಸೃಷ್ಟಿ. ಆಳುವ ವರ್ಗಗಳ ರಾಜಕೀಯದ ಆಧಾರವೂ ಭ್ರಮೆಯೇ. ಇವೆರಡೂ ಭ್ರಮೆಗಳೂ ಒಂದನ್ನೊಂದು ಪೋಷಿಸುತ್ತಾ ಪರಸ್ಪರ ಪೂರಕವಾಗಿ ಜನರನ್ನು ಭ್ರಮೆಯಲ್ಲಿ ಮುಳುಗಿಸುತ್ತಾ ಈ ಶೋಷಕ ವ್ಯವಸ್ಥೆಯನ್ನು ಪೋಷಿಸಿವೆ. ಇತ್ತೀಚಿನ ದಶಕಗಳಲ್ಲಿ ಮನೆ ಮನೆಯಲ್ಲೂ ಪ್ರಮುಖ ಸ್ಥಾನ ಆಕ್ರಮಿಸಿರುವ ಟಿವಿ ಎರಡೂ ರಂಗಗಳ ಭ್ರಮೆಯ ಬೆಳೆಯನ್ನು ಮತ್ತಷ್ಟು ಹುಲುಸಾಗಿಸಲು ರಾಸಾಯನಿಕ ಗೊಬ್ಬರಗಳನ್ನು ವಿಪುಲವಾಗಿ ಎರಚುತ್ತಿದೆ.

ಅಂಬರೀಶರ ಬದುಕಿನ ಮತ್ತು ಮರಣದ ಸಂದರ್ಭದಲ್ಲಿ ಈ ಸಿನೆಮಾ, ರಾಜಕಾರಣ ಮತ್ತು ಟಿವಿಗಳ ಒಳ ಸಂಬಂಧಗಳು ಸಿಟಿ ಸ್ಕ್ಯಾನ್‌ಗೆ ಒಳಗಾದಂತೆ ಬಯಲಾಗಿದೆ.

ಸುದ್ದಿ ಚಾನೆಲ್‌ಗಳು ಅಂಬರೀಶ್‌ರವರ ಮರಣದ ನಂತರ ಹರಿಸಿದ ಉತ್ಪ್ರೇಕ್ಷೆಯ ಸುರಿಮಳೆ ಮತ್ತು ಒಕ್ಕಣ್ಣತನದ ವಿಶ್ಲೇಷಣೆ ಈ ಅಂಶವನ್ನು ಎತ್ತಿ ತೋರಿಸಿದೆ. ಅನಂತಕುಮಾರ್, ವಾಜಪೇಯಿಯವರ ಮರಣದ ಸಂದರ್ಭದಲ್ಲೂ ಇದನ್ನು ಕಾಣಬಹುದು. ಆದರೆ ಅಂಬರೀಶ್‌ರವರ ವಿಷಯದಲ್ಲಿ ಸಿನೆಮಾ ಮತ್ತು ರಾಜಕಾರಣದ ಬೆರಕೆಯಿಂದಾಗಿ ಮತ್ತಷ್ಟು ರಾಚುವಂತಿದೆ.

ಸಿನೆಮಾ, ರಾಜಕಾರಣದ ಭ್ರಮೆಗಳು ಮತ್ತು ಅಂಬರೀಶ್

ಅಂಬರೀಶ್ ಕರ್ನಾಟಕದಲ್ಲಿ ಚುನಾವಣಾ ರಾಜಕೀಯಕ್ಕೆ ಪ್ರವೇಶಿಸಿ ಯಶಸ್ವಿಯಾದ ಮೊದಲ ನಟ. ಕೆಲ ನಟ, ನಟಿಯರು ರಾಜಕೀಯಕ್ಕೆ ಕಾಲಿಟ್ಟು ಶಾಸಕ/ ಶಾಸಕಿಯರಾಗಿದ್ದರೂ ಅದು ನಾಮಕರಣ ಸದಸ್ಯರಾಗಿ. ಉಮಾಶ್ರೀ ಮಾತ್ರ ಚುನಾವಣಾ ರಾಜಕೀಯಕ್ಕೆ ಕಾಲಿಟ್ಟು ಭಾಗಶಃ ಯಶಸ್ಸು ಗಳಿಸಿದವರು. ಅಂಬರೀಶ್‌ರವರು ಸಂಸದರಾಗಿ, ಶಾಸಕರಾಗಿ ಅತ್ಯಧಿಕ ಬಹುಮತದಿಂದ ಚುನಾಯಿತರಾಗುತ್ತಿದ್ದರು ಮಾತ್ರವಲ್ಲ, ಮುಖ್ಯಮಂತ್ರಿಯಾಗುವ, ರಾಜ್ಯದ ರಾಜಕಾರಣದಲ್ಲಿ ತಮಿಳುನಾಡು, ಆಂಧ್ರಪ್ರದೇಶದಂತೆ ಸಿನೆಮಾ ರಂಗದ ಛಾಪು ಮೂಡಿಸುವ ಸಾಧ್ಯತೆ ಉಳ್ಳ ವ್ಯಕ್ತಿಯಾಗಿದ್ದರು.

ಕನ್ನಡದ ಮೇರು ನಟ ರಾಜಕುಮಾರ್‌ರವರಿಗೆ ಇಂತಹ ಸಾಧ್ಯತೆ ಇತ್ತು. ಹಲವು ಪಕ್ಷಗಳು ಅವರನ್ನು ಪದೇ ಪದೇ ಅಭ್ಯರ್ಥಿಯಾಗಲು ಆಹ್ವಾನಿಸುತ್ತಿದ್ದರು. ಆದರೆ ರಾಜಕುಮಾರ್‌ರವರು ಬಹಳ ಯೋಚನೆ ಮಾಡಿ ರಾಜಕೀಯದ ಹೊಳೆಯ ಒಳಗೆ ಕಾಲಿಡಲು ಹಿಂಜರಿದರು.

ಕೃಪೆ: ಪಿ. ಮಹಮ್ಮದ್



ಕರ್ನಾಟಕದ ಜನತೆಗೆ ನಟರ ಬಗ್ಗೆ ಅಭಿಮಾನವಿದ್ದರೂ ತಮಿಳುನಾಡಿನಂತೆ ಸಿನೆಮಾ ಮತ್ತು ನಟರ ಬಗ್ಗೆ ಭಾವುಕ ಮನೋಭಾವದವರಲ್ಲ ಎಂಬುದು ಅವರಿಗೆ ಅರಿವಾಗಿತ್ತೆಂದು ಕಾಣುತ್ತದೆ.

ಅಂಬರೀಶ್‌ರವರ ಉದಾಹರಣೆಯನ್ನೇ ತೆಗೆದುಕೊಂಡರೂ ಇದು ಸ್ಪಷ್ಟವಾಗುತ್ತದೆ. ರಾಜಕಾರಣದಲ್ಲಿ ಅಂಬರೀಶ್‌ರವರಿಗೆ ನಟನಾಗಿ ಅವರ ಜನಪ್ರಿಯತೆ ಮಾತ್ರವಲ್ಲ, ಅವರ ಜಾತಿ ಹಿನ್ನೆಲೆಯೂ ಒಂದು ಪ್ರಮುಖ ಆಧಾರವಾಗಿತ್ತು. ಅದಕ್ಕಾಗಿಯೇ ಹೆಚ್ಚಾಗಿ ಮಂಡ್ಯದಲ್ಲಿಯೇ ಅವರ ಸ್ಪರ್ಧೆ, ಗೆಲುವು ಎಲ್ಲಾ. ಒಕ್ಕಲಿಗರ ಮತಗಳಿಗಾಗಿ ಜನತಾದಳ ಮತ್ತು ಅಂಬರೀಶ್ ನಡುವಣ ಸ್ಪರ್ಧೆಯಲ್ಲಿಯೇ ಸೋಲು ಕೂಡಾ.

ಸಿನೆಮಾ ಮತ್ತು ಜಾತಿ ಈ ಎರಡರ ಜೋಡಣೆ, ರಾಜ್ಯದಲ್ಲಿ ಪ್ರಬಲ ರಾಜಕೀಯ ಶಕ್ತಿಯಾಗಬಹುದಾಗಿದ್ದ ಹಾಗೂ ಮುಖ್ಯಮಂತ್ರಿ ಪಟ್ಟವನ್ನು ಇವರ ಕೈಗಿಡಬಹುದಾಗಿದ್ದ ಪ್ರಬಲ ಜೋಡಣೆಯೇ. ಆದರೆ ಅದು ಯಾಕೆ ಕೈಗೂಡಲಿಲ್ಲ ಎಂಬುದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು?

ಆದರೆ ಸಿನೆಮಾಗಳು ಮೂಡಿಸುವ ಭ್ರಮೆಯೇ ಬೇರೆ ರಾಜಕಾರಣಕ್ಕೆ ಅವಶ್ಯವಾದ ಭ್ರಮೆಯೇ ಬೇರೆ. ಸಿನೆಮಾದಲ್ಲಿ ಅಂಬರೀಶ್ ಮೂಡಿಸಿದ ವ್ಯವಸ್ಥೆಯ ವಿರುದ್ಧದ ಹುಸಿ ದಂಗೆಯ ರೆಬೆಲ್ ಬಿಂಬದ ಭ್ರಮೆ ರಾಜಕಾರಣದಲ್ಲಿ ಸ್ವಲ್ಪ ಉಪಯೋಗಕ್ಕೆ ಬರುತ್ತದೆ. ಆದರೆ ತಂತಾನೆ ರಾಜಕಾರಣಕ್ಕೆ ಅವಶ್ಯವಾದಷ್ಟು ಅಪಾರ ಮತ್ತು ಭಿನ್ನವಾದ ಭ್ರಮೆಯ ಪ್ರಮಾಣವನ್ನು ಸೃಷ್ಟಿಸಿ ಜನರ ಮನಸ್ಸನ್ನು ಆವರಿಸುವಲ್ಲಿ ಸೋಲುತ್ತದೆ.

ಜನರ ಹಲ ಹಲವು ಸಮಸ್ಯೆಗಳು, ಅದರ ವಿವಿಧ ಆಯಾಮಗಳು, ಅವುಗಳಿಗೆ ನೈಜ ಪರಿಹಾರಗಳ ಬಗ್ಗೆ ತಿಳುವಳಿಕೆ ಅತ್ಯವಶ್ಯ. ನೈಜ ಪರಿಹಾರ ನೀಡದೆ ಜನರನ್ನು ದಾರಿ ತಪ್ಪಿಸಿ ಭ್ರಮೆಯಲ್ಲಿ ಮುಳುಗಿಸುವ ಕಲೆಯೂ ಇರಬೇಕು. ಅಂಬರೀಶ್ ತಮ್ಮ ರಾಜಕಾರಣದ ಇಡೀ ಅವಧಿಯಲ್ಲಿ ಇಂತಹ ಪಾತ್ರವಹಿಸುವುದರಲ್ಲಿ ಹೀನಾಯವಾಗಿ ಸೋತರು. ಜನರ ಸಮಸ್ಯೆಗಳನ್ನು ಅರಿಯುವ ಮಾತಂತಿರಲಿ, ಜನರು ಸಮೀಪದಲ್ಲಿಯೂ ಸುಳಿಯುವ ಅವಕಾಶವಿಲ್ಲದ ಜೀವನ ಶೈಲಿ ಅವರದು.

ತಮ್ಮ ಜನ ಪ್ರತಿನಿಧಿತ್ವವನ್ನು ಕೂಡಾ ತಮ್ಮ ಹಿಂದೆಮುಂದೆ ಸುಳಿಯುವ ಸ್ವಾರ್ಥಿ ಭಂಟರಿಗೆ ಹೊರಗುತ್ತಿಗೆ ನೀಡಿದರು. ಇತ್ತೀಚಿನ ಅವರ ಶಾಸಕತ್ವವನ್ನು ಮಂಡ್ಯ ಬಳಿಯ ಅಮರಾವತಿ ಹೋಟೆಲ್ ಮಾಲೀಕನಿಗೆ ವಹಿಸಿದರು. ಇನ್ನುಳಿದಂತೆ ತಮ್ಮ ಪ್ರಭಾವವನ್ನು ಬಳಸಿ ಹತ್ತಿರದವರಿಗೆ ಸರ್ಕಾರದಿಂದ ಆಗಬೇಕಾದ ಅನುಕೂಲ ಮಾಡಿಕೊಡುವಷ್ಟಕ್ಕೆ ಅವರ ಜನ ಪ್ರತಿನಿಧಿತ್ವ ಸೀಮಿತವಾಯಿತು. ಹೀಗೆ ಸಿನೆಮಾದ ರೆಬೆಲ್, ರಾಜಕಾರಣದಲ್ಲಿ ವ್ಯವಸ್ಥೆಯ ಕೈಗೊಂಬೆಯಾದರು.

ತಮಿಳು ರಾಜಕಾರಣದಲ್ಲಿ ಸಿನೆಮಾ

ರಾಜಕಾರಣ ಮತ್ತು ಸಿನೆಮಾ ಎಂದಾಗ ತಮಿಳುನಾಡೇ ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಐವತ್ತು ವರ್ಷದ ಹಿಂದೆ ಮೊದಲ ಕಾಂಗ್ರೆಸ್ಸೇತರ ಸರ್ಕಾರ ಗೆದ್ದ ಸಂದರ್ಭದಿಂದಲೂ ಸಿನೆಮಾ ತನ್ನ ಪ್ರಭಾವ ಬೀರಿದೆ. ನಂತರ ಕರುಣಾ ನಿಧಿಯವರ ಗೆಲುವುಗಳಲ್ಲೂ ಅವರ ಸಿನೆಮಾ ಸಂಭಾಷಣೆಗಳ ಪಾತ್ರ ಪ್ರಮುಖವಾಗಿದೆ. ಆದ್ದರಿಂದಲೇ ಅವರು ಮುಖ್ಯಮಂತ್ರಿಯಾದ ನಂತರವೂ ಸಿನೆಮಾಗಳಿಗೆ ಕತೆ, ಸಂಭಾಷಣೆ ಬರೆಯುವುದನ್ನು ಪೂರ್ತಿ ಬಿಟ್ಟಿರಲಿಲ್ಲ.

ಇನ್ನು ಎಂ.ಜಿ.ಆರ್.ರವರ ಗೆಲುವು ಸಿನೆಮಾದ ನೇರ ಪಾತ್ರವನ್ನು ಎತ್ತಿ ತೋರಿಸಿತು. ಆದರೆ ಎಂಜಿಆರ್‌ರವರ ಗೆಲುವೂ ಸೇರಿ ತಮಿಳುನಾಡಿನ ರಾಜಕಾರಣದಲ್ಲಿ ಸಿನೆಮಾ ರಂಗದ ಪಾತ್ರ ಕೇವಲ ಸಿನೆಮಾಗಳಿಗೆ ಸೀಮಿತವಾಗಿರಲಿಲ್ಲ. ಅದು ದ್ರಾವಿಡ ಸೈದ್ಧಾಂತಿಕ ರಾಜಕೀಯದ ಜೊತೆ ಹೆಣೆದುಕೊಂಡಿತ್ತು. ಒಂದು ಕಡೆ ಅಣ್ಣಾ ದೊರೈರವರ 'ರೂಪಾಯಿಕಿ ಪಡಿಯರಿಸಿ' (ರೂಪಾಯಿಗೆ ಒಂದೂವರೆ ಸೇರು ಅಕ್ಕಿ) ಎಂಬ ಘೋಷಣೆಯ ಜೊತೆಗೆ ರಾಜ್ಯಗಳ ಸ್ವಾಯತ್ತತೆ, ಹಿಂದಿ ವಿರೋಧಗಳಂತಹ ವಿಚಾರಗಳು ಕರುಣಾನಿಧಿಯವರ ಚಿತ್ರ ಕತೆ, ಸಂಭಾಷಣೆಗಳ ತಿರುಳೂ ಆಗಿದ್ದವು. ಎಂ.ಜಿ.ಆರ್ ಈ ಸಂಭಾಷಣೆಗಳಿಗಾಗಿಯೇ ಪ್ರಸಿದ್ಧರು. ಇವು ಹುಸಿ ರೆಬೆಲ್ ಮನೋಭಾವಕ್ಕಿಂತ ಜನಜೀವನದ ಜೊತೆ ಹೆಚ್ಚು ಸಂಬಂಧ ಹೊಂದಿದ್ದವು. ಎಂಜಿಆರ್ ನಟರಾಗಿ ಪ್ರಸಿದ್ಧರಾದ ನಂತರ ರಾಜಕಾರಣವನ್ನು ಪ್ರವೇಶಿಸಿದವರಲ್ಲ. ಡಿ.ಎಂ.ಕೆ.ಯ ದೂರದ ಅಭಿಮಾನಿ ಮಾತ್ರ ಆಗಿರಲಿಲ್ಲ. ಅದರ ಮಂಚೂಣಿ ನಾಯಕರಲ್ಲೊಬ್ಬರಾಗಿದ್ದರು. ಜಯಲಲಿತಾ ಈ ಸಿದ್ಧಾಂತಕ್ಕೆ ಬದ್ಧತೆ ತೋರದಿದ್ದರೂ ಎ.ಐ.ಡಿ.ಎಂ.ಕೆ.ಯಲ್ಲಿ ನಾಯಕ ಸ್ಥಾನದಲ್ಲಿದ್ದರು.

ಆಂಧ್ರದಲ್ಲಿ ಎನ್‌ಟಿಆರ್‌ರವರೂ ಈ ಪ್ರಮಾಣದಲ್ಲಿ ರಾಜಕೀಯದಲ್ಲಿ ಒಡನಾಡಿಲ್ಲದಿದ್ದರೂ ರಾಜಕೀಯಕ್ಕೆ ಅವರ ರಂಗ ಪ್ರವೇಶ ರಾಜಕೀಯದ್ದೇ ಆದ ಒಂದು ಡ್ರಾಮಾಟಿಕ್ ಸನ್ನಿವೇಶದಲ್ಲಿ. ಭಾರತದ ಎಲ್ಲ ರಾಜ್ಯಗಳ ಜನತೆಗೂ ಪ್ರಸ್ತುತವಾದ, ಭಾಷೆ, ಭಾಷಾವಾರು ರಾಜ್ಯಗಳ ಹಕ್ಕಿನ ಪ್ರಶ್ನೆಯ ಮೇಲೆ, 'ತೆಲುಗು ಗೌರವಂ' ಎಂಬ ರೂಪದಲ್ಲಿ.

ಆದರೆ ಅಂಬರೀಶ್‌ರವರಿಗೆ ಈ ಯಾವ ಅರಿವೂ ಇರಲಿಲ್ಲ. ಅಂತಹ ತಿಳಿವನ್ನು ಪಡೆಯುವ ಸಣ್ಣ ಪ್ರಯತ್ನವನ್ನೂ ಮಾಡಲಿಲ್ಲ. ರಾಜ್ಯದಲ್ಲಿ ಅಂತಹುದೊಂದು ಪರಿಸರವೂ ಅವರಿಗೆ ದಕ್ಕಲಿಲ್ಲ. ಕರ್ನಾಟಕದಲ್ಲಿ ಜನಮರುಳು ಸಿನೆಮಾ ಮತ್ತು ಆಳುವ ವರ್ಗದ ರಾಜಕಾರಣದ ಅವಳಿ ಭ್ರಮೆಗಳನ್ನು ಜೋಡಿಸುವ ನಿಟ್ಟಿನಲ್ಲಿ ಹೆಚ್ಚಿನ ಸಾಧ್ಯತೆಯಿದ್ದ ಅಂಬರೀಶ್ ಅವರ ವೈಫಲ್ಯ, ಮತ್ತು ಅಂತಹ ಸಾಧ್ಯತೆ ಮುಂದೆಯೂ ಕಡಿಮೆಯೇ ಎನ್ನುವುದು, ನೈಜ ಜನಪರ ರಾಜಕಾರಣ ಮತ್ತು ಪ್ರಜಾಪ್ರಭುತ್ವದ ದೃಷ್ಟಿಯಿಂದ ಸಕಾರಾತ್ಮಕವಾದದ್ದೇ. ಅಂತಹ ಅವಳಿ ಭ್ರಮೆಗಳ ಜೋಡಣೆಯನ್ನು ಒಡೆಯುವ ಕೆಲಸ ಇನ್ನೂ ಹೆಚ್ಚಿನ ಸವಾಲಿನದ್ದು.

ಸಿನೆಮಾ, ರಾಜಕಾರಣ, ಟಿವಿಗಳ ತ್ರಿಕೋನದ ಅನೈತಿಕತೆ

ಜನರು ತಮ್ಮ ಬದುಕಿನಲ್ಲಿ ದಿನನಿತ್ಯ ಎದುರಿಸುವ ಸಂಕಟಗಳಿಗೆ ಸಿನೆಮಾ ತೆರೆಯ ಮೇಲೆ ಒಂದು ಭ್ರಮಾತ್ಮಕ ಪರಿಹಾರ ಒದಗಿಸುತ್ತದೆ. ತಮ್ಮ ಸಮಸ್ಯೆಗಳಿಗೆ ಕಾರಣವಾದ ರಾಜಕಾರಣಿಗಳು, ಅಧಿಕಾರಿಗಳ ದುರಾಡಳಿತವನ್ನು ಎದುರಿಸುವ ಹುಸಿ ತೃಪ್ತಿಯನ್ನು ತರುತ್ತದೆ.

ರಾಜಕಾರಣ ಜನರ ಸಮಸ್ಯೆಗಳಿಗೆ ಒಂದು ಹುಸಿ ಪರಿಹಾರದ ಘೋಷಣೆ ನೀಡುತ್ತವೆ, ಮೂಗಿಗೆ ತುಪ್ಪ ಸವರುವ ಪರಿಹಾರ ನೀಡಿ ನೈಜ ಪರಿಹಾರವನ್ನು ನೀಡುವುದರಿಂದ ತಪ್ಪಿಸಿಕೊಳ್ಳುತ್ತವೆ. ಈ ಮೂಲಕ ವಾಸ್ತವ ಬದುಕಿನಲ್ಲಿಯೇ ಭ್ರಮೆಯನ್ನು ಸೃಷ್ಟಿಸುತ್ತವೆ.

ಈ ಎರಡೂ ಭ್ರಮೆಗಳು ಭಿನ್ನವಾದರೂ ಕೂಡಾ ಮಾನಸಿಕ ಪ್ರಪಂಚದಲ್ಲಿ ಹೆಣೆದುಕೊಳ್ಳುತ್ತವೆ. ಅರೆ ಬರೆ ಶಿಕ್ಷಣ ನೀಡಿ ಪ್ರೈಮರಿ ಶಾಲೆ, ಪ್ರೌಢಶಾಲೆಗಳಲ್ಲಿಯೇ ವಿದ್ಯಾಭ್ಯಾಸವನ್ನು ಅರ್ಧದಲ್ಲಿ ತೊರೆಯುವಂತೆ ಮಾಡಿ ಬಹು ಸಂಖ್ಯಾತರಿಗೆ ತಮ್ಮ ಸಂಕಟಗಳ ಕಾರ್ಯ–ಕಾರಣ ಸಂಬಂಧವನ್ನು ಅನ್ವೇಷಿಸುವ ಸಾಮರ್ಥ್ಯವನ್ನು ವಂಚನೆ ಮಾಡುತ್ತದೆ, ನಮ್ಮ ವ್ಯವಸ್ಥೆ.

ಈ ಜನ ಸಮುದಾಯದ ಮೇಲೆ ಆರ್ಥಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕ ಬಡತನವನ್ನೂ ಹೇರಲಾಗಿದೆ . ಒಳ್ಳೆಯ ಸಾಹಿತ್ಯ, ನಾಟಕ ಸಾಂಸ್ಕೃತಿಕ ಕೃತಿಗಳನ್ನು ಅನುಭವಿಸುವ ಅವಕಾಶ ವಂಚನೆಯಾಗಿದೆ. ಜಾನಪದವನ್ನಂತೂ ವಿನಾಶಗೊಳಿಸಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಆಯ್ಕೆಯಿಲ್ಲದೆ ಸಿನೆಮಾ ಒಂದೇ ಅವರ ಮನರಂಜನೆಗಿರುವ ದಾರಿಯನ್ನಾಗಿ ಹೇರಲಾಗಿದೆ.

ಈ ಪರಿಸ್ಥಿತಿ ಆಳುವ ವರ್ಗದ ಭ್ರಷ್ಟ ರಾಜಕಾರಣಕ್ಕೆ ಹೇಳಿ ಮಾಡಿಸಿದಂತಿದೆ. ಇಂತಹ ಪರಿಸರದಲ್ಲಿ ಕಾರ್ಪೋರೇಟ್ ಹಿಡಿತದ ಟಿವಿ ಪ್ರವೇಶ ತೆಗೆದುಕೊಂಡಿದೆ. ರಾಜಕಾರಣಿಗಳು, ಸಿನೆಮಾಗಳ ಬಗ್ಗೆ ವೈಭವೀಕರಣ, ಒಕ್ಕಣ್ಣ ವಿವರಣೆ, ನೈಜ ಸಮಸ್ಯೆಗಳ ಪ್ರಸಾರ ಮಾಡದೆ ವಂಚನೆ ಇವುಗಳ ಮೂಲಕ ರಾಜಕಾರಣ ಮತ್ತು ಸಿನೆಮಾಗಳ ಮೂಲಕ ಬಿತ್ತಲಾಗುತ್ತಿರುವ ಭ್ರಮೆ, ಅವೈಚಾರಿಕತೆಯನ್ನು ಬೆಳೆಸುವ ಕುಕೃತ್ಯ ಎಸಗುತ್ತಿವೆ. ಮಾತ್ರವಲ್ಲ, ಮನರಂಜನಾ ಚಾನೆಲ್‌ಗಳ ಸಿನೆಮಾ ಪುನರ್‌ಪ್ರಸಾರ ಮತ್ತು ಅವಾಸ್ತವಿಕ ಮತ್ತು ಅವೈಚಾರಿಕ ಧಾರಾವಾಹಿಗಳ ಮೂಲಕ ತಾವೇ ಭ್ರಮೆ ಮತ್ತು ಅವೈಚಾರಿಕತೆಯನ್ನು ಬಿತ್ತುವ ಪ್ರಧಾನ ವಾಹಕಗಳಾಗುತ್ತಿವೆ.

ಈ ಸಾಂಸ್ಕೃತಿಕ, ರಾಜಕೀಯ ಪರಿಸರದ ಪರಿಣಾಮವನ್ನು ನಿವಾರಿಸುವ ಸವಾಲು, ನೈಜ ಜನಪರ ಪ್ರಜಾಪ್ರಭುತ್ವ ರಾಜಕಾರಣಕ್ಕಾಗಿ ಮತ್ತು ಸಾಮಾಜಿಕ ಬದಲಾವಣೆಗಾಗಿ ದುಡಿಯುತ್ತಿರುವ ಚಳುವಳಿಗಳ ಮೇಲಿದೆ. ●

ನೋಟುರದ್ಧತಿ ಶಾಪವಾಯಿತೇ ಅಥವ ವರವೇ?
–ಅಚ್ಛೇ ದಿನ್ ಕೃಷಿ ಇಲಾಖೆಯ 'ಗೊಂದಲ' ಮತ್ತು ತಿಪ್ಪರಲಾಗ

ನವಂಬರ್ 20 ರಂದು ಮಧ್ಯಪ್ರದೇಶದ ಝುಬುವಾದಲ್ಲಿ ಪ್ರಧಾನ ಮಂತ್ರಿಗಳು ತಮ್ಮ ನವಂಬರ್ 2016ರ ನೋಟು ರದ್ದತಿಯ 'ಕಹಿ ಔಷಧಿ'ಯ ಸಾಧನೆಗಳ ಬಗ್ಗೆ ಹೇಳುತ್ತಿದ್ದಾಗಲೇ ಈ ನೋಟುರದ್ಧತಿ ದೇಶದ ಕೋಟ್ಯಂತರ ರೈತರನ್ನು ಬಹಳಷ್ಟು ಬಾಧಿಸಿತ್ತು, ಇದ್ದಕ್ಕಿದ್ದಂತೆ ಉಂಟಾದ ನಗದಿನ ತೀವ್ರ ಅಭಾವದಿಂದಾಗಿ ರೈತರು ಆ ವರ್ಷದ ಹಿಂಗಾರಿನಲ್ಲಿ ಬೀಜಗಳನ್ನು ಮತ್ತು ಗೊಬ್ಬರಗಳನ್ನು ಖರೀದಿಸಲಾಗಲಿಲ್ಲ ಎಂದು ಅದೇ ಪ್ರಧಾನ ಮಂತ್ರಿಗಳ ಸರಕಾರದ ಕೃಷಿ ಇಲಾಖೆ ಸಂಸತ್ತಿನ ಹಣಕಾಸು ಸ್ಥಾಯಿ ಸಮಿತಿಯ ಮುಂದೆ ಸಲ್ಲಿಸಿದ್ದ ಟಿಪ್ಪಣಿಯೊಂದು ಒಪ್ಪಿಕೊಂಡಿತ್ತು(ದಿ ಹಿಂದು, ನವಂಬರ್ 21). ಇದನ್ನು ಕೇಳಿ ಕೊನೆಗೂ ಅಚ್ಛೇ ದಿನ್ ಮಂದಿ ಸತ್ಯವನ್ನು ಒಪ್ಪಿಕೊಳ್ಳಲಾರಂಭಿಸಿದ್ದಾರೆ ಎಂದು ಹಲವರು ಭಾವಿಸಿಕೊಳ್ಳಲಾರಂಭಿಸಿದ್ದರು. ಆದರೆ ಅದೀಗ ಸಂಪೂರ್ಣ ಹುಸಿಯಾಗಿದೆ.


ಕೃಷಿ ಮಂತ್ರಾಲಯ ಈಗ 180 ಡಿಗ್ರಿ ತಿರುಗಿ ಒಂದು 'ಪರಿಷ್ಕೃತ' ಟಿಪ್ಪಣಿಯನ್ನು ಸಲ್ಲಿಸಿದೆ, ವಾಸ್ತವವಾಗಿ ಪ್ರಧಾನ ಮಂತ್ರಿಗಳ ಈ 'ಶಾಕ್ ಟ್ರೀಟ್‌ಮೆಂಟ್' ಕೃಷಿ ವಲಯಕ್ಕೆ ಬಹಳ ಪ್ರಯೋಜನಕಾರಿಯಾಗಿದೆ, 2016ರ ಹಿಂಗಾರಿನಲ್ಲಿ ಬೀಜಗಳು ಮತ್ತು ಗೊಬ್ಬರದ ಮಾರಾಟ ಹೆಚ್ಚಿತು ಎಂದು ಅದೀಗ ಹೇಳಿದೆಯಂತೆ!

ಮಾಹಿತಿಯ ತಪ್ಪು ಸಂಕಲನದಿಂದಾಗಿ ಹಿಂದಿನ ತಮ್ಮ ಟಿಪ್ಪಣಿಯಲ್ಲಿ ಉಂಟಾದ ತಪ್ಪು ಈ ಎಲ್ಲ ಗೊಂದಲಗಳನ್ನು ಸೃಷ್ಟಿಸಿದೆ ಎಂದು ಇಲಾಖೆ ಹೇಳಿದರುವುದಾಗಿ ವರದಿಯಾಗಿದೆ (ಎನ್‌ಡಿಟಿವಿ, ನವಂಬರ್ 27). ಇದಕ್ಕೆ ಮೊದಲು ಬಹುಶಃ ಪ್ರಧಾನ ಮಂತ್ರಿಗಳ ಝುಬುವಾ ಹೇಳಿಕೆಯ ಹಿನ್ನೆಲೆಯಲ್ಲಿ ಅವರ ಕೃಷಿ ಮಂತ್ರಿಗಳು ತಮ್ಮ ಇಲಾಖೆಯ ಹೇಳಿಕೆಯನ್ನು ಕೆಲವು ಮಾಧ್ಯಮಗಳು ತಪ್ಪಾಗಿ ವರದಿ ಮಾಡಿವೆ ಎಂದಿದ್ದರು. ಆದರೆ ಈಗ ಅವರ ಇಲಾಖೆಯೇ ಮಾಹಿತಿಯ ತಪ್ಪು ಸಂಕಲನದಿಂದ ಉಂಟಾಗಿರುವ ಗೊಂದಲ ಇದು ಎಂದು ಹೇಳಿದೆ! ಈ ಮೊದಲು, ಆಗ ವಿದೇಶ ಪ್ರವಾಸಕ್ಕೆ ಹೊರಟಿದ್ದ ಕೃಷಿ ಇಲಾಖೆಯ ಮುಖ್ಯ ಅಧಿಕಾರಿಗಳ ಗಮನಕ್ಕೆ ಬಾರದೆ ಇದನ್ನು ಸಲ್ಲಿಸಲಾಗಿತ್ತು ಎಂದೂ ಹೇಳಲಾಗಿತ್ತು.

ನೋಟುರದ್ಧತಿಯ ಸಮರ್ಥನೆಗೆ ಕೊಟ್ಟ ಕಾರಣಗಳ ಸರಣಿಯಂತೆ, ಇಲ್ಲೂ ಗೊಂದಲಗಳ ಸರಣಿ! ಈ ಗೊಂದಲಗಳ ನಡುವೆ ಸತ್ಯವನ್ನು ಎಲ್ಲಿ ಹುಡುಕುವುದು ಎಂದು ತಡಕಾಡುತ್ತಿರುವವರಿಗೆ ಉತ್ತರದ ಒಂದು ಎಳೆ ಇದೇ ಸಂದರ್ಭದಲ್ಲಿ ಸಿಕ್ಕಿದೆ, ಅದೂ ಇದೇ ಸರಕಾರದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರರಿಂದ! ನೋಟುರದ್ಧತಿ ಒಂದು 'ಬೃಹತ್, ಕರಾಳ ಹಣಕಾಸು ಆಘಾತ' ಎಂದು ಅವರು ತಮ್ಮ ಮುಂಬರುವ ಪುಸ್ತಕ "ಆಫ್ ಕೌನ್ಸೆಲ್: ಚಾಲೆಂಜಸ್ ಆಫ್ ಮೋದಿ–ಜೇಟ್ಲಿ ಇಕಾನಮಿ"(ಸಲಹೆಯಲ್ಲಿ: ಮೋದಿ–ಜೇಟ್ಲಿ ಆರ್ಥಿಕದ ಸವಾಲುಗಳು) ಹೇಳಿರುವುದಾಗಿ ಇದೇ ದಿನ ವರದಿಯಾಗಿದೆ. ಈ ವರ್ಷ ಜೂನ್‌ನಲ್ಲಷ್ಟೇ ರಾಜೀನಾಮೆ ನೀಡಿದ ಇವರ ಸಲಹೆಯನ್ನು ನೋಟುರದ್ದತಿಯ ನಿರ್ಧಾರದ ಮೊದಲು ಕೇಳಲಾಗಿತ್ತೇ ಎಂಬ ಬಗ್ಗೆ ಅವರು ಏನೂ ಹೇಳಿಲ್ಲೆಂದೂ ವರದಿಯಾಗಿದೆ.

ಆದರೆ ಈ 'ಕಹಿ ಔಷಧಿ'ಯುನ್ನು ಜನಸಾಮಾನ್ಯರಿಗೆ ಕುಡಿಸಬೇಕಾಗಿರಲಿಲ್ಲ ಎಂದು ಅಭಿಪ್ರಾಯ ಪಡುವ ಅವರು, ಭ್ರಷ್ಟ ಶ್ರೀಮಂತರ ವಿರೋಧಿಯೆಂದು ತೋರಿಸಿ ಕೊಳ್ಳಲು ಜನಸಾಮಾನ್ಯರಿಗೆ ಕಹಿಯಾಗಲಾರದ ಬೇರೆ ದಾರಿಗಳೂ ಇದ್ದವು, ತೆರಿಗೆ, ಸ್ವಾಧೀನ, ರೇಡ್‌ಗಳು ಇತ್ಯಾದಿ ಎನ್ನುತ್ತಾರೆ. ಆದರೆ ಈ ದಾರಿಗಳನ್ನು ಉದ್ದೇಶಪೂರ್ವಕವಾಗಿಯೇ ಬಳಸಲಿಲ್ಲ, ಏಕೆಂದರೆ ಭ್ರಷ್ಟಾಚಾರದ ವಿರುದ್ಧ ಕ್ರಮಕೈಗೊಳ್ಳುವುದು ಈ ಕ್ರಮದ ಉದ್ದೇಶವೇ ಆಗಿರಲಿಲ್ಲ ಎಂಬುದು ಈಗ ಮಾಜಿ ಆರ್ಥಿಕ ಸಲಹೆಗಾರರಿಗೆ ಸ್ಪಷ್ಟವಾಗಿದೆಯೋ ಗೊತ್ತಿಲ್ಲ; ಪ್ರಜಾಪ್ರಭುತ್ವವಾದಿಗಳೆಲ್ಲರಿಗಂತೂ ಸ್ಪಷ್ಟವಾಗಿದೆ. ಇಂತಹ ದಾರಿಗಳನ್ನು ನವ–ಉದಾರವಾದವನ್ನು ಅಪ್ಪಿಕೊಂಡವರು ಏಂದಾದರೂ ಬಳಸುತ್ತಾರೆಯೇ ಎಂಬ ಪ್ರಶ್ನೆಯೂ ಸಹಜವಾಗಿಯೇ ಏಳುತ್ತದೆ.

ಅದೇನೇ ಇರಲಿ, 'ಕನಿಷ್ಟ ಸರಕಾರ, ಗರಿಷ್ಟ ಆಳ್ವಿಕೆ' ಕೊಡುವ ಈ ಸರಕಾರದ ಮತ್ತೊಂದು ಆಶ್ವಾಸನೆ ಕೂಡ ಕೇವಲ ಜುಮ್ಲಾ ಎಂದು ಈಗಾಗಲೇ ಸ್ಪಷ್ಟವಾಗಿರುವಾಗ, ಅವರ ಕೃಷಿ ಇಲಾಖೆಯ ಯು–ಟರ್ನ್ ಆಶ್ಚರ್ಯವನ್ನೇನೂ ಉಂಟುಮಾಡಬೇಕಿಲ್ಲ.



ಚುನಾವಣೆಗಳು ಸಮೀಪಿಸುತ್ತಿರುವಂತೆ 'ಟಾಪ್ ಬ್ರಾಂಡ್' ಆದ ಅಚ್ಛೇ ದಿನ್ ಪಕ್ಷ

ಬ್ರಾಡ್‌ಕಾಸ್ಟ್ ಆಡಿಯಂಸ್ ರಿಸರ್ಚ್ ಕೌನ್ಸಿಲ್(ಬಿಎಆರ್‌ಸಿ) ಪ್ರತಿ ವಾರ ಟೆಲಿವಿಶನ್‌ಗಳಲ್ಲಿ ಜಾಹೀರಾತುಗಳ ಪ್ರಮಾಣದ ಆಧಾರದಲ್ಲಿ ಆ ವಾರದ ಅತಿ ದೊಡ್ಡ ಬ್ರಾಂಡ್‌ಗಳ ಪಟ್ಟಿಯನ್ನು ಪ್ರಕಟಿಸುತ್ತದೆ. ಸಹಜವಾಗಿ ಇವು ಮಾರಾಟದ ಬ್ರಾಂಡ್‌ಗಳದ್ದಾಗಿರುತ್ತದೆ. ಆದರೆ ನವಂಬರ್ 10–16 ರ 'ಟಾಪ್ 10 ಬ್ರಾಂಡ್'ಗಳಲ್ಲಿ ಮೊದಲ ಸ್ಥಾನದಲ್ಲಿರುವುದು ಒಂದು ರಾಜಕೀಯ ಪಕ್ಷ! ನಿಜ, ಜಾಹೀರಾತುಗಳಲ್ಲಿ ಮೊದಲ ಸ್ಥಾನ ಪಡೆಯಬೇಕಾದರೆ ಅದು ದೇಶದ ಆಳುವ ಪಕ್ಷವೇ ಆಗಿರಬೇಕು. ಬಿಜೆಪಿ ಒಟ್ಟು 22,099 ಬಾರಿ ಕಾಣಿಸಿಕೊಂಡಿದೆ. ಎರಡನೇ ಸ್ಥಾನದಲ್ಲಿರುವುದು ನೆಟ್‌ಫ್ಲಿಕ್ಸ್, ಫಿಲ್ಮ್, ವೀಡಿಯೋಗಳನ್ನು ಪ್ರಸಾರ ಮಾಡುವ ಅಮೆರಿಕಾದ ಮಾಧ್ಯಮ ಕಂಪನಿ. ಅದರ ಜಾಹಿರಾತು ಕಾಣಿಸಿಕೊಂಡಿರುವುದು 12951 ಬಾರಿ, ಅಂದರೆ ಸುಮಾರು ಅರ್ಧದಷ್ಟು. ನಂತರದ ಸ್ಥಾನ ಹೋಟೆಲ್ ಬುಕ್ಕಿಂಗ್ ಮಾಡಿಸುವ ತ್ರಿವಾಗೊದ್ದು(12795); ನಂತರ ಸಂತೂರ್ ಸ್ಯಾಂಡಲ್(11222), ಡೆಟ್ಟಲ್ ದ್ರವ ಸಾಬೂನು(9487).

ಅಂದರೆ ಫಿಲ್ಮ್ ತೋರಿಸುವ, ಹೊಟೇಲ್ ಬುಕ್ಕಿಂಗ್ ಮಾಡುವ, ಸೋಪು ತಯಾರಿಸುವ ಕಂಪನಿಗಳನ್ನು ಬ್ರಾಮಡ್ ಸ್ಪರ್ಧೆಯಲ್ಲಿ ಬಹಳಷ್ಟು ಹಿಂದಕ್ಕೆ ತಳ್ಳಿರುವುದು ಈಗ ನಮ್ಮ ಆಳುವ ಪಕ್ಷದ ಇನ್ನೊಂದು ಸಾಧನೆ!

ಇಷ್ಟಕ್ಕೆಲ್ಲ ಈ ರಾಜಕೀಯ ಪಕ್ಷಕ್ಕೆ ಎಲ್ಲಿಂದ ಹಣ ಬರುತ್ತದೆ ಎಂಬ ಪ್ರಶ್ನೆಯನ್ನು ಈಗ ಯಾರೂ ಕೇಳಬೇಕಾಗಿಲ್ಲ.

ಚುನಾವಣಾ ಟ್ರಸ್ಟ್‌ಗಳ ಹಣದಲ್ಲೂ ಇದರದ್ದೇ ಸಿಂಹಪಾಲು!

2017–18ರಲ್ಲಿ ಚುನಾವಣಾ ಟ್ರಸ್ಟ್‌ಗಳು ಕೊಟ್ಟಿರುವ ದೇಣಿಗೆಗಳಲ್ಲಿ 86.59% ಬಿಜೆಪಿಯ ಪಾಲಾಗಿದೆ ಎಂದು ಎಡಿಆರ್(ಅಸೋಸಿಯೇಶನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್– ಪ್ರಜಾಪ್ರಭುತ್ವ ಸುಧಾರಣೆಗಳ ಸಂಘ) ವಿಶ್ಲೇಷಣೆ ಹೇಳುತ್ತದೆ. ಬಿಜೆಪಿ ಒಟ್ಟು 167.8 ಕೋಟಿ ರೂ. ಪಡೆದಿದೆ. ನಂತರ ಸ್ಥಾನದಲ್ಲಿರುವ ಕಾಂಗ್ರೆಸ್, ಬಿಜು ಜನತಾ ದಳ ಮತ್ತು ನ್ಯಾಶನಲ್ ಕಾನ್ಫರೆನ್ಸ್ ಒಟ್ಟಾಗಿ ಪಡೆದಿರುವುದು 25.98 ಕೋಟಿ ರೂ. ಎಂದು ಅದು ಹೇಳಿದೆ. ಅತಿ ದೊಡ್ಡ ದಾನಿ ಭಾರ್ತಿ ಏರ್‌ಟೆಲ್. ಅದು 25 ಕೋಟಿ ರೂ.ಗಳನ್ನು ಚುನಾವಣಾ ಟರಸ್ಟ್‌ಗಳ ಮೂಲಕ ನೀಡಿದೆ.

ಈಗಾಗಲೇ ವರದಿಯಾಗಿರುವಂತೆ, ಅಚ್ಛೇ ದಿನ್‌ಗಳ ವಿಶಿಷ್ಟ ಆವಿಷ್ಕಾರವಾದ ಚುನಾವಣಾ ಬಾಂಡ್‌ಗಳ 871 ಕೋಟಿ ರೂ.ಗಳಲ್ಲೂ ಕನಿಷ್ಟ ಇದೇ ಪ್ರಮಾಣ ಇದ್ದರೆ ಅದರಲ್ಲಿ ಆಶ್ಚರ್ಯ ಪಡುವಂತದ್ದೇನೂ ಇಲ್ಲ ತಾನೇ?

ಚುನಾವಣಾ ದೇಣಿಗೆಗಳಲ್ಲಿ ಕಪ್ಪು ಹಣದ ಹಾವಳಿ ತಡೆಯಲು ಇದನ್ನು ತರಲಾಗಿದೆ ಎಂದು ಅಚ್ಛೇದಿನ್ ಆಳರಸರು ಹೇಳುತ್ತಿದ್ದಾರೆ. ಆದರೆ ಈಗಷ್ಟೇ ನಿವೃತ್ತರಾಗಿರುವ ಮುಖ್ಯ ಚುನಾವಣಾ ಆಯುಕ್ತರಿಗೂ ಈ ಬಗ್ಗೆ ಬಲವಾದ ಸಂದೇಹಗಳಿವೆ. ರಾಜಕೀಯ ಪಕ್ಷಗಳ ಚುನಾವಣಾ ಖರ್ಚಿನ ಮೇಲೆ ಮಿತಿಗಳಿಲ್ಲ, ಚುನಾವಣಾ ಬಾಂಡ್ ನೀಡುವವರು ತಮ್ಮ ಗುರುತು ತಿಳಸಬೇಕಾಗಿಲ್ಲ, ಹೀಗಿರುವಾಗ ರಾಜಕೀಯ ಪಕ್ಷಗಳು ಈ ಮೂಲಕ ಪಡೆಯುವ ಹಣ ಕಪ್ಪು ಹಣ ಅಲ್ಲ ಎಂದು ಹೇಗೆ ಹೇಳಲು ಸಾಧ್ಯ ಎಂದು ಅವರು ಪ್ರಶ್ನಿಸಿದ್ದಾರೆ. ಚುನಾವಣಾ ಆಯೋಗ ಈ ಚುನಾವಣಾ ಬಾಂಡುಗಳ ಕುರಿತು ಈ ವರ್ಷದ ಆರಂಭದಲ್ಲೇ ಎತ್ತಿದ ಸಂದೇಹಗಳಿಗೆ ಸರಕಾರ ಸಮಾಧಾನ ನೀಡಿಲ್ಲ ಎಂದೂ ಅವರು ಹೇಳಿರುವುದಾಗಿ ವರದಿಯಾಗಿದೆ.

ಶೇರು ಮರು ಖರೀದಿ–ಸಾರ್ವಜನಿಕ ವಲಯದಿಂದ ಹಣ ಕೀಳುವ ಮತ್ತೊಂದು ಹೂಟ

ಕಳೆದ ವಾರ ಈ ಸರಕಾರ ಸಾರ್ವಜನಿಕ ರಾಷ್ಟ್ರೀಯ ಅಸ್ತಿಗಳನ್ನು ಮಾರಿ ತಿನ್ನುವುದರಲ್ಲಿ ಹೊಸ ದಾಖಲೆ ನಿರ್ಮಿಸಿರುವುದನ್ನು ನೋಡಿದ್ದೇವೆ. ರಾಷ್ಟ್ರೀಯ ಅಸ್ತಿಗಳಾದ ಲಾಭದಲ್ಲಿರುವ ಸಾರ್ವಜನಿಕ ವಲಯದ ಘಟಕಗಳಿಂದ ಹಣವನ್ನು ಸೆಳೆಯುವ ತನ್ನ ಪ್ರಯತ್ನಗಳನ್ನು ಈ ಸರಕಾರ ಮುಂದುವರೆಸುತ್ತಿರುವುದರ ಬಗ್ಗೆ ಪರಿಣಿತರು ಈಗ ಇನ್ನಷ್ಟು ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಅದಕ್ಕೆ ಅದು ಹಿಡಿದಿರುವ 'ನವೀನ' ದಾರಿಯೆಂದರೆ 'ಶೇರು ಮರು ಖರೀದಿ'. (ಪ್ರಣೇತ ಝಾ, ನ್ಯೂಸ್‌ಕ್ಲಿಕ್, ನವಂಬರ್ 27).

ಇತ್ತೀಚೆಗೆ ದೇಶದ ಎರಡನೇ ಅತಿ ದೊಡ್ಡ ತೈಲ ಕಂಪನಿ ಆಯಿಲ್ ಇಂಡಿಯ ಲಿಮಿಟೆಡ್(ಒಐಎಲ್) ಸರಕಾರದ ಬಳಿ ಇರುವ ಅದರ 5.04 ಕೊಟಿ ಇಕ್ವಿಟಿ ಶೇರುಗಳನ್ನು ಮರು ಖರೀದಿಸಿ 1085 ಕೋಟಿ ರೂ.. ತೆರುವಂತೆ ಸರಕಾರ ಒತ್ತಡ ಹಾಕಿದೆ ಎಂದು ವರದಿಯಾಗದೆ. ಇತರ ದೊಡ್ಡ ಸಾರ್ವಜನಿಕ ವಲಯದ ತೈಲ ಕಂಪನಿಗಳಾದ ಒಎನ್‌ಜಿಸಿ, ಐಒಸಿ ಮತ್ತು ಈ ಒಐಎಲ್ ಒಟ್ಟು 10,000 ಕೋಟಿ ರೂ. ಮೌಲ್ಯದ ಶೇರುಗಳನ್ನು ಮರು ಖರೀದಿ ಮಾಡುವಂತೆ ಒತ್ತಡ ಹಾಕಲಾಗುತ್ತಿದೆ ಎನ್ನಲಾಗಿದೆ.

ಇವೆಲ್ಲವೂ ಬಜೆಟಿನಲ್ಲಿ ಶೇರು ಹಿಂಪಡೆತದಿಂದ 80,000 ಕೋಟಿ ರೂ. ಗಳನ್ನು ಸಂಗ್ರಹಿಸಲಾಗುತ್ತದೆ ಎಂದು ನೀಡಿದ 'ಭರವಸೆ'ಯನ್ನು ಈಡೇರಿಸಲಿಕ್ಕೆ.

ಈಗಾಗಲೇ ಸ್ಪಷ್ಟವಾಗಿರುವಂತೆ ಈ ಸರಕಾರ ಕೇಂದ್ರೀಯ ಸಾರ್ವಜನಿಕ ವಲಯದ ಉದ್ದಿಮೆಗಳ ಮೇಲೆ ಬಹುಮುಖೀ ದಾಳಿ ಮಾಡುತ್ತಿದೆ. ಇದರಲ್ಲಿ ತಕ್ಷಣದ ಉದ್ದೇಶ ಎಂದರೆ ತನ್ನ ಬಜೆಟ್‌ಗೆ ಹಣ ಹೊಂದಿಸುವುದು. ಅದಕ್ಕಾಗಿ ಅವುಗಳ ಶೇರು ಮಾರಾಟ. ದೂರಗಾಮೀ ಉದ್ದೇಶ ಎಂದರೆ ಚೆನ್ನಾಗಿ ನಡೆಯುತ್ತಿರುವ, ಲಾಭಗಳಿಸುತ್ತಿರುವ ಈ ಉದ್ದಿಮೆಗಳನ್ನು ರೋಗಗ್ರಸ್ತಗೊಳಿಸಿ ಅವನ್ನು ತಮ್ಮ ಖಾಸಗಿ ಗೆಳೆಯರುಗಳಿಗೆ ಅಗ್ಗ ಬೆಲೆಗಳಲ್ಲಿ ಹಸ್ತಾಂತರಿಸುವುದು.


ಶೇರು ಹಿಂಪಡೆತದ ನಂತರ, ಶ್ರೀಮಂತರಿಂದ ತೆರಿಗೆ ಮತ್ತು ಇತರ ಸಂಪನ್ಮೂಲಗಳನ್ನು ವಸೂಲಿ ಮಾಡುವ ಬದಲು, ಅವರಿಗೆ ರಿಯಾಯ್ತಿಗಳನ್ನು ಕೊಡಮಾಡಲು ಸಾರ್ವಜನಿಕ ವಲಯದಿಂದ ಕಿತ್ತುಕೊಳ್ಳುವ ಒಂದು ವಿಧಾನವೆಂದರೆ 'ವಿಶೇಷ ಡಿವಿಡೆಂಡ್'ಗಳ ವಸೂಲಿ ಮತ್ತು ಇನ್ನೊಂದು ದಾರಿ 'ಶೇರು ಮರು ಖರೀದಿ'. ಈ ಉದ್ದಿಮೆಗಳು ಕೇಂದ್ರ ಸರಕಾರದ ಬಳಿಯಿರುವ ತಮ್ಮ ಶೇರುಗಳನ್ನು ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಬೆಲೆಗೆ ಖರೀದಿಸುವಂತೆ ಮಾಡಿ ಹಣ ವಸೂಲಿ ಮಾಡುವುದು.

ಈ ಸಪ್ಟಂಬರ್‌ನಲ್ಲಿ ಹಣಕಾಸು ಇಲಾಖೆ 'ಶೇರು ಮರು ಖರೀದಿ'ಗೆ 11 ಕೇಂದ್ರ ಸರಕಾರದ ಒಡೆತನದ ಉದ್ದಿಮೆಗಳ ಪಟ್ಟಿ ಮಾಡಿದೆಯಂತೆ. ಬಿಹೆಚ್‌ಇಎಲ್, ಕೊಚಿನ್ ಶಿಪ್‌ಯಾರ್ಡ್ ಮತ್ತು ನಾಲ್ಕೊ ಈಗಾಗಲೇ ಶೇರು ಮರು ಖರೀದಿಯನ್ನು ಪ್ರಕಟಿಸಿವೆಯಂತೆ.

ಇವೆಲ್ಲದರ ದುಷ್ಪರಿಣಾಮ ಎಂದರೆ ದೊಡ್ಡ ಸಾರ್ವಜನಿಕ ವಲಯದ ಉದ್ದಿಮೆಗಳ ನಗದು ಮೀಸಲು ಅತಿ ಕಡಿಮೆ ಮಟ್ಟಕ್ಕೆ ಇಳಿದಿದೆ ಎಂದು ಬಿಸಿನೆಸ್ ಸ್ಟಾಂಡಡ ವರದಿ ಹೇಳುತ್ತದೆ. 2017–18ಕ್ಕೆ ಹೋಲಿಸಿದರೆ ಈ ಹಣಕಾಸು ವರ್ಷದಲ್ಲಿ 14% ದಷ್ಟು ಇಳಿಕೆಯಾಗಿದೆ. ಈ ರೀತಿ ಎಂದಿನ ವರೆಗೆ ಕಿತುಕೊಳ್ಳಲು ಸಾಧ್ಯ?

ಸರಕಾರ ಇದು 'ಹಣಕಾಸು ಕ್ರೋಡೀಕರಣ' ಎನ್ನುತ್ತದೆ. ಸರಕಾರದ ಹಣಕಾಸು ಕೊರತೆ ಮಿತಿಮೀರದೆ ಇರಲು ಇದು ಅಗತ್ಯ ಎನ್ನುತ್ತದೆ. ಆದರೆ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಪ್ರಕಾರ ಇಂತಹ 'ಹಣಕಾಸು ಕ್ರೋಡೀಕರಣ' ಖಾಸಗಿ ಬಂಡವಳಿಗರಿಗಷ್ಟೇ ಪ್ರಯೋಜನಕಾರಿ, ದೇಶಕ್ಕೆ ಮತ್ತು ದೇಶದ ಜನತೆಗೆ ದೀರ್ಘಾವಧಿಯಲ್ಲಿ ವಿನಾಶಕಾರಿ. ಇದು ಈಗಾಲೇ ಅನುಭವಕ್ಕೆ ಬರುತ್ತಿದೆ.

ವಿದೇಶಾಂಗ ಮಂತ್ರಿ ಸುಷ್ಮಾ ಸ್ವರಾಜ್ 2019ರ ಚುನಾವಣೆಯಲ್ಲಿ ತಾನು ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದಾರೆ– ಸುದ್ದಿ




ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಎತ್ತರದ ಸ್ಪರ್ಧೆ:182–221–1000

ಅಯೋಧ್ಯೆಯಲ್ಲಿ ಸರಯೂ ನದಿ ತೀರದಲ್ಲಿ ಬೃಹತ್ ಶ್ರೀರಾಮ ಮೂರ್ತಿ ಸ್ಥಾಪಿಸುವುದಾಗಿ ಉತ್ತರಪ್ರದೇಶ ಸರಕಾರದ ಪ್ರಕಟಣೆ. ಇದರ ಎತ್ತರ ಇತ್ತೀಚೆಗೆ ದಾಖಲೆ ನಿರ್ಮಿಸಿದ ಐಕ್ಯತೆಯ ಮೂರ್ತಿಯ ಎತ್ತರವಾದ 182 ಮೀಟರನ್ನು ಮೀರಿಸುತ್ತದೆ, 221 ಮೀಟುರಗಳದ್ದಾಗಿರುತ್ತದೆ ಎಂದು ಹೇಳಲಾಗಿದೆ– ಸುದ್ದಿ 1

ಅಡುಗೆ ಅನಿಲದ ಮಾರುಕಟ್ಟೆ ಬೆಲೆ 1000ರೂ. ದಾಟುತ್ತಿದೆ– ಸುದ್ದಿ 2



ಬುದ್ಧಿಜೀವಿಗಳ ಹೆಸರುಗೆಡಿಸುವ ಒರಟು ಪ್ರಯತ್ನ ನವ-ಉದಾರವಾದಿ ವ್ಯವಸ್ಥೆಯೊಳಗಿನ ವ್ಯಂಗ್ಯ



ತಂಪಿನ-ಬೆಚ್ಚಗಿನ-ವಿಲಾಸಿ ಜೀವನ ನಡೆಸುತ್ತಿದ್ದಾರೆಂದು ಆರೋಪಿಸಿ, ಇವು "ಬೂರ್ಜ್ವಾ ಅವಗುಣಗಳು" ಎಂದು ಹಿಂದುತ್ವ ವಿಚಾರಗಳ ಬಗ್ಗೆ ಭಿನ್ನಮತ ಹೊಂದಿರುವ ಬುದ್ಧಿಜೀವಿಗಳನ್ನು ಹೀಯಾಳಿಸುವ ಕೃತ್ಯದಲ್ಲಿ ತೊಡಗಿರುವ ಸರ್ಕಾರವು, ವೇಗವಾಗಿ ಬೂರ್ಜ್ವಾ ಅಭಿವೃದ್ಧಿ ಉಂಟುಮಾಡಿರುವುದೇ ತನ್ನ ಹೆಗ್ಗಳಿಕೆ ಎಂದು ಹೇಳಿಕೊಳ್ಳುವುದೊಂದು ವ್ಯಂಗ್ಯವೇ. ಇಂತಹ ಅಭಿವೃದ್ಧಿ ಸಾಧಿಸಲು ನಮ್ಮ ಇಡೀ ಅರ್ಥವ್ಯವಸ್ಥೆಯ ಬಾಗಿಲನ್ನು ಅಂತಾರಾಷ್ಟ್ರೀಯ ಬಂಡವಾಳವು ಮೇಯಲು ಅನುಕೂಲವಾಗುವಂತೆ ತೆರೆದಿಟ್ಟಿರುವ ಈ ವ್ಯಂಗ್ಯವು ಸಮಕಾಲೀನ ನವ-ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ತರ್ಕದಲ್ಲೇ ಅಡಗಿದೆ.

ಪ್ರೊ. ಪ್ರಭಾತ್ ಪಟ್ನಾಯಕ್ – ಅನು: ಕೆ.ಎನ್.ನಾಗರಾಜ್

"ನಗರ ನಕ್ಸಲರು" ಹವಾ-ನಿಯಂತ್ರಿತ ಸೌಕರ್ಯದಲ್ಲಿ ಬದುಕುತ್ತಿದ್ದಾರೆ ಎಂಬ ಹೀಯಾಳಿಕೆಯ ಮಾತುಗಳನ್ನು ಮೊನ್ನೆ ಮೊನ್ನೆ ನರೇಂದ್ರ ಮೋದಿ ಹೇಳಿದ್ದಾರೆ. ಹಿಂದುತ್ವದ ನಿಲುವಿನ ಬಗ್ಗೆ ತಮ್ಮ ಬರವಣಿಗೆಯ ಮೂಲಕ ಅಥವಾ ಮಾತುಗಳ ಮೂಲಕ ಭಿನ್ನಮತ ವ್ಯಕ್ತಪಡಿಸುವ ಎಲ್ಲರನ್ನೂ, ಮತ್ತು ಸುಪರಿಚಿತ ಎಡ ಪಂಥ- ವಿರೋಧಿಗಳೂ ಸೇರಿದಂತೆ, ಭಿನ್ನಮತದ ಹಕ್ಕನ್ನು ಎತ್ತಿಹಿಡಿಯುವ ಎಲ್ಲರನ್ನು ಅಂದರೆ ಇಡೀ ವಿಚಾರವಂತ ಸಮುದಾಯವನ್ನೇ ಅವರ ಸರ್ಕಾರ "ನಗರ ನಕ್ಸಲರು" ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿರುವುದರಿಂದ, ಅವರು ಹೇಳಿರುವ ಮಾತುಗಳು ವಾಸ್ತವವಾಗಿ ಎಲ್ಲಾ ವಿಚಾರವಂತರ, ಬುದ್ಧಿಜೀವಿಗಳನ್ನು ಉದ್ದೇಶಿಸಿವೆ.

ಸರ್ಕಾರಕ್ಕೆ ರುಚಿಸದ ಬೌದ್ಧಿಕ ನಿಲುವು ಹೊಂದಿರುವ ಬುದ್ಧಿಜೀವಿಗಳನ್ನು ಅಪಹಾಸ್ಯ ಮಾಡುವ ಮೂಲಕ ಜನ ಅವರನ್ನು ಕೀಳಾಗಿ ನೋಡುವಂತೆ ಮಾಡುವ ಒರಟು ಪ್ರಯತ್ನ ಮೋದಿಯವರ ಮಾತುಗಳಲ್ಲಿದೆ. ಸುಖಸಾಧನಗಳು ಮತ್ತು ಸೌಕರ್ಯಗಳನ್ನು ಹೊಂದಿರುವ ಬುದ್ಧಿಜೀವಿಗಳು ಆರಾಮಾಗಿ ಬದುಕುತ್ತಿರುವುರಿಂದ ಜನ ಅವರ ಮಾತುಗಳನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು ಎಂಬ ಸೂಚನೆ ಅವರ ಮಾತಿನಲ್ಲಿದೆ. ಅಂದರೆ, ಸುಖಸಾಧನಗಳು/ ಸೌಕರ್ಯಗಳನ್ನು ಅವರು ಹೊಂದಿರುವ ಕಾರಣದಿಂದಾಗಿ ಜನರ ಸಮಸ್ಯೆಗಳ ಬಗ್ಗೆ ಅವರ ಕಾಳಜಿ ಮತ್ತು ಅಭಿಪ್ರಾಗಳೂ ತಪ್ಪಾಗಿವೆ ಎಂಬ ಸೂಚನೆಯೂ ಅವರ ಮಾತುಗಳಲ್ಲಿದೆ.

ನರೇಂದ್ರ ಮೋದಿ ಅವರ ಈ ಹೇಳಿಕೆ ಅಸಂಬದ್ಧವಾಗಿದೆ ಎಂಬುದಕ್ಕೆ ಕನಿಷ್ಟ ಎಂದರೂ ಮೂರು ಕಾರಣಗಳನ್ನು ಕೊಡಬಹುದು. ಮೊದಲನೆಯದಾಗಿ, "ನಗರ ನಕ್ಸಲ"ರೆಂದು ಒಂದೆರಡು ತಿಂಗಳ ಹಿಂದೆ ಬಂಧನಕ್ಕೊಳಗಾದವರಲ್ಲಿ ಹೆಚ್ಚಿನ ಮಂದಿ ನಾಗರಿಕ ಹಕ್ಕುಗಳ ಕಾರ್ಯಕರ್ತರು/ಕ್ರಿಯಾಶೀಲರು. ಇವರು, ಬುಡಕಟ್ಟು ಜನಾಂಗ ಮತ್ತು ಅಂಚಿನಲ್ಲಿರುವವರ ಹಕ್ಕುಗಳಿಗಾಗಿ ದುಡಿಯುತ್ತಿದ್ದು ಅವರ ಜೊತೆಯಲ್ಲೇ ಬದುಕುತ್ತಿದ್ದಾರೆ. ಅವರಿಗಾಗಿ ತಮ್ಮ ಸೌಕರ್ಯಗಳನ್ನು ತ್ಯಜಿಸಿ, ಅವರಂತೆಯೇ ಕಡು ಕಷ್ಟದ ಜೀವನ ನಡೆಸುವ ಇವರು ನಿಸ್ವಾರ್ಥಿಗಳು. ಸಾಮಾನ್ಯವಾಗಿ, ಇಂತದ್ದೇ ಕಷ್ಟದ ಜೀವನ ನಡೆಸುವ ಎಡಪಕ್ಷಗಳ ಕ್ರಿಯಾಶೀಲರೂ ಸೇರಿದಂತೆ ಪ್ರಾಮಾಣಿಕ ಕಾರ್ಯಕರ್ತರು ಮೋದಿಯವರು ಹೇಳುವ ಹವಾ-ನಿಯಂತ್ರಿತ ಸೌಕರ್ಯಗಳನ್ನು ತ್ಯಜಿಸಿ ಅವುಗಳಿಂದ ಗಾವುದ ದೂರದಲ್ಲಿದ್ದಾರೆ. ಎರಡನೆಯದಾಗಿ, ಸ್ವತಃ ಮೋದಿಯವರು, ಅವರ ಮಾಧ್ಯಮ ಮಿತ್ರರು ಮತ್ತು ಅವರ ದೊಡ್ಡ ಉದ್ದಿಮೆದಾರ ಮಿತ್ರರು, (ಇವರು ಹೇಳುವುದೆಲ್ಲಾ "ಸತ್ಯ"ವೆಂದು ಜನ ನಂಬಬೇಕು ಎಂದು ಮೋದಿಯವರು ಬಯಸುತ್ತಾರೆ) ಇವರಾರೂ ಬಡತನದಲ್ಲಿ ಬದುಕುತ್ತಿಲ್ಲ. ಇವರೆಲ್ಲರೂ ಅತಿ ಹೆಚ್ಚು ಆರಾಮಾಗಿಯೇ ಬದುಕುತ್ತಿದ್ದಾರೆ. ಒಬ್ಬ ಉದ್ದಿಮೆದಾರ ಮಿತ್ರರಂತೂ ರಾಜ ಮಹಾರಾಜರನ್ನೂ ಮೀರಿಸುವ ವೈಭವೋಪೇತ ಶೈಲಿಯ ಇಪ್ಪತ್ತೇಳು ಅಂತಸ್ತಿನ ಕಟ್ಟಡದಲ್ಲಿ ಜೀವಿಸುತ್ತಿದ್ದಾರೆ. ಮೂರನೆಯದಾಗಿ ಮತ್ತು ಔಚಿತ್ಯಪೂರ್ಣವಾಗಿ, ಒಬ್ಬ ಬುದ್ಧಿಜೀವಿಯ ನಿಲುವಿನ ಸಮಂಜಸತೆ ಅಥವಾ ಅಮಂಜಸತೆಯನ್ನು ಬೌದ್ಧಿಕವಾಗಿ ರುಜುವಾತುಪಡಿಸಬೇಕಾಗುತ್ತದೆ. ಆ ಕ್ರಮವನ್ನು ಬಿಟ್ಟು ಅವರ ಜೀವನ ಶೈಲಿಯ ಬಗ್ಗೆ ಪ್ರಸ್ತಾಪಿಸಿದಾಗ, ಅವರ ನಿಲುವಿನ ಸಮಂಜಸತೆಯನ್ನು ಬೌದ್ಧಿಕವಾಗಿ ಎದುರಿಸಲು ಸಾಧ್ಯವಿಲ್ಲ ಎಂಬುದು ರುಜುವಾತಾಗುತ್ತದೆ.

ಬುದ್ಧಿಜೀವಿಗಳು ತಳೆಯುವ ನಿಲುವುಗಳನ್ನು ಕಾರಣವಿಲ್ಲದೆ ವಿರೋಧಿಸುವುದನ್ನು/ನಿರಾಕರಿಸುವುದನ್ನು ಮತ್ತು ಅವರ ಜೀವನ ಶೈಲಿಯನ್ನು ಲೇವಡಿ ಮಾಡಿ ಜನ ಅವರನ್ನು ಕೀಳಾಗಿ ನೋಡುವಂತೆ ಮಾಡುವುದು, ಇವುಗಳನ್ನು ಅಭ್ಯಾಸ ಮಾಡಿಕೊಂಡಿರುವ ಬಲ-ಪಂಥೀಯ ಚಳುವಳಿಗಳು ಪ್ರಪಂಚದ ಎಲ್ಲೆಡೆ ಮೂಡುತ್ತಿವೆ. (ಕೆಲವೊಮ್ಮೆ ಇವುಗಳನ್ನು "ಜನಮರುಳು ಚಳುವಳಿ" ಎಂದು ಭಾವಿಸುವುದೂ ಉಂಟು). ಇಂತಹ ಬಲ-ಪಂಥೀಯ ಗುಂಪುಗಳು ತಮಗೆ ರುಚಿಸದ ಬೌದ್ಧಿಕ ನಿಲುವುಗಳನ್ನು ಬೌದ್ಧಿಕವಾಗಿ ಎದುರಿಸುವುದಿಲ್ಲ. ಬದಲಿಗೆ, ಅವುಗಳನ್ನು ಪ್ರತಿಪಾದಿಸುವ ಬುದ್ಧಿಜೀವಿಗಳ ಸಮೂಹವನ್ನು ನಾನಾ ರೀತಿಯಲ್ಲಿ ಪೀಡಿಸುತ್ತಾರೆ. ಬುದ್ಧಿಜೀವಿಗಳ ನಿಲುವುಗಳನ್ನು ಬೌದ್ಧಿಕವಾಗಿ ಎದುರಿಸುವ ಸಾಮರ್ಥ್ಯವುಳ್ಳ ಬಲ-ಪಂಥೀಯ ಒಲವಿನ ಬುದ್ಧಿಜೀವಿಗಳ ಸಂಖ್ಯೆ ಬಹಳ ಕಡಿಮೆ ಇದೆ. ಆದ್ದರಿಂದಲೇ, ಬುದ್ಧಿಜೀವಿಗಳ ಟೀಕೆಗಳನ್ನು ಅವರು ವಾದಗಳ ಮೂಲಕ ಎದುರಿಸುವುದರ ಬದಲಾಗಿ ಬುದ್ಧಿಜೀವಿಗಳನ್ನು ವ್ಯಕ್ತಿಗತವಾಗಿ ಮತ್ತು ಅವರ ಇಡೀ ಸಮೂಹವನ್ನು ಬಾಯಿಗೆ ಬಂದಂತೆ ಬೈಯ್ಯುತ್ತಾರೆ. ಬಲ-ಪಂಥೀಯ ನಿಲುವುಗಳನ್ನು ಒಪ್ಪದ ಬುದ್ಧಿಜೀವಿಗಳನ್ನು ಅವರು ಸಾಧ್ಯವಿರುವ ಎಲ್ಲ ರೀತಿಯಲ್ಲೂ ಪೀಡಿಸುತ್ತಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ವಿಚಾರಗಳನ್ನು ಅರಿಯುವ ಪ್ರಕ್ರಿಯೆಯನ್ನೇ ಅವರು ವಿರೋಧಿಸುತ್ತಾರೆ.

ಸಮರ್ಥ ಬುದ್ಧಿಜೀವಿಗಳು ಬಲ-ಪಂಥೀಯ ಗುಂಪುಗಳ ಬಳಿ ಏಕೆ ಇಲ್ಲ ಎಂಬುದು ಆಶ್ಚರ್ಯವಲ್ಲ. ಅರಿವು ಗಳಿಸಲು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಆದರೆ, ಮತಾಂಧತೆಗೆ ಬದ್ಧರಾಗಿರುವ ಬಲ-ಪಂಥೀಯ ಗುಂಪಿನ ಸದಸ್ಯರು ತಮ್ಮ "ನಾಯಕ" ಹೇಳಿದ್ದನ್ನು ಮರು ಮಾತಾಡದೆ ಪಾಲಿಸುವ ನಿಷ್ಠೆಯೇ ಈ ಗುಂಪುಗಳ ಒಂದು ವೈಶಿಷ್ಟ್ಯತೆ. ಅಂದರೆ, ಇಂತಹ ಗುಂಪಿನ ಸದಸ್ಯರು ಪ್ರಶ್ನೆಗಳನ್ನು ಕೇಳುವುದೇ ಇಲ್ಲ ಎಂಬುದು ಈ ಮಾತಿನ ಅರ್ಥವಲ್ಲ. ಅವರಲ್ಲಿ ಅನೇಕರು ಪ್ರಶ್ನೆ ಕೇಳುವುದಿಲ್ಲ, ನಿಜ. ಕೆಲವರು ಖಂಡಿತ ಕೇಳುತ್ತಾರೆ. ಆದರೆ, ಪ್ರಶ್ನೆ ಕೇಳಿದವರು ಆ ವಿಷಯವನ್ನು ಹುಷಾರಾಗಿ ಮರೆಮಾಚುತ್ತಾರೆ, ಹೆದರಿಕೆಯಿಂದ ಅಥವಾ ಸಂದರ್ಭಸಾಧಕತನದಿಂದ ಅಥವಾ ತಮ್ಮ ಸ್ವಾರ್ಥಸಾಧನೆಯ ಉದ್ದೇಶದಿಂದ.

ಇಂತಹ ಗುಂಪುಗಳ ಬೌದ್ಧಿಕ ಚಟುವಟಿಕೆಗಳು, ಮೇಲಿನವರು ಬಿತ್ತಿದ ಕೆಲವು ವಿಚಾರಗಳನ್ನು ಮೊದಲಿಗೆ ತಮ್ಮ ಗುಂಪಿನೊಳಗೆ ಹರಡಿ, ನಂತರ, ಬೇರೆಯವರಿಗೆ ಹರಡುವಲ್ಲಿ ಪರ್ಯವಸಾನಗೊಳ್ಳುತ್ತವೆ. ಅದಲ್ಲದೆ, ಈ ಗುಂಪುಗಳು ಸ್ವತಂತ್ರವಾಗಿ ಬೇರೆ ವಿಚಾರ ಅಥವಾ ಸಮಸ್ಯೆಗಳಲ್ಲಿ ತೊಡಗುವುದಿಲ್ಲ.

ಒಂದು ಬಲಪಂಥೀಯ ಚಳುವಳಿ ಇದ್ದಕ್ಕಿಂತೆಯೇ ಮೇಲೆದ್ದು ಬೇಗ ಬೇಗ ಪ್ರಾಮುಖ್ಯತೆ ಗಳಿಸಿ, ಪ್ರಸಿದ್ಧ ಬುದ್ಧಿಜೀವಿಗಳ ಬೆಂಬಲ ಪಡೆದು ತನಗೂ ಒಂದು ಬೌದ್ಧಿಕ ವಂಶಾವಳಿ ಇದೆ ಎಂದು ಹೇಳಿಕೊಳ್ಳಬಹುದು. ಅಂತಹ ಪರಿಸ್ಥಿತಿಯುಲ್ಲಿ, ಅನುಕೂಲಕ್ಕಾಗಿ ಅದು ಕೆಲವು ಬುದ್ಧಿಜೀವಿಗಳ ಜೊತೆ ಕೂಡಿಕೆ ಮಾಡಿಕೊಳ್ಳುತ್ತದೆ ಮತ್ತು ಅಂತಹ ಚಳುವಳಿಯ ಒಳಗಡೆ ಬೌದ್ಧಿಕ ಚಟುವಟಿಕೆಗಳು ಇರುವುದಿಲ್ಲ. ಇನ್ನೊಂದು ಕಡೆಯಲ್ಲಿ, ಹಳೆಯ ಮತ್ತು ಸ್ಥಿರವಾಗಿ ನೆಲೆಗೊಂಡ ಹಿಂದುತ್ವದ ರೀತಿಯ ಚಳುವಳಿಗಳಲ್ಲಿ ಅನುಕೂಲಕ್ಕಾಗಿಯೂ ಬುದ್ಧಿಜೀವಿಗಳ ಜೊತೆ ಕೂಡಿಕೆ ಮಾಡಿಕೊಳ್ಳಲು ಆಸ್ಪದವಿಲ್ಲ. ಏಕೆಂದರೆ, ವಿಚಾರಗಳು ಸಂಸ್ಥಾಪಕನಿಂದ ನಾಯಕರ ಮೂಲಕ ಕೆಳಗೆ ಹರಿಯುತ್ತವೆ. ಆದ್ದರಿಂದ, ಎರವಲು ಪಡೆದ ಬೌದ್ಧಿಕ ವಂಶಾವಳಿ ಅಪಾಯಕಾರಿಯಾಗುತ್ತದೆ. ಏಕೆಂದರೆ, ಅನುಕೂಲಕ್ಕಾಗಿ ಎರವಲು ಪಡೆದ ಬುದ್ಧಿಜೀವಿಗಳ ವಿಚಾರಗಳಿಗೂ ಮತ್ತು ಸಂಸ್ಥಾಪಕನಿಂದ ನಾಯಕರ ಮೂಲಕ ಕೆಳಗೆ ಹರಿದ ವಿಚಾರಗಳಿಗೂ ತಾಳ ಮೇಳವಿಲ್ಲದಂತಾಗಿ ಸ್ವಯಂ ಸೇವಕರಲ್ಲಿ ಗೊಂದಲ ಉಂಟಾಗುತ್ತದೆ.

ಹಾಗಾಗಿ, **ಇಂತಹ ಚಳುವಳಿಗಳು ಸಾರಭೂತವಾಗಿ ಮತ್ತು ಸಹಜವಾಗಿ ಬೌದ್ಧಿಕತೆಯ ವಿರೋಧಿಗಳಾಗಿರುತ್ತವೆ. ಇವು, ಕೇವಲ ಎಡಪಂಥ-ವಿರೋಧಿಗಳಷ್ಟೇ ಅಲ್ಲ, ಯಾವುದೇ ರೀತಿಯ ಸ್ವತಂತ್ರ ಬುದ್ಧಿಗ್ರಹಿಕೆಗೆ ವಿರೋಧಿಯಾಗಿವೆ.** ಈ ಕಾರಣದಿಂದಾಗಿಯೇ ಅವು ಶಿಕ್ಷಣ ವಿರೋಧಿಗಳೂ ಆಗುತ್ತವೆ. ಏಕೆಂದರೆ, ಜ್ಞಾನದ ಅನ್ವೇಷಣೆಯಲ್ಲಿ ಶಿಕ್ಷಣ ಮತ್ತು ಶಿಕ್ಷಣ ಪಡೆಯುವಲ್ಲಿ ಬುದ್ಧಿಗ್ರಹಿಕೆ ಮುಖ್ಯವಾಗುತ್ತವೆ.

ಎಡ ಮತ್ತು ಬಲ ಪಂಥಗಳ ನಡುವೆ ಮೂಲಭೂತವಾದ ಒಂದು ವ್ಯತ್ಯಾಸವಿದೆ. ಎಡ ಪಂಥವು, ಸಾಮಾನ್ಯವಾಗಿ, ಜ್ಞಾನದ ಅನ್ವೇಷಣೆಯ ವಿಚಾರಗಳನ್ನು ಬೆಂಬಲಿಸುತ್ತದೆ. ಜ್ಞಾನಾರ್ಜನೆಯ ವಾತಾವರಣದಲ್ಲಿ ಪ್ರಗತಿಪರ ವಿಚಾರಗಳು ತಮ್ಮ ಬೌದ್ಧಿಕ ಶ್ರೇಷ್ಠತೆಯ ಕಾರಣದಿಂದ ಬೇಗ ಪ್ರಖರಗೊಳ್ಳುತ್ತವೆ ಎಂಬ ವಿಶ್ವಾಸದಿಂದ ಎಡ ಪಂಥೀಯರು ಹೊಸ ವಿಚಾರಗಳನ್ನು ಬೆಂಬಲಿಸುವುದರಲ್ಲಿ ಅನುಮಾನವೂ ಇಲ್ಲ, ಆಶ್ಚರ್ಯವೂ ಇಲ್ಲ. ಆದರೆ ಈ ಅಂಶ ಇಲ್ಲಿ ಮುಖ್ಯವಲ್ಲ. ಹೊಸ ವಿಚಾರಗಳನ್ನು ಅವರು ಬೆಂಬಲಿಸುತ್ತಾರೆ ಎಂಬುದೇ ಇಲ್ಲಿ ಮುಖ್ಯವಾದ ಅಂಶ. ಉದಾಹರಣೆಗೆ, ಎಡಪಂಥದ ಅನೇಕ ಕ್ರಿಯಾಶೀಲ ವ್ಯಕ್ತಿಗಳು ಶಾಲಾ ಕಾಲೇಜುಗಳನ್ನು ಸ್ಥಾಪಿಸಲು ಸಹಾಯ ಮಾಡಿದ್ದಾರೆ, ಎಡ ವಿಚಾರಧಾರೆಯನ್ನು ಪ್ರಚಾರ ಮಾಡುವ ಸಂಕುಚಿತ ಉದ್ದೇಶದಿಂದಲ್ಲ (ಶಾಲೆಗಳನ್ನು ಸ್ಥಾಪಿಸಿ ಅವುಗಳನ್ನು ತನ್ನ ವಿಚಾರಗಳ ಪ್ರಚಾರಕ್ಕಾಗಿ ಬಳಸಿಕೊಳ್ಳುವ ಆರ್‌ಎಸ್‌ಎಸ್‌ನ ರೀತಿಯಲ್ಲಿ ಅಲ್ಲದೆ), ವಿಚಾರಶೀಲತೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ, ಸಮಾಜದ ಒಳಿತಿನ ಜ್ಞಾನ ಸಂಪಾದನೆಗಾಗಿ. ಇಂತಹ ಶಾಲಾ ಕಾಲೇಜುಗಳಿಗೂ ಪಕ್ಷಕ್ಕೂ ಯಾವ ಸಂಬಂಧವೂ ಇಲ್ಲ ಮತ್ತು ಅವುಗಳ ಸ್ಥಾಪನೆಗೆ ಕಾರಣರಾದ ಪಕ್ಷದ ಕ್ರಿಯಾಶೀಲರು ಈ ಸಂಸ್ಥೆಗಳನ್ನು ನಿಯಂತ್ರಿಸುತ್ತಿಲ್ಲ. ಬದಲಾಗಿ, ಸಮಾಜದ ಭವಿಷ್ಯಕ್ಕಾಗಿ ಚಿಕ್ಕದೊಂದು ಸಸಿ ನೆಟ್ಟ ನಂತರ ಅವರು ತಮ್ಮ ಪಾಲಿನ ಕೆಲಸದಲ್ಲಿ ನಿರತರಾದರು.

ಇನ್ನೊಂದು ಕಡೆಯಲ್ಲಿ, ತೀರ ಭಿನ್ನವಾಗಿರುವ ಒಂದು ಕಣ್ಣೋಟ ಹೊಂದಿರುವ ಬಲಪಂಥವಿದೆ. ಈ ಬಲಪಂಥೀಯರು ನಮ್ಮ ದೇಶದ ಉನ್ನತ ಶಿಕ್ಷಣ ವ್ಯವಸ್ಥೆಗೆ ಉಂಟುಮಾಡಿದ ಹಾನಿಯ ನೆನಪು ಬಹಳ ಕಾಲ ಕಾಡುತ್ತದೆ. ಮತ್ತು, ಅದು ಪ್ರಸಕ್ತ ಬಿಜೆಪಿ ಸರ್ಕಾರದ ಬಳುವಳಿಯಾಗಿ ಬಹಳ ಕಾಲ ಉಳಿಯುತ್ತದೆ. ಈ ಹಾನಿಯು ಒಬ್ಬ ಮಂತ್ರಿಯ ಅಡ್ಡಕಸುಬಿತನದಿಂದ ಆದದ್ದಲ್ಲ. ಒಂದು ನಿರ್ದಿಷ್ಟ ಸಂಸ್ಥೆಗೆ ಸರ್ಕಾರ ತೋರಿಸಿದ ನೀಚತನದ ವರ್ತನೆಯೂ ಅಲ್ಲ. ಅಥವಾ ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು ವಿದ್ಯಾ ಸಂಸ್ಥೆಗಳಲ್ಲಿದ್ದ ಒಂದು ಗುಂಪನ್ನು ಅಸಮರ್ಥ ಅಥವಾ ಕಡಿಮೆ ಅನುಭವ ಉಳ್ಳ ಅಥವಾ ಶೈಕ್ಷಣಿಕವಾಗಿ ಸಣ್ಣ ಮನಸಿನ ಮತ್ತು ಬಿಜೆಪಿಗೆ ಪ್ರಿಯವಾದ ಇನ್ನೊಂದು ಗುಂಪಿನೊಂದಿಗೆ ಬದಲಾಯಿಸಲಾಗಿದೆ ಎಂಬುದೂ ಅಲ್ಲ. ಆಗಿರುವ ಹಾನಿ ವ್ಯವಸ್ಥಿತವಾದದ್ದು ಮತ್ತು ಸರ್ವವ್ಯಾಪಿಯಾದದ್ದು. ಇದು ಆಡಳಿತಗಾರರ ಎರಡು ತಂಡಗಳ ನಡುವೆ ಉಂಟಾದ ಯಾವುದೋ ಕೆಲವು ಸಮಾಜಶಾಸ್ತ್ರೀಯ ಭಿನ್ನಾಭಿಪ್ರಾಯಗಳ ಪರಿಣಾಮವಾಗಿ ಉಂಟಾದ ಹಾನಿಯಲ್ಲ. ವಿಮರ್ಶೆಗೊಳಗಾಗಲಾರದ ಹಿಂದುತ್ವದ ರಾಜಕೀಯ ಧರ್ಮಾಂಧತೆಯ ಕಾರಣದಿಂದಾಗಿ ಈ ಹಾನಿ ಉಂಟಾಗಿದೆ. ಹಾಗಾಗಿ, ಹಿಂದುತ್ವವು ಉನ್ನತ ಶಿಕ್ಷಣ ವಲಯದಲ್ಲಿರುವ ರೋಮಾಂಚಕ ವಿದ್ಯಾ ಸಂಸ್ಥೆಗಳನ್ನು ಸಹಿಸುವುದಿಲ್ಲ. ಏಕೆಂದರೆ, ಎಲ್ಲವನ್ನೂ ಪರಿಶೀಲನೆಗೆ ಒಳಪಡಿಸುವುದೇ ಅಂತಹ ಶಿಕ್ಷಣ ಸಂಸ್ಥೆಗಳ ಮೂಲ ಉದ್ದೇಶವಾಗಿರುತ್ತದೆ.

ವಿಚಾರಗಳನ್ನು ಕೊಲ್ಲುವ ಮೂಲಕವಾಗಿಯೇ ಹಿಂದುತ್ವವು ಯಜಮಾನಿಕೆ ಪಡೆಯಬಲ್ಲದು. ಸ್ವ-ವಿಮರ್ಶಾತ್ಮಕವಾಗಿರುವ ಬೌದ್ಧಿಕ ಚಟುವಟಿಕೆಗಳನ್ನೂ ವಿರೋಧಿಸುವ ಹಿಂದುತ್ವವು ಅನಿವಾರ್ಯವಾಗಿ ಬೌದ್ಧಿಕ ಚಟುವಟಿಕೆಗಳನ್ನೇ ವಿರೋಧಿಸುವ ಸ್ಥಿತಿಗೆ ಮಾರ್ಪಾಡಾಗಬೇಕಾಗುತ್ತದೆ.

ಬುದ್ಧಿಜೀವಿಗಳ ಸಂತತಿಯನ್ನು ವಿಧ್ಯುಕ್ತವಾಗಿ ಬಲಿ ಹಾಕುವುದಷ್ಟೇ ಸಾಕಾಗುವುದಿಲ್ಲ. ಸಮಾಜದಲ್ಲಿ ಗೌರವ ಸಂಪಾದಿಸಿದ ಬುದ್ಧಿಜೀವಿಗಳನ್ನು ಬಲಿಹಾಕಿದಾಗ, ಜನರಲ್ಲಿ ಸಹಾನುಭೂತಿ ಉಂಟಾದರೆ, ಅದು ತಿರುಗುಬಾಣವಾಗಬಲ್ಲದು. ಆದ್ದರಿಂದ, ಬುದ್ಧಿಜೀವಿಗಳನ್ನು ಬಲಿ ಹಾಕುವುದರ ಜೊತೆಯಲ್ಲಿ ಅವರ ಹೆಸರು ಕೆಡಿಸುವ ಕೆಲಸವನ್ನೂ ಮಾಡಿದಾಗ ಅವರ ನೈತಿಕ ನಿಷ್ಠೆಯ ಬಗ್ಗೆ ಜನರಲ್ಲಿದ್ದ ಗೌರವ ಹೊರಟು ಹೋಗುತ್ತದೆ. ಜನ ಅವರನ್ನು "ಅನ್ಯ"ರೆಂದು ಭಾವಿಸುವಂತೆ ಮಾಡಬೇಕಾಗುತ್ತದೆ. ಈ ಉದ್ದೇಶಕ್ಕಾಗಿ "ನಗರ ನಕ್ಸಲ", "ರಾಷ್ಟ್ರ-ವಿರೋಧಿ", "ಇಂಗ್ಲಿಷ್ ಮಾತಾಡುವ" ವಿಷಯಲಂಪಟರು, "ಹವಾ ನಿಯಂತ್ರಣವಾಸಿ ವಿಲಾಸಿಗಳು" ಮುಂತಾದ ಜರೆಯುವ ವಿಶೇಷ ಪದಗಳನ್ನು ಬಳಸುವುದು ಅವಶ್ಯವಾಗುತ್ತದೆ. ಮುಸ್ಲಿಮರು, ದಲಿತರು, ಅಂಚಿನಲ್ಲಿರುವವರ ಗುಂಪುಗಳ ಜೊತೆಯಲ್ಲಿ ಬುದ್ಧಿಜೀವಿಗಳೂ ಸಹ ಪರಕೀಯರು ಎಂಬ ಭಾವನೆಯನ್ನು ಜನರಲ್ಲಿ ಮೂಡಿಸಬೇಕಾಗುತ್ತದೆ.

ಜನತೆಯು ಪರಂಪರಾನುಗತವಾಗಿ ಬುದ್ಧಿಜೀವಿಗಳನ್ನು ಗೌರವಾದರಗಳಿಂದ (ಈ ಗೌರವ, ಜಾತಿ-ಪದ್ಧತಿಯ ಕಾಲದ ಬಳುವಳಿಯೂ ಹೌದು) ಕಾಣುವ ಈ ಸಮಾಜದಲ್ಲಿ, ಈ ರೀತಿಯಲ್ಲಿ ಬುದ್ಧಿಜೀವಿಗಳನ್ನು ಹಣಿಯುವುದು ಮತಾಂಧರಿಗೆ ಮುಖ್ಯವಾಗುತ್ತದೆ (ವಸಾಹತೋತ್ತರ ಸಮಾಜದಲ್ಲಿ, ವಸಾಹತು-ವಿರೋಧಿ ಹೋರಾಟದ ಶಿಶುಗಳಾಗಿ ಉದಯಿಸಿದ ಇಂದಿನ ಕಾಲದ ಬುದ್ಧಿಜೀವಿಗಳಿಗಿಂತ, ಹಿಂದಿನ ಕಾಲದ ಬುದ್ಧಿಜೀವಿಗಳು ಬಹಳಷ್ಟು ಭಿನ್ನವಾಗಿದ್ದರೂ ಸಹ). ಓಬಿರಾಯನ ಕಾಲದ ಜಾತಿ-ಪದ್ಧತಿಯಂತಹ (ಸಂಪ್ರದಾಯಿಕ ಹಿಂದೂ ಧರ್ಮದ ಜೀವಾಳದಂತಿರುವ ಜಾತಿ-ಪದ್ಧತಿಯು ಹಿಂದುತ್ವ ಯೋಜನೆಯಲ್ಲಿ ಒಳ ಹೊಕ್ಕು ಹರಡಿಕೊಂಡಿದೆ) ಕೆಲವು ಆಯಾಮಗಳನ್ನು ಎತ್ತಿಹಿಡಿಯುವ **ಬಿಜೆಪಿಯಂತಹ ಪಕ್ಷವು, ಬುದ್ಧಿಜೀವಿಗಳನ್ನು ಅಥವಾ ಬೌದ್ಧಿಕ ಶ್ರಮದಲ್ಲಿ ತೊಡಗಿದ್ದ ವ್ಯಕ್ತಿಗಳನ್ನು ಗೌರವಾದರಗಳಿಂದ ಕಾಣುವ ಹಳೆಯ ಕಾಲದ ಮಹತ್ವದ ಬಳುವಳಿಯೊಂದನ್ನು ನಾಶಪಡಿಸಲು ಇಷ್ಟು ಜೋರಾಗಿ ಹೆಣಗುತ್ತಿರುವುದು ಒಂದು ವ್ಯಂಗ್ಯವೇ ಸರಿ.**

ತಂಪಿನ-ಬೆಚ್ಚಗಿನ-ವಿಲಾಸಿ ಜೀವನ ನಡೆಸುತ್ತಿದ್ದಾರೆಂದು ಆರೋಪಿಸಿ, ಇವು "ಬೂರ್ಜ್?ವಾ ಅವಗುಣಗಳು" ಎಂದು ಹಳಿದು, ಬುದ್ಧಿಜೀವಿಗಳನ್ನು ಈ ರೀತಿಯಲ್ಲಿ ಹಣಿಯುವುದು ಆಶ್ಚರ್ಯವಲ್ಲ. ಈ ಕೃತ್ಯದಲ್ಲಿ ತೊಡಗಿರುವ ಸರ್ಕಾರವು, ವೇಗವಾಗಿ ಬೂರ್ಜ್ವಾ ಅಭಿವೃದ್ಧಿ ಉಂಟುಮಾಡಿರುವುದೇ ತನ್ನ ಹೆಗ್ಗಳಿಕೆ ಎಂದು ಹೇಳಿಕೊಳ್ಳುವುದೂ ವ್ಯಂಗ್ಯವೇ. ಇಂತಹ ಅಭಿವೃದ್ಧಿ ಸಾಧಿಸಲು ಈ ಸರ್ಕಾರವು ನಮ್ಮ ಇಡೀ ಅರ್ಥವ್ಯವಸ್ಥೆಯ ಬಾಗಿಲನ್ನು ಅಂತಾರಾಷ್ಟ್ರೀಯ ಬಂಡವಾಳವು ಮೇಯಲು ಅನುಕೂಲವಾಗುವಂತೆ ತೆರೆದಿಟ್ಟಿದೆ. ಈ ವ್ಯಂಗ್ಯವು ಸಮಕಾಲೀನ ನವ-ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ತರ್ಕದಲ್ಲೇ ಅಡಗಿದೆ. ●

ಸವಾಲುಗಳನ್ನು ಎದುರಿಸಲು ಜನಗಳೊಂದಿಗೆ ಜೀವಂತ ಸಂಪರ್ಕ

ರಾಜ್ಯಗಳ ಸುತ್ತ







ಗೌತಮ್ ದಾಸ್ ಹೊಸ ರಾಜ್ಯ ಕಾರ್ಯದರ್ಶಿ

ತ್ರಿಪುರಾ ಸಿಪಿಐ(ಎಂ) ರಾಜ್ಯಸಮ್ಮೇಳನದ ಕರೆ

ತ್ರಿಪುರದಲ್ಲಿ ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳ ಮೇಲೆ ಫ್ಯಾಸಿಸ್ಟ್ ಮಾದರಿ ದಾಳಿಗಳನ್ನು ಧೈರ್ಯದಿಂದ ಎದುರಿಸುತ್ತಲೇ ತ್ರಿಪುರಾ ರಾಜ್ಯ ಸಿಪಿಐ(ಎಂ) ಸಮ್ಮೇಳನ ನವಂಬರ್ 25 ಮತ್ತು 26 ರಂದು ಅಗರ್ತಲಾದಲ್ಲಿ ನಡೆಯಿತು. ಸಿಪಿಐ(ಎಂ) ಈಗ ಒಂದು ದೀರ್ಘ ಹೋರಾಟಕ್ಕೆ ಅಣಿಯಾಗಬೇಕಾಗಿದೆ. ಹೋರಾಟಗಳ ರಂಗದಲ್ಲಿ ಜನಸಮೂಹಗಳ ವಿಶ್ವಾಸವನ್ನು ಮತ್ತೆ ಗಳಿಸಬೇಕು. ಅವರೊಂದಿಗೆ ಜೀವಂತ ಸಂಪರ್ಕಗಳನ್ನು ಗಟ್ಟಿಗೊಳಿಸಿಕೊಂಡು ಅವರ ದನಿಯಾಗಿ ಪ್ರಸಕ್ತ ಸವಾಲುಗಳನ್ನು ಎದುರಿಸಬೇಕು. ಇದಕ್ಕಾಗಿ ಪಕ್ಷದ ಸಂಘಟನೆಯನ್ನು ದಕ್ಷಗೊಳಿಸಬೇಕು ಎಂದು ಸಮ್ಮೇಳನ ಕರೆ ನೀಡಿದೆ.

ಅದು 75 ಸದಸ್ಯರಿರುವ ಹೊಸ ರಾಜ್ಯ ಸಮಿತಿಯನ್ನು ಆರಿಸಿದೆ. ಇದರಲ್ಲಿ 16 ಮಂದಿ ಹೊಸಬರು. 15 ಸದಸ್ಯರಿರುವ ಹೊಸ ಕಾರ್ಯದರ್ಶಿ ಮಂಡಳಿಯನ್ನು ಆರಿಸಲಾಯಿತು. ಗೌತಮ್ ದಾಸ್ ಹೊಸ ರಾಜ್ಯ ಕಾರ್ಯದರ್ಶಿಗಳಾಗಿ ಚುನಾಯಿತರಾಗಿದ್ದಾರೆ.

ನವಂಬರ್ 25ರಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಕೆಂಬಾವುಟದ ಆರೋಹಣ ನಡೆಸಿ ಸಮ್ಮೇಳನಕ್ಕೆ ಚಾಲನೆ ನೀಡಿದರು. 24 ಸಬ್ ಡಿವಿಜನ್‌ಗಳಿಂದ ಬಂದಿದ್ದ 299 ಪ್ರತಿನಿಧಿಗಳು ಭಾಗವಹಿಸಿದ ಪ್ರತಿನಿಧಿ ಅಧಿವೇಶನದಲ್ಲಿ ರಾಜ್ಯ ಕಾರ್ಯದರ್ಶಿ ಬಿಜನ್ ಧರ್ ರಾಜಕೀಯ–ಸಂಘಟನಾ ವರದಿಯನ್ನು ಮಂಡಿಸಿದರು. 24 ಪ್ರತಿನಿಧಿಗಳು ನಂತರ ನಡೆದ ಚರ್ಚೆಯಲ್ಲಿ ಭಾಗವಹಿಸಿದರು.

ಪ್ರಧಾನ ಕಾರ್ಯದರ್ಶಿಗಳು ಮತ್ತು ಮಾಣಿಕ್ ಸರ್ಕಾರ್ ರವರಲ್ಲದೆ, ಇತರ ಪೊಲಿಟ್‌ಬ್ಯುರೊ ಸದಸ್ಯರುಗಳಾದ ಪ್ರಕಾಶ ಕಾರಟ್, ಬೃಂದಾಕಾರಟ್ ಮತ್ತು ಬಿಮನ್ ಬಸು ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು.

ರೋಹತಕ್ ಮೇಯರ್ ಸ್ಥಾನಕ್ಕೆ ಜಗ್ಮತಿ ಸಾಂಗ್ವಾನ್ ಸ್ಪರ್ಧೆ



ಹರ್ಯಾಣದ ರೋಹತಕ್ ಮಹಾನಗರ ಸಭೆಯ ಮೇಯರ್ ಸ್ಥಾನಕ್ಕೆ ಜನವಾದಿ ಮಹಿಳಾ ಸಂಘಟನೆಯ ಮುಖಂಡರಾಗಿರುವ ಡಾ. ಜಗ್ಮತಿ ಸಾಂಗ್ವಾನ್ ಸಿಪಿಐ(ಎಂ)ನಿಂದ ಸ್ಪರ್ಧಿಸುತ್ತಾರೆ ಎಂದು ಹರ್ಯಾಣ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯ ಇಂದ್ರಜಿತ್ ಸಿಂಹ ಪ್ರಕಟಿಸಿದ್ದಾರೆ.

ಮಹಿಳಾ ಹೋರಾಟಗಾರರಾದ ಜಗ್ಮತಿ ಅಂತರ್ರಾಷ್ಟ್ರೀಯ ಕ್ರೀಡಾ ಪಟು, ಭೀಮ ಪ್ರಶಸ್ತಿ ವಿಜೇತರೂ ಆಗಿದ್ದಾರೆ ಬಿಜೆಪಿಯ ವಿಭಜನಕಾರಿ ಮತ್ತು ಭ್ರಷ್ಟ ಆಡಳಿತದ ವಿರುದ್ಧ ಜನಪರ ನಗರೀಕರಣದ ಅಜೆಂಡಾದ ಮೇಲೆ ಅವರು ಸ್ಪರ್ಧಿಸುತ್ತಿರುವುದಾಗಿ ಸಿಪಿಐ(ಎಂ) ಹೇಳಿದೆ. ಜನರ, ವಿಶೇಷವಾಗಿ ಮಹಿಳೆಯರ ಸುರಕ್ಷಿತತೆಗಾಗಿ ಸಿಸಿಟಿವಿ ಕ್ಯಾಮರಾಗಳನ್ನು ಹಾಕುವುದು, ಬಸ್ತಿಗಳಲ್ಲಿ ಬೀದಿ ದೀಪಗಳು, ಪಕ್ಕಾ ಓಣಿಗಳು, ಕುಡಿಯುವ ನೀರು ಮತ್ತು ಕಾಂಟ್ರಾಕ್ಟ್ ಕಾರ್ಮಿಕರು, ಸಫಾಯಿ ಕಾರ್ಮಿಕರು, ಬೀದಿ ವ್ಯಾಪಾರಿಗಳು ಹಾಗೂ ಇತರ ಬಡ ವಿಭಾಗಗಳ ಪ್ರಶ್ನೆಗಳನ್ನು ಎತ್ತಿಕೊಳ್ಳಲಾಗುವುದು ಎಂದು ಜಗ್ಮತಿ ಸಾಂಗ್ವಾನ್ ಹೇಳಿದ್ದಾರೆ.



ರಾಜಸ್ಥಾನ



ತೆಲಂಗಾಣ

ತೆಲಂಗಾಣ ಮತ್ತು ರಾಜಸ್ಥಾನ: ಮೂರನೇ ರಂಗ ಮಹತ್ವ ಪಡೆಯುತ್ತಿದೆ

ತೆಲಂಗಾಣದಲ್ಲಿ ಡಿಸೆಂಬರ್ 7 ರಂದು ಎಲ್ಲ 119 ವಿಧಾನ ಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಚುನಾವಣಾ ಪ್ರಚಾರಕ್ಕೆ ಇನ್ನು ಒಂದೇ ವಾರ ಉಳಿದಿರುವಾಗ ಚುನಾವಣಾ ಸಮರ ತಾರಕಕ್ಕೆ ಏರುತ್ತಿದೆ. ಅವಧಿಗೆ ಮುಂಚೆಯೇ ಚುನಾವಣೆಗೆ ಇಳಿದಾಗ ಆಳುವ ಪಕ್ಷ ಟಿಆರ್‌ಎಸ್ ಚುನಾವಣಾ ಓಟದಲ್ಲಿ ಎಲ್ಲಕ್ಕೂ ಮುಂದೆ ಇದ್ದಂತೆ ಕಾಣುತ್ತಿತ್ತು. ಆದರೆ ಮೂರು ತಿಂಗಳ ಅದರ ತಯಾರಿ, ಪ್ರಚಾರದ ನಂತರ ರಾಜಕೀಯ ಸನ್ನಿವೇಶ ಬದಲಾದಂತೆ ಕಾಣುತ್ತಿದೆ ಎಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ. ಟಿಆರ್‌ಎಸ್ ಅಭ್ಯರ್ಥಿಗಳು ತಮ್ಮ ಸರಕಾರ ಈಡೇರಿಸದ ಆಶ್ವಾಸನೆಗಳ ಬಗ್ಗೆ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿ ಬಂದಿದೆ.

ಚತುಷ್ಕೋಣ ಸ್ಪರ್ಧೆಯಿಂದಾಗಿ ಟಿಆರ್‌ಎಸ್ ಅಧಿಕಾರವನ್ನು ಉಳಿಸಿಕೊಳ್ಳಬಹುದು ಎಂದು ಕೆಲವು ವಿಶ್ಲೇಷಕರು ಹೇಳಿದರೆ, ಬಹುಮುಖಿ ವಿಫಲತೆಯಿಂದಾಗಿ ಅಧಿಕಾರ ಉಳಿಸಿಕೊಳ್ಳಲು ಹರಸಾಹಸ ಪಡಬೇಕಾಗಿ ಬಂದಿದೆ ಎಂದು ಇನ್ನು ಕೆಲವರು ಹೇಳುತ್ತಿದ್ದಾರೆ. ಎರಡು ಅಭಿಪ್ರಾಯ ಸಂಗ್ರಹಗಳ ಪ್ರಕಾರ ಯಾರಿಗೂ ಬಹುಮತ ಸಿಗಲಿಕ್ಕಿಲ್ಲ. ಅಂತಹ ಸಂದರ್ಭದಲ್ಲಿ ಬಿಎಲ್‌ಎಫ್ ಮತ್ತು ಒವೈಸಿಯವರ ಪಕ್ಷದ ಪಾತ್ರ ಮಹತ್ವದ್ದಾಗಬಹುದು ಎನ್ನಲಾಗುತ್ತಿದೆ. ಬಿಎಲ್‌ಎಫ್ ಕನಿಷ್ಟ 6 ಸೀಟುಗಳನ್ನು ಪಡೆಯುತ್ತದೆ ಎಂದು ಅದರ ಮುಖಂಡರು ಹೇಳುತ್ತಿದ್ದಾರೆ. ಬಿಎಲ್‌ಎಫ್‌ನ ಪ್ರಚಾರ ವೈಖರಿಗೆ ಉತ್ತಮ ಸ್ಪಂದನೆ ದೊರೆಯುತ್ತಿದೆ ಎಂದು ಅವರು ಹೇಳಿದ್ದಾರೆ.

ರಾಜಸ್ಥಾನದಲ್ಲೂ ಮೂರನೇ ರಂಗ ರೂಪುಗೊಳ್ಳುತ್ತಿದೆ ಎಂದು ಪಿಟಿಐ ವರದಿ ಮಾಡಿದೆ.

ಇಲ್ಲಿ ಸಿಪಿಐ(ಎಂ) ಇರುವ ಏಳು ಪಕ್ಷಗಳ ಮೈತ್ರಿಕೂಟ ಲೋಕತಾಂತ್ರಿಕ್ ಮೋರ್ಚಾ ಚುನಾವಣಾ ಸಮರದಲ್ಲಿ ಮಹತ್ವ ಪಡೆಯುತ್ತಿದೆ. ಇಲ್ಲಿ ಸ್ಪರ್ಧೆ ಸದಾ ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆ ಮಾತ್ರ ಎನ್ನಲಾಗುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ನಡೆದಿರುವ ಬಲಿಷ್ಟ ರೈತ ಹೋರಾಟಗಳು ರಾಜಕೀಯ ಚಿತ್ರವನ್ನು ಬದಲಿಸಿವೆ ಎಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ. ಇಲ್ಲಿನ ಎರಡು ಪಕ್ಷಗಳ ವ್ಯವಸ್ಥೆ "ವಿಭಜಿಸಿ, ಲೂಟಿ ಮಾಡಿ, ಆಳ್ವಿಕೆ ಮಾಡಿ" ಎಂಬುದರ ಮೇಲೆ ನಿಂತಿದೆ. ಅಧಿಕಾರಕ್ಕಾಗಿ ಜನರ ವಿಭಜನೆ ಮತ್ತು ಅಧಿಕಾರಕ್ಕೆ ಬಂದ ಮೇಲೆ ಲೂಟಿ ಈ ಎರಡೂ ಪಕ್ಷಗಳ ಲಕ್ಷಣವಾಗಿದೆ. ಲೂಟಿಯ ಚಕ್ರ ಇದುವರೆಗೆ ಇತ್ತು. ಇದಕ್ಕೆ ಕೊನೆ ಹಾಕಬೇಕು ಎಂದು ಸಿಪಿಐ(ಎಂ) ನ ಹಿರಿಯ ಮುಖಂಡರು ಮತ್ತು ರಾಜ್ಯದ ಜನಪ್ರಿಯ ರೈತ ಮುಖಂಡ ಆಮ್ರ ರಾಮ್ ಕರೆ ನೀಡಿದ್ದಾರೆ. ಅವರ ನೇತೃತ್ವದಲ್ಲಿ ಈ ತೃತೀಯ ರಂಗ ವ್ಯಾಪಕ ಪ್ರಚಾರ ನಡೆಸಿದೆ. ಈ ಬಾರಿ ಬಿಜೆಪಿ ಖಂಡಿತ ಸೋಲುತ್ತದೆ, ಆದರೆ ಕಾಂಗ್ರೆಸ್‌ಗೆ ಗೆಲ್ಲಲು ಆಗುವುದಿಲ್ಲ. ಎಡಪಕ್ಷಗಳ ಪ್ರಾತಿನಿಧ್ಯ ಹೆಚ್ಚುವುದಂತೂ ಖಂಡಿತ, ಅದು ಹೊಸ ದಾಖಲೆ ನಿರ್ಮಿಸಬಹುದು, ಮತ್ತು ಕರ್ನಾಟಕದಂತೆ ಎರಡೂ ಪ್ರಮುಖ ಪಕ್ಷಗಳು ಅಧಿಕಾರ ರಚಿಸಲಾಗದೆ ಮೂರನೇ ಶಕ್ತಿ ಸರಕಾರ ರಚಿಸುವಂತಾಗಬಹುದು ಎಂದು ಅವರು ಹೇಳುತ್ತಾರೆ.

18 ತಿಂಗಳ ಹಿಬಾ: ಕಾಶ್ಮೀರದ ಅತ್ಯಂತ ಕಿರಿಯ ಪೆಲೆಟ್ ಪೀಡಿತೆ



ಈ 18 ತಿಂಗಳ ಹೆಣ್ಣುಮಗು ಹೀಬಾ ಜಾನ್. ಕಾಶ್ಮೀರ ಕಣಿವೆಯ ಕಪ್ರನ್ ಎಂಬ ಹಳ್ಳಿಯವಳು. ಅಲ್ಲಿ ನಡೆದ ಆರು ಉಗ್ರರು ಒಬ್ಬ ಸೈನಿಕನ ಸಾವು ಉಂಟಾದ ಭದ್ರತಾಪಡೆಗಳ ಒಂದು ಎನ್‌ಕೌಂಟರಿನ ನಂತರ ಪ್ರತಿಭಟನಾಕಾರರನ್ನು ಚದುರಿಸಲು ಭದ್ರತಾ ಪಡೆಗಳು ಮಾಡಿದ ಪೆಲೆಟ್‌ಗಳ ಪ್ರಹಾರದಲ್ಲಿ ಗಾಯಗೊಂಡ ನಾಗರಿಕರಲ್ಲಿ ಈಕೆ ಒಬ್ಬಳು. ವಿಶೇಷವೆಂದರೆ ಈಕೆ ಮತ್ತು ಅವಳ ತಾಯಿ ಪ್ರತಿಭಟನಾಕಾರರ ನಡುವೆ ಇರಲಿಲ್ಲ. ಅಶ್ರುವಾಯುವಿನ ಹೊಗೆಯಿಂದ ಭಯಗೊಂಡು ಮಗು ಅಳಲಾರಂಭಿಸಿದಾಗ ತಾಯಿ ತುಸು ಗಾಳಿ ಬರಲೆಂದು ಕಿಟಕಿ ತೆರೆದಾಗ ಮನೆಯೊಳಕ್ಕೆ ತೂರಿ ಬಂದ ಪೆಲೆಟ್ ಗುಂಡುಗಳಲ್ಲಿ ಒಂದು ಈ ಮಗುವಿನ ಕಣ್ಣಿಗೆ ಹೊಡೆಯಿತು ಎನ್ನಲಾಗಿದೆ. ಆಕೆ ಈಗ ಶ್ರೀನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಆಕೆ ಕಣ್ಣು ಕಳಕೊಳ್ಳುವ ಸಂಭವ ಇದೆ ಎಂದು ಡಾಕ್ಟರುಗಳು ಹೆಳುತ್ತಿರುವುದಾಗಿ ವರದಿಯಾಗಿದೆ.

ಜನಜಂಗುಳಿಯ ಹತೋಟಿಗೆ ಪೆಲೆಟ್‌ಗಳ ಬಳಕೆಯನ್ನು ನಿಲ್ಲಿಸಬೇಕೆಂಬ ಬೇಡಿಕೆಯಿಂದಾಗಿ ಈ ಪೆಲೆಟ್ ಪ್ರಹಾರಗಳ ಬದಲು ಪರ್ಯಾಯ ಕ್ರಮಗಳನ್ನು ಅನ್ವೇಷಿಸಲಾಗುತ್ತದೆ ಎಂಬ ಭರವಸೆ ನೀಡಲಾಗಿತ್ತು. ನಾಲ್ಕುವರ್ಷಗಳ ನಂತರ, ಮಿಂಚಿನ ಪ್ರಹಾರದ ಕಾರ್ಯಾಚರಣೆ ಮತ್ತು ಭಯೋತ್ಪಾದಕರ ಬೆನ್ನು ಮುರಿಯುತ್ತದೆ ಎನ್ನಲಾದ ನೋಟುರದ್ಧತಿಯ ನಂತರವೂ ಕಾಶ್ಮೀರದಲ್ಲಿ ಪರಿಸ್ಥಿತಿ ಸುಧಾರಿಸುವ ಬದಲು ಮತ್ತಷ್ಟು ಹದಗೆಟ್ಟಿರುವುದರ ಪ್ರತೀಕ ಇದು ಎಂದು ವಿಶ್ಲೇಷಕರು ಹೇಳುತ್ತಾರೆ.

ವಿರೋಧ ಪಕ್ಷದ ನಾಯಕಿ ಜೈಲಿನಲ್ಲಿ

ಬಾಂಗ್ಲಾದೇಶ ಸಂಸತ್ ಚುನಾವಣೆಗೆ ಸಜ್ಜು



ಕಳೆದ ಐದು ವರ್ಷಗಳಲ್ಲಿ ಪ್ರಧಾನಿ ಶೇಖ್ ಹಸೀನಾಳ ಸರಕಾರವು ಅಂತರರಾಷ್ಟ್ರೀಯ ಮತ್ತು ಆಂತರಿಕವಾಗಿ ಅನೇಕ ಪಿತೂರಿ ಮತ್ತು ಸವಾಲುಗಳನ್ನು ಎದುರಿಸಿ ಬಾಂಗ್ಲಾದೇಶವನ್ನು ಅನೇಕ ಕ್ಷೇತ್ರಗಳಲ್ಲಿ ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಕಾರ್ಯದಲ್ಲಿ ನಿರತವಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕ ದಲ್ಲಿ ಬಾಂಗ್ಲಾದೇಶ ವು ತನ್ನ ನೆರೆಹೊರೆಯ ರಾಷ್ಟ್ರಗಳಿಗಿಂತ, ಅದರಲ್ಲೂ ಭಾರತಕ್ಕಿಂತ ಮೇಲೆ ಇದೆ. ಆದರೆ ಅಸಹಿಷ್ಣುತೆ ಮತ್ತು ಭ್ರಷ್ಟಾಚಾರಗಳು ಹೆಚ್ಚಾಗಿದೆ. ನಕಲಿ ಎನ್ ಕೌಂಟರ್ ಗಳು ಮತ್ತು ನ್ಯಾಯಾಂಗ ಕೊಲೆಗಳು ನಡೆದಿವೆ. ಸರಕಾರದೊಂದಿಗೆ ಭಿನ್ನಮತ ವ್ಯಕ್ತಪಡಿಸುವ ಎರಡು ಅತ್ಯಂತ ಹೆಚ್ಚು ಪ್ರಸಾರವಿರುವ ಎರಡು ದೈನಿಕಗಳ ಸಂಪಾದಕರುಗಳ ಮೇಲೆ 'ರಾಜದ್ರೋಹ' ಮತ್ತು 'ಮಾನನಷ್ಟ' ಮೊಕದ್ದಮೆ ಹೂಡಲಾಗಿದೆ. ವಿದ್ಯಾರ್ಥಿ ಮತ್ತು ಯುವಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಂಡಂತಾಗಿದೆ. ವಿರೋಧ ಪಕ್ಷದ ನಾಯಕಿ ಜೈಲಿನಲ್ಲಿ ಇದ್ದಾರೆ. ಇಂತಹ ಸನ್ನಿವೇಶದಲ್ಲಿ ಬಾಂಗ್ಲಾದೇಶದ ಸಂಸತ್ತಿಗೆ ಚುನಾವಣೆ ನಡೆಯುತ್ತಿದೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಬಾಂಗ್ಲಾದೇಶವು ಮುಂಬರುವ ಡಿಸೆಂಬರ್ 30 ರಂದು ತನ್ನ 11ನೇ ಸಂಸತ್ತನ್ನು ಚುನಾಯಿಸಲು ಸಜ್ಜುಗೊಳ್ಳುತ್ತಿದೆ. ಜಗತ್ತಿನ 8 ನೆಯ ಅತಿ ದೊಡ್ಡ ಜನ ಸಂಖ್ಯೆಯನ್ನು ಹೊಂದಿರುವ ಈ ದೇಶದ ಚುನಾವಣೆ ಮಹತ್ವ ಪೂರ್ಣ. ಪ್ರಧಾನಿ ಶೇಖ್ ಹಸೀನಾ ಪ್ರಕಾರ ಈ ಬಾರಿಯ ಚುನಾವಣೆ ಆಡಳಿತಾರೂಢ ಅವಾಮಿ ಲೀಗ್ (ಎ.ಎಲ್) ಮತ್ತು ಅದರ ಮಿತ್ರ ಪಕ್ಷಗಳಿಗೆ ಗೆಲುವು ಸುಲಭವಲ್ಲ ಎಂದಿದ್ದಾರೆ. ಏತನ್ಮಧ್ಯೆ, ಎರಡು ಬಾರಿ ಪ್ರಧಾನಿಯಾಗಿದ್ದ ಹಾಗೂ ಮುಖ್ಯ ವಿರೋಧ ಪಕ್ಷವಾದ" ಬಾಂಗ್ಲಾದೇಶ ನೇಶನಲಿಸ್ಟ್ ಪಕ್ಷ (ಬಿ.ಎನ್.ಪಿ)ದ ಅಧ್ಯಕ್ಷೆಯಾದ ಬೇಗಂ ಖಲೀದಾ ಜಿಯಾ ರವರು ಇದೀಗ ಜೈಲಿನಲ್ಲಿ ಇದ್ದಾರೆ. ಈ ಹಿನ್ನೆಲೆಯಲ್ಲಿ ಇವಳ ಮಗ ಉಸ್ತುವಾರಿ ಅಧ್ಯಕ್ಷ ತೆರಖ್ ರಹಮಾನ್ ಚುನಾವಣೆಯಲ್ಲಿ ಸ್ಪರ್ಧಿಸಲು ತಯಾರಿ ನಡೆಸಿದ್ದಾರೆ.

1972 ರಲ್ಲಿ 'ಬಾಂಗ್ಲಾದೇಶದ ಸಂವಿಧಾನ'ದ ಶಿಲ್ಪಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ದಿವಗಂತ ಶೇಖ್ ಮುಜೀಬುರ್ ರೆಹಮಾನ್ ಆಡಳಿತದಲ್ಲಿ ಕಾನೂನು ಸಚಿವರಾಗಿದ್ದ ಡಾ. ಕಮಾಲ್ ಹುಸೇನ್ ಮತ್ತು ಜಾಫುರುಲ್ಲಾ ಚೌದುರಿ (ಪ್ರಸಿದ್ಧ ಗಣಸ್ವಸ್ಥ ಕೇಂದ್ರದ ಸ್ಥಾಪಕ) ಇವರಿಬ್ಬರೂ ಬಿ.ಎನ್.ಪಿ ಮತ್ತು ಅದರ ಮಿತ್ರ ಪಕ್ಷಗಳನ್ನು ಈ ಬಾರಿಯ ಚುನಾವಣೆಯಲ್ಲಿ ಒಟ್ಟಿಗೆ ತರಲು ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ.

ಚುನಾವಣೆಯಲ್ಲಿ ವಿರೋಧ ಪಕ್ಷಗಳು ಭಾಗವಹಿಸಲಿವೆ

ಬಿ.ಎನ್.ಪಿ ಮತ್ತು ಅದರ ಮಿತ್ರ ಪಕ್ಷವಾಗಿರುವ ಇಸ್ಲಾಮಿಕ್ ಮೂಲಭೂತವಾದಿ ಜಮಾಯತ್–ಇ–ಇಸ್ಲಾಮಿ, ಕಳೆದ 2014 ರ ಜವರಿಯಲ್ಲಿ ನಡೆದ ಪಾರ್ಲಿಮೆಂಟ್ ಚುನಾವಣೆಗಳನ್ನು ಬಹಿಷ್ಕರಿಸಿದ್ದರು. ಇದರ ದುಷ್ಪರಿಣಾಮಗಳಿಂದ ನಡೆದ ಹಿಂಸಾಚಾರ ಮತ್ತು ದಾಳಿಗಳಿಂದಾಗಿ ಸರಕಾರಿ ಮತ್ತು ಖಾಸಗಿ ಆಸ್ತಿಗಳಿಗೆ ಅಪಾರ ನಷ್ಟವುಂಟಾಗಿತ್ತು. ಮತಗಟ್ಟೆಯ ಅಧಿಕಾರಗಳನ್ನು ಒಳಗೊಂಡಂತೆ, ಅನೇಕ ಜನರು ಈ ಹಿಂಸಾಚಾರದಲ್ಲಿ ಕೊಲ್ಲಲ್ಪಟ್ಟಿದ್ದರು. ಇದರಿಂದ ತುಂಬಾ ಕಡಮೆ ಪ್ರಮಾಣದ ಮತದಾನ ವಾಗಿತ್ತು. 300 ಸದಸ್ಯರ ಬಲ ಹೊಂದಿರುವ ರಾಷ್ಟ್ರೀಯ ಸಂಸತ್ ನಲ್ಲಿ, ಆಡಳಿತರೂಢ ಅವಾಮಿ ಲೀಗ್ (ಎ.ಎಲ್.) ಮತ್ತು ಇದರ ಮಿತ್ರ ಪಕ್ಷಗಳು, ಯಾವುದೇ ಸ್ಪರ್ಧೆಯಿಲ್ಲದ ಕಾರಣ ಅವಿರೋಧವಾಗಿ 153 ಸ್ಥಾನಗಳಲ್ಲಿ ಆಯ್ಕೆಯಾಗಿದ್ದರು.

ಬಿ.ಎನ್.ಪಿ ನಾಯಕತ್ವವು ಈ ಬಾರಿಯು ಚುನಾವಣೆಯಲ್ಲಿ ಸ್ಪರ್ಧಿಸುವ ವಿಚಾರದಲ್ಲಿ ಗೊಂದಲಕ್ಕೀಡಾಗಿತ್ತು. ಏಕೆಂದರೆ, ಇವರ ನಾಯಕಿ ಖಲೀದಾ ಜಿಯಾ ಒಂದು ಚಾರಿಟೇಬಲ್ ಟ್ರಸ್ಟ್‌ನ ಪ್ರಕರಣದಲ್ಲಿ ದುರ್ಬಳಕೆ ಆರೋಪದ ಮೇಲೆ ಸೆರೆಮನೆ ವಾಸ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಡಾ. ಕಮಾಲ್ ಹುಸೇನ್ ಮತ್ತಿತರರು ರಾಷ್ಟ್ರೀಯ ಸಂಯುಕ್ತ ರಂಗ (ಎನ್.ಯು.ಎಫ್) ಎಂಬ ವಿರೋಧ ಪಕ್ಷಗಳ ಹೊಸ ರಂಗ ರಚಿಸಿ ಕೊಂಡು ಚುನಾವಣೆಗೆ ತಯಾರಿ ನಡೆಸುತ್ತಿದ್ದಾರೆ. ಬಿ.ಎನ್.ಪಿ ಕೂಡಾ ಈ ಹೊಸ ರಂಗದ ಭಾಗವಾಗಿದೆ.

ಪ್ರಧಾನಿ ಹಸೀನಾ ನೇತೃತ್ವದಲ್ಲಿ, ಅವಾಮಿ ಲೀಗ್ ನ 14 ಪಕ್ಷಗಳ ಮೈತ್ರಿ ಕೂಟದ ನಾಯಕರೊಂದಿಗೆ, ಎನ್.ಯು.ಎಫ್ ಮತ್ತು ಬಿ ಎನ್ ಪಿ ಯ ನಾಯಕರು ಜಂಟಿಯಾಗಿ ಮಾತುಕತೆ ನಡೆಸಿದ್ದಾರೆ. ಜೈಲಿನಲ್ಲಿರುವ ಬಿಎನ್‌ಪಿ ನಾಯಕಿ ಖಲೀದಾ ಳನ್ನು ಬಿಡುಗಡೆ ಮಾಡಬೇಕೆಂಬ ಬೇಡಿಕೆಯನ್ನು ಪ್ರಧಾನಿ ಮುಂದಿಟ್ಟರು, ಹಾಗೂ ಚುನಾವಣೆಯ ಮೇಲ್ವಿಚಾರಣೆ ನಡೆಸಲು ಹಂಗಾಮಿ ಸರಕಾರದ ರಚನೆಯ ಕುರಿತಂತೆ ಮುಂದಾಗಬೇಕೆಂಬ ಎರಡು ಬೇಡಿಕೆಗಳನ್ನು ಪ್ರಧಾನಿ ತಳ್ಳಿ ಹಾಕಿದರು. ಆರೋಪ ಸಿದ್ಧವಾಗಿ ಸೆರೆಮನೆಯಲ್ಲಿರುವವರನ್ನು ಯಾವುದೇ ಕಾರಣಕ್ಕೂ ಬಿಡುಗಡೆ ಗೊಳಿಸಲು ಸಾಧ್ಯವಿಲ್ಲವೆಂದು ನಿರಾಕರಿಸಿದರು. ಹಾಗೆಯೇ ಚುನಾವಣೆಯನ್ನು ಆಯೋಗವು ಮುಕ್ತವಾಗಿ ನಡೆಸಿಕೊಡಬಲ್ಲದು ಎಂಬ ವಿಶ್ವಾಸವಿರುವ ಕಾರಣ, ಕೇರ್ ಟೇಕರ್ ಸರಕಾರದ ಅಗತ್ಯ ವಿಲ್ಲವೆಂದು ತಮ್ಮ ಆಡಳಿತದಲ್ಲಿಯೇ ಚುನಾವಣೆ ನಡೆಸುವ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಎನ್.ಯು.ಎಫ್ ಹಾಗೂ ಬಿ.ಎನ್.ಪಿ.ಯ ಹೊಸ ಮೈತ್ರಿಕೂಟವು ಚುನಾವಣೆಯಲ್ಲಿ ಸ್ಪರ್ಧಿಸಲು ದೃಢ ನಿಲುವನ್ನು ತೆಗೆದುಕೊಂಡಿವೆ. ಈ ಮಧ್ಯೆ ಬಾಂಗ್ಲಾದೇಶದ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡರಂಗದ ನಾಯಕರು ಪ್ರಧಾನಿ ಹಸೀನಾರನ್ನು ಪ್ರತ್ಯೇಕವಾಗಿ ಬೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಬಿಕಲ್ಪಧಾರಾ ಪಕ್ಷದ ಅಧ್ಯಕ್ಷ ಡಾ. ಬದರುದ್ದೋಜ್ ಚೌಧುರಿ, ಜಾತೀಯ ಪಕ್ಷದ ಜನರಲ್ ಇರ್ಶಾದ್ ಸಹ ಪ್ರಧಾನಿಯನ್ನು ಭೇಟಿ ಮಾಡಿ ಚುನಾವಣೆಯಲ್ಲಿ ಭಾಗವಹಿಸಲು ನಿರ್ಧರಿಸಿದ್ದಾರೆ.

ಡಿಸೆಂಬರ್ 30ಕ್ಕೆ ಚುನಾವಣೆ

ಆರಂಭದಲ್ಲಿ ಚುನಾವಣೆ ಯನ್ನು ಡಿಸೆಂಬರ್ 23 ರಂದು ನಡೆಸಲು ಆಯೋಗವು ದಿನಾಂಕ ವನ್ನು ಘೋಷಿಸಿತ್ತು. ಆದರೆ, ಹೊಸ ಮೈತ್ರಿ ಕೂಟವಾದ



ಎನ್.ಯು.ಎಫ್ ಮತ್ತು ಬಿ.ಎನ್.ಪಿ ಯು ಒಂದು ತಿಂಗಳ ಕಾಲ ಚುನಾವಣೆಯನ್ನು ಮುಂದೂಡಲು ಬೇಡಿಕೆಯಿಟ್ಟ ಪರಿಣಾಮ ಅಂತಿಮವಾಗಿ ಡಿಸೆಂಬರ್ 30 ಕ್ಕೆ ನಿಗದಿಪಡಿಸಲಾಯಿತು. ಪೋಲಿಸರು ಮತ್ತು ಪಾರಾ ಮಿಲಿಟರಿ ಪಡೆಗಳಲ್ಲದೆ, ಮಿಲಿಟರಿ ಪಡೆಗಳನ್ನು ಸಹ ನಿಯೋಜಿಸಲಾಗುವುದು ಎಂಬ ಭರವಸೆಯನ್ನು ನೀಡಿರುವ ಚುನಾವಣಾ ಆಯುಕ್ತರು, ಶಾಂತಿಯುತವಾಗಿ ಚುನಾವಣಾ ನಡೆಸಲು ಸಹಕರಿಸಬೇಕೆಂದು ಎಲ್ಲಾ ರಾಜಕೀಯ ಪಕ್ಷಗಳಿಗೆ ಮನವಿ ಮಾಡಿಕೊಂಡಿದ್ದಾರೆ.

ಪ್ರಸ್ತುತ ಎರಡೂ ರಾಜಕೀಯ ಗುಂಪುಗಳು ಚುನಾವಣಾ ಪ್ರಕ್ರಿಯೆ ಯಲ್ಲಿ ಚುರುಕಾಗಿವೆ. ಸಣ್ಣ ಗುಂಪಿನ ಪಕ್ಷಗಳೊಂದಿಗೆ ಸ್ಥಾನಗಳ ಹಂಚಿಕೆಯಲ್ಲಿ ನಿರತವಾಗಿವೆ. ಆಡಳಿತರೂಢ ಅವಾಮಿ ಲೀಗ್ ನೊಂದಿಗೆ ಜನರಲ್ ಎಚ್.ಎಂ.ಇರ್ಶಾದ್ ನೇತೃತ್ವದ ಜಾತಿಯಾ ಪಕ್ಷ, ಹಾಗೂ ಬಾಂಗ್ಲಾದೇಶ ದ ಮಾಜಿ ಅಧ್ಯಕ್ಷ ರಾದ ಡಾ.ಬಡ್ರೂಡೊಜ ಚೌಧುರಿ, ಹಾಗೆಯೇ, ಬಿ.ಎನ್.ಪಿ ಯ ಮಾಜಿ ಮಂತ್ರಿ ಯಾಗಿದ್ದ ನಾಝುಲ್ ಹುಡ ಇವರೆಲ್ಲರೂ, ಅವಾಮಿ ಲೀಗ್ ನೊಂದಿಗೆ ಸೇರುವ ಸೂಚನೆ ವ್ಯಕ್ತ ಪಡಿಸಿದ್ದಾರೆ.

ಈ ಚರ್ಚೆಗಳ ಮಧ್ಯೆ, ಅವಾಮಿ ಲೀಗ್ ನ ಪ್ರಮುಖ ನಾಯಕರು, ಇನ್ನೊಂದು ಮೂಲಭೂತ ವಾದಿ ಸಂಘಟನೆಯಾದ, ಇಸ್ಲಾಮಿಕ್ ಒಕಿಯಾ ಜೋಟ್ (ಇಸ್ಲಾಂ ಯೂನಿಟಿ ಫ್ರಂಟ್) ನೊಂದಿಗೆ ಚುನಾವಣಾ ಮೈತ್ರಿಗಾಗಿ ಪ್ರತ್ಯೇಕ ಭೇಟಿ ಮಾಡಿರುವುದನ್ನು, ಎಡ ಪಕ್ಷಗಳು ಮತ್ತು ಬುದ್ಧಿಜೀವಿಗಳು ತೀವ್ರವಾಗಿ ಪ್ರತಿಭಟಿಸಿದ್ದಾರೆ. ಏಕೆಂದರೆ, ಈ ಮೂಲಭೂತ ವಾದಿ ಸಂಘಟನೆಯು ಕಳೆದ ಪಾರ್ಲಿಮೆಂಟ್ ಚುನಾವಣಾ ಸಂದರ್ಭದಲ್ಲಿ ಡಾಕಾ ನಗರವನ್ನು ತನ್ನ ವಶಕ್ಕೆ ಪಡೆಯಲು ಪ್ರಯತ್ನಿಸಿತ್ತು. ಇದೀಗ ಇವರ ಅನೇಕ ಬೇಡಿಕೆಗಳನ್ನು ಪ್ರಧಾನಿ ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ, ನೋಬೆಲ್ ಪಾರಿತೋಷಕ ವಿಜೇತರಾದ ರವಿಂಧ್ರನಾಥ್ ಟಾಗೋರ್ ರ ಹಾಗೂ ಪ್ರಸಿದ್ದ ಬರಹಗಾರರಾದ ಶರತ್ ಚಂದ್ರ ಚಟ್ಟೋಪಾಧ್ಯಾಯರ ಹಲವು ಕವನ, ಕಥನ ಹಾಗೂ ಪ್ರಬಂಧ ಗಳನ್ನು ಪಠ್ಯ ಪುಸ್ತಕ ದಿಂದ ತೆಗೆದು ಹಾಕುವ ಬೇಡಿಕೆಗಳಿಗೆ ಶರಣಾಗಿದೆ. ಈ ಕ್ರಮವು ಜಾತ್ಯಾತೀತ ಸ್ವರೂಪದ ಬಗ್ಗೆ ಅವಾಮಿ ಲೀಗ್ ಗೆ ಇರುವ ಬದ್ಧತೆಯನ್ನು ಪ್ರಶ್ನಿಸುವಂತಾಗಿದೆ.

ಶೇಖ್ ಹಸೀನಾ ಸರಕಾರದ ಅಭಿವೃದ್ಧಿ ಕಾರ್ಯಗಳು

ಕಳೆದ ಐದು ವರ್ಷಗಳಲ್ಲಿ ಪ್ರಧಾನಿ ಶೇಖ್ ಹಸೀನಾಳ ಸರಕಾರವು ಅಂತರರಾಷ್ಟ್ರೀಯ ಮತ್ತು ಆಂತರಿಕವಾಗಿ ಅನೇಕ ಪಿತೂರಿ ಮತ್ತು ಸವಾಲುಗಳನ್ನು ಎದುರಿಸಿ ಬಾಂಗ್ಲಾದೇಶವನ್ನು ಅನೇಕ ಕ್ಷೇತ್ರಗಳಲ್ಲಿ ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಕಾರ್ಯದಲ್ಲಿ ನಿರತವಾಗಿದೆ. ಪ್ರಸ್ತುತ ಬಾಂಗ್ಲಾದೇಶದ ಜನರು ಕ್ಷಾಮ ಮತ್ತು ಹಸಿವಿನಿಂದ ಮುಕ್ತರಾಗಿದ್ದಾರೆ. ಜೀವಿತಾವಧಿಯು ಏರಿಕೆಯಾಗಿದೆ. ಸಾಮಾನ್ಯ ಜನರ ಆರೋಗ್ಯ ಸಂರಕ್ಷಣೆಯು ಹೆಚ್ಚಾಗಿದೆ. ಮಕ್ಕಳ ಮರಣ ಪ್ರಮಾಣವು ತುಂಬಾ ಇಳಿಕೆ ಕಂಡಿದೆ. ಬಡತನ ಮತ್ತು ದಾರಿದ್ರ್ಯ ಗಣನೀಯವಾಗಿ ಕಡಿಮೆಯಾಗಿದೆ.

ಮಾನವ ಅಭಿವೃದ್ಧಿ ಸೂಚ್ಯಂಕ ದಲ್ಲಿ ಬಾಂಗ್ಲಾದೇಶ ವು ತನ್ನ ನೆರೆಹೊರೆಯ ರಾಷ್ಟ್ರಗಳಿಗಿಂತ, ಅದರಲ್ಲೂ ಭಾರತಕ್ಕಿಂತ ಮೇಲೆ ಇದೆ. ಆಹಾರ ಉತ್ಪಾದನೆಯಲ್ಲಿ ಸ್ವಯಂ–ಪರಿಪೂರ್ಣತೆಯನ್ನು ಸಾಧಿಸಿದೆ ಮತ್ತು ವಿದ್ಯುತ್ ಉತ್ಪಾದನೆಯು ಸಹಾ ಸುಧಾರಿಸಿದೆ. ರಸ್ತೆಗಳು, ಜಲಮಾರ್ಗಗಳು, ರೈಲ್ವೆಗಳು ಮತ್ತು ವಿಮಾನ ಸಂಪರ್ಕ ಸೇರಿದಂತೆ ಇನ್ನಿತರೆ ಮೂಲಸೌಕರ್ಯಗಳು ಕ್ರಮೇಣ ವಾಗಿ ಸುಧಾರಿಸುತ್ತಿವೆ. ನೆರೆಹೊರೆ ದೇಶಗಳಾದ ಭಾರತ, ನೇಪಾಳ, ಭೂತಾನ್ ಮತ್ತು ಸಮಾಜವಾದಿ ಚೀನಾ ಮತ್ತು ವಿಯೆಟ್ನಾಮ್ ಸೇರಿದಂತೆ ಹಲವು ಏಷಿಯಾದ ದೇಶಗಳೊಂದಿಗಿನ ಸಂಬಂಧಗಳು ಬಹಳ ಸೌಹಾರ್ದತೆಯಿಂದ ಕೂಡಿದೆ. ಪ್ರಧಾನಿ ಹಸೀನಾ ಅವರು, ಭಾರತದ ತ್ರಿಪುರಾ ಸೇರಿದಂತೆ ಗಡಿ ಪ್ರದೇಶದ ರಾಜ್ಯಗಳೊಂದಿಗೆ ನಿಕಟ ಸಂಬಂಧವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಮುತುವರ್ಜಿ ವಹಿಸಿದ್ದಾರೆ.

ಅಸಹಿಷ್ಣುತೆ ಮತ್ತು ಭ್ರಷ್ಟಾಚಾರಗಳಲ್ಲಿ ಹೆಚ್ಚಳ

ಹಲವು ತಟಸ್ಥ ರಾಜಕೀಯ ಪಂಡಿತರ ಪ್ರಕಾರ ಪ್ರಧಾನಿ ಶೇಖ್ ಹಸೀನಾ ಅವರು ಹಲವು ಕ್ಷೇತ್ರದಲ್ಲಿ ಯಶಸ್ವಿಯಾಗಿದ್ದರು ಸಹಾ, ಅಸಹಿಷ್ಣುತೆ ಮತ್ತು ಭ್ರಷ್ಟಾಚಾರಗಳು ಇವರ ಆಡಳಿತದಲ್ಲಿ ಹೆಚ್ಚಾಗಿದೆ. ನಕಲಿ ಎನ್ ಕೌಂಟರ್ ಗಳು ಮತ್ತು ನ್ಯಾಯಾಂಗ ಕೊಲೆಗಳು ನಡೆದಿವೆ. ಕಳೆದ ಒಂದು ವರ್ಷದಲ್ಲಿ ಮಾದಕ ದ್ರವ್ಯಗಳ ಕಳ್ಳ ಸಾಗಾಣಿಕೆಯ ವಿರುದ್ಧದ ಕಾರ್ಯಾಚರಣೆಯಲ್ಲಿ ನೂರಾರು ಜನರು ಕೊಲ್ಲಲ್ಪಟ್ಟಿದ್ದಾರೆ. ಅವರಲ್ಲಿ ಇದನ್ನು ನಡೆಸುವ ದೊಡ್ಡ ತಿಮಿಂಗಲಗಳಿಲ್ಲ, ಬದಲಾಗಿ ಅದನ್ನು ಹಂಚುವವರು ಮತ್ತು ಬಳಕೆದಾರರು, ವಿರೋಧ ಪಕ್ದದ ನಾಯಕರನ್ನು ಜೈಲಿನಲ್ಲಿ ಇಟ್ಟು ಚುನಾವಣೆ ನಡೆಸುವುದು ಸೂಕ್ತವಲ್ಲವೆಂಬುದು ಹಲವು ರಾಜಕೀಯ ಪಂಡಿತರ ಅಭಿಪ್ರಾಯವಾಗಿದೆ. ಸರಕಾರದೊಂದಿಗೆ ಭಿನ್ನಮತ ವ್ಯಕ್ತಪಡಿಸುವ ಎರಡು ಅತ್ಯಂತ ಹೆಚ್ಚು ಪ್ರಸಾರವಿರುವ ಎರಡು ದೈನಿಕಗಳ ಸಂಪಾದಕರುಗಳ ಮೇಲೆ 'ರಾಜದ್ರೋಹ' ಮತ್ತು 'ಮಾನನಷ್ಟ' ಮೊಕದ್ದಮೆ ಹೂಡಲಾಗಿದೆ.

ಬಾಂಗ್ಲಾದೇಶದ ವಿದ್ಯಾರ್ಥಿಗಳು ಆ ದೇಶದ ಅನೇಕ ಐತಿಹಾಸಿಕ ಪ್ರಜಾಸತ್ತಾತ್ಮಕ ಚಳುವಳಿಗಳಲ್ಲಿ ಮುಂಚೂಣಿ ಪಾತ್ರ ನಿರ್ವಹಿಸಿದ್ದಾರೆ. ಪ್ರಮುಖವಾಗಿ 1969 ರಲ್ಲಿ ಮಿಲಿಟರಿ ಸರ್ವಾಧಿಕಾರಿ ಆಯೂಬ್ ಖಾನ್ ಸರಕಾರದ ದೋರಣೆಗಳ ವಿರುದ್ಧ, 1971 ರಲ್ಲಿನ ಬಾಂಗ್ಲಾದೇಶ ದ ವಿಮೋಚನಾ ಚಳುವಳಿಯಲ್ಲಿ ಡಾಕಾ ವಿದ್ಯಾರ್ಥಿಗಳ ಅಚಲ ಹೋರಾಟ ಹಾಗೂ 1972 ರಲ್ಲಿನ 'ಮಾತೃ ಬಾಷಾ ಚಳುವಳಿ' ಗಳು ಬಾಂಗ್ಲಾದೇಶವನ್ನು ಉತ್ತಮ ಬದಲಾವಣೆಯತ್ತಾ ಕೊಂಡೊಯ್ಯಲು ಹಾಗೂ ಪಶ್ಚಿಮ–ಪಾಕಿಸ್ತಾನದ ಪ್ರಭಾವಕ್ಕೆ ಸಿಕ್ಕಿ ನರಳುತ್ತಿದ್ದ ಬಾಂಗ್ಲಾದೇಶ ವನ್ನು ವಿಮುಕ್ತಿ ಗೊಳಿಸುವಲ್ಲಿ, ಈ ವಿದ್ಯಾರ್ಥಿ ಚಳುವಳಿಗಳು ತನ್ನದೇ ಆದ ಛಾಪನ್ನು ಮೂಡಿಸಿವೆ. ಆದರೆ ಕಳೆದ ಎರಡು ದಶಕಗಳಿಂದ ವಿದ್ಯಾರ್ಥಿ ಕೌನ್ಸಿಲ್ ಗಳಿಗೆ ಚುನಾವಣೆಗಳನ್ನು ಕೂಡಾ ನಡೆಸದೆ, ವಿದ್ಯಾರ್ಥಿಗಳಲ್ಲಿ ಪ್ರಜಾಸತ್ತಾತ್ಮಕ ಪ್ರಜ್ಞೆ ಕುಸಿದಿದೆ. ಅದು ರಾಜಧಾನಿ ಡಾಕಾದಲ್ಲಿರಬಹುದು, ಅಥವಾ ಮೆಗಾನಗರಗಳಾದ ಚಿತ್ತಾಗಾಂಗ್ ಮತ್ತು ರಾಜ್ ಶಾಹಿ ಗಳಲ್ಲಿ ಇರಬಹುದು. ಇದರಿಂದ, ವಿದ್ಯಾರ್ಥಿ ಮತ್ತು ಯುವಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಂಡಂತಾಗಿದೆ ಎಂಬ ಆರೋಪಕ್ಕೆ ಹಸೀನಾ ಸರಕಾರ ಒಳಗಾಗಿದೆ. ಜೊತೆಗೆ ಆಡಳಿತ ರೂಢ ಸರಕಾರದ ಸಂಯೋಜಿತ ವಿದ್ಯಾರ್ಥಿಗಳ ಗುಂಪುಗಳು ಯೂನಿವರ್ಸಿಟಿ ಮತ್ತು ಇನ್ನಿತರೆ ಶಿಕ್ಷಣ ಸಂಸ್ಥೆಗಳಲ್ಲಿ, ಸಮಾಜ ಮತ್ತು ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳನ್ನು ನಡೆಸುತ್ತಿವೆ ಎಂಬ ಕಟುವಾದ ಆರೋಪಗಳನ್ನು ಹಸೀನಾ ಸರಕಾರ ಎದುರಿಸುತ್ತಿದೆ.

ಬಾಂಗ್ಲಾದೇಶದ ವಿಮೋಚನಾ ಸಮರದಲ್ಲಿ ಮಿಲಿಟರಿಯೊಂದಿಗೆ ಶಾಮೀಲಾಗಿ ಸಾಮೂಹಿಕ ಕಗ್ಗೊಲೆಗಳಿಗೆ ಕಾರಣರಾಗಿದ್ದ ಮೂಲಭೂತವಾದಿ ನಾಯಕರ ವಿಚಾರಣೆ ಮತ್ತು ಶಿಕ್ಷೆಗೆ ಒತ್ತಾಯಿಸಿ ಸಫಲವಾಗಿದ್ದ ಶಹಬಾಗ್ ಚಳುವಳಿಯ ನಾಯಕ ಡಾ. ಇಮ್ರಾನ್ ಸರಕಾರ್ ಜತೆ ಸರಕಾರದ ವರ್ತನೆ ತೀವ್ರ ಟೀಕೆಗೊಳಗಾಗಿದೆ.

ವರ್ಕರ್ಸ್ ಪಾರ್ಟಿ ಸೇರಿದಂತೆ ಅವಾಮಿ ಲೀಗ್ ನಾಯತ್ವದ 14 ಪಕ್ಷಗಳ ರಂಗ ಒಂದೇ ಚಿಹ್ನೆಯಲ್ಲಿ ಸ್ಪರ್ಧಿಸುತ್ತಿವೆ. ಬಾಂಗ್ಲಾದೇಶ ಕಮ್ಯುನಿಸ್ಟ್ ಪಕ್ಷ ಮತ್ತು ಎಡ ಪಕ್ಷಗಳು ಕೆಲವು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ.

ಇಂತಹ ಸನ್ನಿವೇಶದಲ್ಲಿ ಬಾಂಗ್ಲಾದೇಶದ ಸಂಸತ್ತಿಗೆ ಚುನಾವಣೆ ನಡೆಯುತ್ತಿದೆ. ವಿರೋಧ ಪಕ್ಷದ ನಾಯಕಿ ಜೈಲಿನಲ್ಲಿ ಇದ್ದಾರೆ. ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಯಲೆಂದು ಆಶಿಸಬೇಕಾಗಿದೆ. ●

JANASHAKTHI KANNADA VARA PATRIKE DECEMBER 3-9, 2018 Price: Rs. 10/- Date of Publication: 30 NOVEMBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

‘ರೈತರಿಗಾಗಿ ದೇಶ’

ರೈತ ಸಂಘಟನೆಗಳು ವಿಶೇಷ ಪಾಲಿಮೆಂಟ್ ಅಧಿವೇಶನಕ್ಕೆ ಒತ್ತಾಯಿಸಿ ನವೆಂಬರ್ 29–30ರಂದು ‘ದಿಲ್ಲಿ ಚಲೊ’ ಮತ್ತು ‘ಕಿಸಾನ್ ಮುಕ್ತಿ ಸಂಘರ್ಷ’ ಘೋಷಿಸುತ್ತಿದ್ದಂತೆ, ದೇಶದಾದ್ಯಂತ ಇತರ ಜನವಿಭಾಗಗಳಿಂದ ಅಭೂತಪೂರ್ವ ಸೌಹಾರ್ದ ಬೆಂಬಲ ಸಿಕ್ಕಿದ್ದು ವಿಶೇಷ ಬೆಳವಣಿಗೆ. ಈ ಬೆಳವಣಿಗೆಗೆ ಇಂಬು ಕೊಟ್ಟು ಖ್ಯಾತ ಪತ್ರಕರ್ತ ಮತ್ತು ರೈತ ವಿಷಯಗಳ ತಜ್ಞ ಪಿ ಸಾಯಿನಾಥ್ ದೇಶದಾದ್ಯಂತ ಸಂಚರಿಸಿದ್ದು ಇನ್ನಷ್ಟು ಅದು ವ್ಯಾಪಕವಾಗಿ ಬೆಳೆಯಲು ಸಾಧ್ಯವಾಯಿತು. ದೇಶದಾದ್ಯಂತ ‘ರೈತರಿಗಾಗಿ ದೇಶ’ ಎಂಬ ಸಂಘಟನೆಯನ್ನು ಹುಟ್ಟು ಹಾಕಲು ಸಾಧ್ಯವಾಯಿತು. ದೇಶದ ಹಲವಾರು ಕಡೆ ರೈತರ ದೆಹಲಿ ರ್‍ಯಾಲಿ ದಿನಗಳ ಮೊದಲೇ ಮತ್ತು ಆ ದಿನಗಳಂದು ಹಲವು ಜನವಿಭಾಗಗಳು ಕಲಾವಿದರು, ಕಾರ್ಮಿಕರು, ಮಹಿಳೆಯರು, ಡಾಕ್ಟರುಗಳು, ವಕೀಲರು ಇತ್ಯಾದಿ ಬೆಂಬಲಾರ್ಥ ಹಲವು ಕಾರ್ಯಕ್ರಮ, ಸಭೆ, ಸಮಾವೇಶಗಳನ್ನು ನಡೆಸಿದರು. ಒಂದು ಆನ್ ಲೈನ್ ಸಹಿ ಸಂಗ್ರಹ ಚಳುವಳಿ ಸಹ ನಡೆಯಿತು. ಹಲವಾರು ಕಲಾವಿದರು ಕಲಾತ್ಮಕ ಪೋಸ್ಟರುಗಳನ್ನು ರಚಿಸಿದರು. ಸಾಯಿನಾಥ್ ಅವರು ಈ ಹಿನ್ನೆಲೆಯಲ್ಲಿ ಬೆಂಗಳೂರಿಗೂ ಬಂದಿದ್ದು, ಕರ್ನಾಟಕ ಸಹ ಈ ನಿಟ್ಟಿನಲ್ಲಿ ಹಿಂದೆ ಬೀಳಲಿಲ್ಲ.

ಕರ್ನಾಟಕದಲ್ಲಿ “ರೈತರಿಗಾಗಿ ದೇಶ’ದ ಘೋಷಣೆಯಡಿಯಲ್ಲಿ ನಡೆದ ಕೆಲವು ಕಾರ್ಯಕ್ರಮಗಳ ಕಿರುವರದಿ, ಚಿತ್ರಗಳು ಮತ್ತು ಪೋಸ್ಟರುಗಳು ಇಲ್ಲಿವೆ.



ರೈತರಿಗಾಗಿ ಕಾರ್ಮಿಕರು

‘ರೈತರಿಗಾಗಿ ಕಾರ್ಮಿಕರು’ ಸೌಹಾರ್ದ ಬೆಂಬಲ ಸಭೆಯನ್ನು ನವೆಂಬರ್ 30, ಮಧ್ಯಾಹ್ನ 3ಗಂಟೆಗೆ, ಟೌನ್ ಹಾಲ್ ಮುಂಭಾಗ ಸಿಐಟಿಯು, ಬೆಂಗಳೂರು ಉತ್ತರ–ದಕ್ಷಿಣ ಜಿಲ್ಲಾ ಸಮಿತಿಗಳಿಂದ ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಕಾಂ.ಜಿ.ಎನ್.ನಾಗರಾಜ್, ಆರ್.ಶ್ರೀನಿವಾಸ್, ಕೆ.ಎನ್.ಉಮೇಶ್, ಹೆಚ್.ಎನ್.ಗೋಪಾಲಗೌಡ ಮಾತನಾಡಿದರು. ಕಾಂ.ಗೋಪಾಲಕೃಷ್ಣ ಅರಳಹಳ್ಳಿ, ಎನ್.ಪ್ರತಾಪ್ ಸಿಂಹ, ಪಿ.ಮುನಿರಾಜು, ಬಿ.ಎನ್.ಮಂಜುನಾಥ್, ಮುಂತಾದವರು ಭಾಗವಹಿಸಿದ್ದರು.



ರೈತರಿಗಾಗಿ ಮಹಿಳೆಯರು

ನವೆಂಬರ್ 27 ಸಂಜೆ 4ಕ್ಕೆ ಬೆಂಗಳೂರಿನ ಬಿ.ಬಿ.ಎಂ.ಪಿ ಸರ್ಕಲ್ ನಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಒಂದು ಪ್ರದರ್ಶನ ಹಮ್ಮಿಕೊಂಡಿತ್ತು. ಅಲ್ಲಿಯೂ ರೈತರನ್ನು ಬೆಂಬಲಿಸುವ ಪೋಸ್ಟರುಗಳನ್ನು ಬಿಡುಗಡೆ ಮಾಡಲಾಯಿತು.





ಮೈಸೂರಿನಲ್ಲಿ

ಮೈಸೂರಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆಯಿಂದ ರೈತರ ಬೆಂಬಲಾರ್ಥ ನವೆಂಬರ್ 29 ರಂದು ಮೈಸೂರು ಡಿಸಿ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು..

ಸಾಂಸ್ಕೃತಿಕ ಸಮಾವೇಶ

ನವೆಂಬರ್ 24 ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ನ ಅಕ್ಕಮಹಾದೇವಿ ಸಭಾಂಗಣದಲ್ಲಿ ಒಂದು ಸಾಂಸ್ಕೃತಿಕ ಸಮಾವೇಶ ನಡೆಯಿತು. ಎಲ್ಲಾ ಕ್ಷೇತ್ರದ ಕಲಾವಿದರು ಭಾಗವಹಿಸಿದ್ದರು. ಸಾಹಿತ್ಯ–ಕಲೆಯ ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸಿದ್ದ ಒಬ್ಬರು ಸಾಂಕೇತಿಕವಾಗಿ ವೇದಿಕೆಯಲ್ಲಿದ್ದರು. ಬರಗೂರು ರಾಮಚಂದ್ರಪ್ಪನವರು ಮುಖ್ಯ ಭಾಷಣ ಮಾಡಿದರು. ವೇದಿಕೆಯ ಮೇಲೆ ಸಂಗೀತಗಾರ ವಿ. ಮನೋಹರ, ಸಾಹಿತಿ ಚಿಂತಕ ಮಾಡ್ನಾಕೂಡು ಚಿನ್ನಸ್ವಾಮಿ, ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ, ಹಾಡುಗಾರ್ತಿ ಅರ್ಚನಾ ಉಡುಪ, ಚಿತ್ರ ಕಲಾವಿದ ಪ.ಸ.ಕುಮಾರ್ ಇದ್ದು ಸಮಾವೇಶದಲ್ಲಿ ಮಾತನಾಡಿದರು. ಸಮಾವೇಶದಲ್ಲಿ ಮೂರು ಅತ್ಯಂತ ಕಲಾತ್ಮಕ ಪೋಸ್ಟರುಗಳನ್ನು ಬಿಡುಗಡೆ ಮಾಡಲಾಯಿತು. ಪ್ರೊ ಚಂದ್ರಶೇಖರ ಪಾಟೀಲ ಸಮಾರೋಪ ಭಾಷಣ ಮಾಡಿದರು. ಪತ್ರಕರ್ತ ಜಿ.ಎನ್. ಮೋಹನ್ ಕಾರ್ಯಕ್ರಮವನ್ನು ನಡೆಸಿಕೊಟ್ಟರು.



ತುಮಕೂರಿನಲ್ಲಿ

ಅನ್ನದಾತ ರೈತ.ಕೃಷಿ ಕೂಲಿಕಾರ ಸಂಘಟನೆಗಳು ದೆಹಲಿಯಲ್ಲಿ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲಿಸಿ ನವೆಂಬರ್ 30 ರಂದು ತುಮಕೂರಿನಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆ ಬೆಂಬಲಿಸಿ ಹಿರಿಯರಾದ ಪ್ರೊ: ಕೆ.ದೊರೆರಾಜು, ಸಿ.ಯತಿರಾಜು, ಡಮರುಗ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮಿನಾಕ್ಷಿ ಸುಂದರಂ. ಸ್ಲಂ ಜನಂದೋಲನದ ಎ.ನರಸಿಂಹ ಮೂರ್ತಿ, ಪ್ರಾಂತ್ಯ ರೈತ ಸಂಘಟನೆಯ ಅಜ್ಜಪ, ಉಮೇಶ್, ಸಿಪಿಐ.(ಎಂ) .....ಗಳ ನೂರಾರು ಕಾರ್ಯಕರ್ತರು ಸ್ವಾತಂತ್ರ್ಯ ಚೌಕ ದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.






* ಭೋಗ ಪರವಾದ ಕಾರ್ಪೊರೇಟ್ ವಲಯ ಜೀವಪರವಾದ ಕೃಷಿ ವಲಯ, ಯಾವುದಾಗಬೇಕು ನಮ್ಮ ಆಯ್ಕೆ?
* ಸಾಂಸ್ಥಿಕ ಸಾಲಗಳು ಲಭ್ಯವಿಲ್ಲದ ರೈತ ಸಮೂಹ; ಅತಿಯಾಗಿ ಸಾಲ ಸೌಲಭ್ಯ ಪಡೆಯುವ ಕಾರ್ಪೊರೇಟ್ ವಲಯ. ಒಂದು ಅನ್ನಮೂಲ ಆರ್ಥಿಕ ವಲಯ; ಇನ್ನೊಂದು ಕನ್ನಮೂಲ ಆರ್ಥಿಕ ವಲಯ. ನಮ್ಮ ಬೆಂಬಲ ಅನ್ನಮೂಲ ಆರ್ಥಿಕ ವಲಯಕ್ಕೆ.

– ಬರಗೂರು ರಾಮಚಂದ್ರಪ್ಪ

ಅವರು ಕೆಡಹುವ ಕರಸೇವೆ ಮಾಡಿದರೆ ನಾವು ಕಟ್ಟುವ ಕರಸೇವೆ ಮಾಡೋಣ.

– ಪ್ರೊ. ಚಂಪಾ

ಕೃಪೆ: ಪಿ. ಮಹಮ್ಮದ್





ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**